BL/G43

# ಚನ್ನಬಸವೇಶ್ವರನ ವಚನಗಳು

ಹಳಕಟ್ಟಿ ಫ.ಗು.

950
6779

ಸಂಶೋಧನ ಕೇಂದ್ರ
ಅಂವೇ ಗುರು
ಕ್ರಮಾಂಕ ೯೫೦ / ೬೭೭೯
ಶಿವಬಸವ ನಗರ
ಬೆಳಗಾವಿ ೧೦

ಶಿವಾನುಭವ ಗ್ರಂಥಮಾಲಾ ನಂ|| ೩೨

93

# ಶ್ರೀ ಚನ್ನಬಸವೇಶ್ವರನ ವಚನಗಳು.

ಸಂಪಾದಕರು.

ರಾ|| ಸಾ|| ಫ. ಗು. ಹಳಕಟ್ಟಿ

ಬಿ. ಎ. ಎಲ್. ಎಲ್. ಬಿ.

ಕ್ರಮಾಂಕ 950 / 67379

ಬೆಲೆ ೧೨ ಆಣೆ.

(ಈ ಗ್ರಂಥದ ಸ್ವಾಮಿತ್ವವು ಸಂಪಾದಕರ ಕಡೆಗೆ ಇರಲ್ಪಟ್ಟಿದೆ.)

# ಪ್ರಸ್ತಾವನೆ.

ಚನ್ನಬಸವೇಶ್ವರನ ವಚನಗಳನ್ನು ಎರಡು ಹಸ್ತಲಿಖಿತ ಪ್ರತಿಗಳ ಸಹಾಯದಿಂದ ಸಿದ್ಧಪಡಿಸಿ ಮುದ್ರಿಸಿರುತ್ತೇವೆ. ಅವುಗಳಲ್ಲಿ ಒಂದು ಪ್ರತಿಯು ವಿಜಾಪುರದಲ್ಲಿ ಶಿ. ಮೂ. ಸೊಪ್ಪಯ್ಯನವರ ಮಠದಲ್ಲಿ ದೊರೆತದ್ದು, ಮತ್ತೊಂದು ಗೋಕಾವಿಯಲ್ಲಿ ಡಾ. ಎಸ್. ಸಿ. ನಂದೀಮಠ ಎಮ್. ಎ. (ಪಿ: ಎಚ್. ಡಿ.). ಇವರು ದೊರಕಿಸಿ ಕಳುಹಿಸಿದ್ದು. ಎರಡೂ ಪ್ರತಿಗಳು ಅಷ್ಟು ಶುದ್ಧವಾದವುಗಳಲ್ಲ. ಇವುಗಳಲ್ಲಿ ಗೋಕಾವಿಯ ಪ್ರತಿಯು ಹೆಚ್ಚಿಗೆ ಶುದ್ಧವಾದದ್ದಿದ್ದು ಅದನ್ನೇ ಮುಖ್ಯವಾಗಿ ಅವಲಂಬಿಸಿ ಈಗಿನ ಪ್ರತಿಯನ್ನು ಸಿದ್ಧಗೊಳಿಸಿದ್ದೇವೆ. ಚನ್ನಬಸವೇಶ್ವರನ ವಚನಗಳ ಹಳೇಪ್ರತಿಗಳು ಇದ್ದವರು ಅವುಗಳನ್ನು ನಮ್ಮ ಕಡೆಗೆ ಕಳಿಸಿದಲ್ಲಿ ನಾವು ಅವರಿಗೆ ಬಹಳ ಆಭಾರಿಯಾಗುವೆವು. ಅವುಗಳ ಸಹಾಯದಿಂದ ಹೆಚ್ಚಿಗೆ ಶುದ್ಧವಾದ ಪ್ರತಿಯನ್ನು ಮುಂದೆ ಹೊರಡಿಸಲು ನಮಗೆ ಬಹಳ ಅನುಕೂಲವಾಗುವದು.

ಚನ್ನಬಸವನ ವಚನಗಳಾದರೂ ಅತ್ಯಂತ ಮಹತ್ವವಾದವುಗಳು ಇವೆ. ಇವುಗಳಲ್ಲಿ ಆಚಾರ ವಿಷಯಕವಾದ ವಚನಗಳು ಹೆಚ್ಚಾಗಿ ತೋರಿಬರುತ್ತವೆ. ವೀರಶೈವ ಆಚಾರಗಳ ಮರ್ಮಗಳನ್ನು ತಿಳಿಯಲಿಚ್ಛಿಸುವವರಿಗೆ ಇವು ಬಹಳ ಸಹಾಯಕವಾಗದೆ ಇರವು.

ಚನ್ನಬಸವೇಶ್ವರನು ಬಸವೇಶ್ವರರ ಕಾಲದಲ್ಲಿ ಅತ್ಯಂತ ಮಹತ್ವದ ಪುರುಷನಾಗಿ ಹೋಗಿರುವನು. ಅವನು ಕೇವಲ ಧಾರ್ಮಿಕ ಪ್ರಸಾರ ಕಾರ್ಯವಲ್ಲಷ್ಟೇ ಅಲ್ಲ, ಅನೇಕ ರಾಜಕೀಯ ಕಾರ್ಯಗಳಲ್ಲಿಯೂ ಬಸವೇಶ್ವರನಿಗೆ ಅತ್ಯಂತ ಸಹಾಯಕನಾಗಿ ವರ್ತಿಸಿದನು. ಅವನ ಚರಿತ್ರೆಯು ಬಹಳ ಮಹತ್ವದ್ದಾಗಿರುವದು. ಆದರೆ ಇದನ್ನೆಲ್ಲ ನಾವು ಈ ಪ್ರಸ್ತಾವನೆಯಲ್ಲಿ ಉಲ್ಲೇಖಿಸುವದು ಅಪ್ರಸ್ತುತವಾದ್ದರಿಂದ ಅದನ್ನು ಇಲ್ಲಿ ಸಮಾಲೋಚಿಸುವ ಅವಶ್ಯವಿರುವದಿಲ್ಲ.

ಚನ್ನಬಸವೇಶ್ವರನ ವಚನಗಳು ಈ ಗ್ರಂಥಗಳಲ್ಲಿರುವವಲ್ಲದೆ ಇನ್ನೂ ಅನೇಕವುಗಳು ಉಪಲಬ್ಧವಿರುತ್ತವೆ. ಅವೆಲ್ಲವುಗಳನ್ನು ಈಗಿನ ಸಂಗ್ರಹಕಾರನು ಇದರಲ್ಲಿ ಸಂಗ್ರಹಿಸಿರುವದಿಲ್ಲ ಅವನು ಈಗಿನ ಗ್ರಂಥವನ್ನು ಚನ್ನಬಸ

ವ್ವನ ಷಟ್‌ಸ್ಥಲ ವಿಚಾರಗಳನ್ನು ಅರುಹುವ ಉದ್ದೇಶದಿಂದ, ಅವಶ್ಯವಿದ್ದಷ್ಟೇ ವಚನಗಳನ್ನು ಆರಿಸಿ ಗ್ರಂಥದಲ್ಲಿ ನಿರೂಪಿಸಿರುವನು. ಈ ನಿರೂಪಣೆಯು ಸರ್ವ ಮಾನ್ಯವಾಗಿರುವದರಿಂದ, ಈ ಗ್ರಂಥವನ್ನು ಇದ್ದಕ್ಕಿದ್ದ ಹಾಗೆಯೇ ನಾವು ಪ್ರಕಟಿಸಿರುತ್ತೇವೆ.

ಈ ಗ್ರಂಥವನ್ನು ಅಚ್ಚುಹಾಕುವ ಕಾರ್ಯದಲ್ಲಿ ನಮಗೆ ಅತ್ಯಂತ ಪ್ರೋತ್ಸಾಹ ಮತ್ತು ಸಹಾಯ ಮಾಡಿದಂಥವರು ಹುಬ್ಬಳ್ಳಿಯ ರಾ. ರಾ. ವಿರೂಪಾಕ್ಷಪ್ಪ ಶಿವಲಿಂಗಪ್ಪ ಪಾವಟೆ ಈ ಮಹನೀಯರಾಗಿರುವರು. ಇವರು ಷಟ್‌ಸ್ಥಲ ಶಾಸ್ತ್ರದ ಮತ್ತು ಶಿವಾನುಭವದ ಅತ್ಯಂತ ಪ್ರೇಮಿಗಳಾಗಿರುವರು. ಶಿವಾನುಭವ ಪತ್ರಿಕೆಯ ಮೊದಲಿನ ಮೂರು ಸಂಚಿಕೆಗಳು ಹೊರಟಕೂಡಲೆ ಇವರು ಕೆಳಗೆ ಕಾಣಿಸಿದಂತೆ ನಮಗೆ ಪತ್ರವನ್ನು ಬರೆದಿರುವರು. ಇದು ಅವರ ಉದಾತ್ತ ಭಾವವನ್ನು ಚನ್ನಾಗಿ ವ್ಯಕ್ತಪಡಿಸುತ್ತದೆ. ಅದು ಏನೆಂದರೆ:— "ಈಗ ತಾವು ಬಹು ಪ್ರಯಾಸಪಟ್ಟು ನಮ್ಮ ಶರಣ ಸಮುದಾಯದ ಹಿತವಚನಗಳ ಸಾರವನ್ನೂ, ವೀರಶೈವರಲ್ಲಿ ಒಂದಾನೊಂದು ಕಾಲದಲ್ಲಿ ಬಹು ಘನತೆಗೇರಿ ರಾಜ್ಯಭಾರ ಮಾಡಿದ ಶೂರ ಸ್ತ್ರೀಪುರುಷರ ಚರಿತ್ರೆಗಳನ್ನೂ ಒಳಕೊಂಡಿರುವ ತಮ್ಮ ಸಂಪಾದಕತ್ವದಲ್ಲಿ ಹೊರಡುತ್ತಿರುವ ಶಿವಾನುಭವದ ಮೂರು ಸಂಚಿಕೆಗಳು ನನ್ನ ಕೈಸೇರಿ ನೋಡಲಾಗಿ ಆನಂದಭರಿತನಾದೆನು. ಈ ಸುಧಾರಣಾ ಕಾಲದಲ್ಲಿ ಅನೇಕವಾದ ಪತ್ರಿಕೆಗಳೂ ಮಾಸಪತ್ರಿಕೆಗಳೂ ಹೊರಡುತ್ತಲಿವೆ. ಆದರೆ ಕೇವಲ ಧಾರ್ಮಿಕ ಭಾವನೆಯುಳ್ಳಂಥ ಪತಿತರನ್ನು ಪಾವನ ಮಾಡಿದವರ ಮಹತ್ವವನ್ನು ಕೊಂಡಾಡುವಂಥ ವೀರಶೈವ ಜನಸಾಮಾನ್ಯಕ್ಕೆ ಸುಲಭವಾಗಿ ಬಹು ಬೇಗ ತಿಳಿಯು ಜ್ಞಾನೋದಯವಾಗುವಂಥ ಯಾವ ಪತ್ರಿಕೆಯೂ ಇಲ್ಲೆಂದರೆ ಅತಿಶಯೋಕ್ತಿಯಾಗಲಾರದು. ಅಂಥ ದೊಡ್ಡ ಕೊರತೆಯನ್ನು ಶಿವಾನುಭವವು ದೂರಮಾಡಿರುತ್ತದೆ. ಇದು ಸಣ್ಣ ಕಾರ್ಯವಲ್ಲ.

ಸರ್ವಾಂಗ ಸುಂದರ ಸರ್ವೋತ್ಕೃಷ್ಟ ಶಿವಾನುಭವವು ಚಿರಾಯುವಾಗಿ ನಡೆಯಬೇಕಾದರೆ ದ್ರವ್ಯ ಸಹಾಯವು ಅವಶ್ಯವಾಗಿ ಬೇಕು. ಅಂಥ ಅಡಚಣಿಯು ಶಿವಾನುಭವಕ್ಕೆ ಎಂದೂ ಬರಬಾರದೆಂದು ನಮ್ಮ ಸಮಾಜದ ಮುಖ್ಯ ಗುರುಗಳು ಧನ ಸಹಾಯ ಮಾಡಿ ಮೂಲಭಾಂಡವಲು ಮಾಡಿಕೊಡಬೇಕೆಂದು ದಿವ್ಯ ಚಿತ್ತಕ್ಕೆ ನನ್ನ ಅರಿಕೆಯುಂಟು. ಈ ಭಂಡವಲಕ್ಕೆ ಧರ್ಮ ಕಳಕಳಿಯುಳ್ಳ ವೀರಶೈವಾಭಿಮಾನಿಗಳೆಲ್ಲರು

ಉದಾರ ಬುದ್ಧಿಯಿಂದ ಸಹಾಯ ಮಾಡಿ ಶಿವಾನುಭವವು ಸುವ್ಯವಸ್ಥಿತ ರೀತಿಯಿಂದ ಸಾಗುವಂತೆ ಮಾಡಿ ಕೀರ್ತಿಶೇಷರಾಗಬೇಕು.

ಶಿವಾನುಭವದ ಮೇಲಿನ ನನ್ನ ಅತ್ಯಂತ ಪ್ರೇಮಕ್ಕಾಗಿ ಶಿವಲೋಕವನ್ನೈದಿದ ನನ್ನ ತಂದೆ ತಾಯಿಗಳ ಉಪಕಾರ ಸ್ಮರಣಾರ್ಥಕ್ಕಾಗಿ ಬಸವಾದಿ ಪ್ರಮಥರ ಅನುಗ್ರಹದಿಂದ ಸನ್ ೧೯೧೮ ನೇ ಇಸ್ವಿಯಲ್ಲಿ ಇಂಡಿಯಾ ಪ್ರಾವಿಡೆಂಟ ಇನಶೂರನ್ಸ ಕಂಪನಿ ಕಲಕತ್ತಾ ಇವರಲ್ಲಿ ನಾನು ಉತಾರಿಸಿದ ೯೧೪೦ ನೇ ನಂಬರಿನ ಪಾಲಿಸಿ ಹಕ್ಕನ್ನು ಸಂಪೂರ್ಣವಾಗಿ ತಮ್ಮ ಶಿವಾನುಭವಕ್ಕೆ ನಿರ್ಮಲಮನಸ್ಸಿನಿಂದ ಭಕ್ತಿ ಪೂರ್ವಕವಾಗಿ ಅರ್ಪಣಮಾಡಿರುತ್ತೇನೆ. ದಯ ಮಾಡಿ ಸ್ವೀಕರಿಸಬೇಕೆಂದು ಬಹು ನಮ್ರತೆಯಿಂದ ಬೇಡಿಕೊಳ್ಳುತ್ತೇನೆ.

ಹುಬ್ಬಳ್ಳಿ ಶರಣಸೇವಕ

ತಾ. ೧-೯-೨೬ **ವಿರುಪಾಕ್ಷಪ್ಪ ಶಿವಲಿಂಗಪ್ಪ ಪಾವಟೆ.**

ಈ ಪ್ರಕಾರ ರಾ. ರಾ. ವಿರುಪಾಕ್ಷಪ್ಪನವರು ನಮಗೆ ಪತ್ರ ಬರೆದಿದ್ದು ಇದು ಅವರ ಉಚ್ಚ ಮತ್ತು ಉದಾರ ಅಂತಃಕರಣವನ್ನು ಚನ್ನಾಗಿ ವ್ಯಕ್ತಪಡಿಸುತ್ತದೆ. ಅವರ ಪಾಲಿಸಿಯ ಅವಧಿಯು ಹೋದ ವರ್ಷ ಮುಗಿದ ಬಳಿಕ ಇದೇ ವರ್ಷ ಫೇಬರವರಿ ತಿಂಗಳಿನಲ್ಲಿ ಅವರು ಇದರ ಸಂಬಂಧದ ೨೫೦೦ ರೂಪಾಯಿಗಳನ್ನು ನಮ್ಮ ಕಡೆಗೆ ಕಳಿಸಿಕೊಟ್ಟರು. ಕಳಿಸಿಕೊಡುವ ಕಾಲಕ್ಕೆ ಅವರು ತಮ್ಮ ತಾಯಿತಂದೆಗಳ ಸ್ಮರಣಾರ್ಥ ಒಂದು ವಚನಗ್ರಂಥವನ್ನು ಪ್ರಸಿದ್ಧಪಡಿಸಬೇಕೆಂದು ಅಪೇಕ್ಷಿಸಿದ್ದರಿಂದ ವಚನ ಗ್ರಂಥಗಳಲ್ಲಿ ಅತ್ಯಂತ ಮಹತ್ವದ್ದಾದ ಈ ಚನ್ನಬಸವೇಶ್ವರನ ವಚನವು ಅವರ ಹೆಸರಿನಿಂದ ಈಗ ಪ್ರಸಿದ್ಧಿಸಲ್ಪಟ್ಟಿದೆ. ರಾ. ರಾ. ವಿರುಪಾಕ್ಷಪ್ಪ ಪಾವಟೆ ಇವರು ಕಳಿಸಿದ ಹಣವು ಈಗಿನ ಸಾಂಪತ್ತಿಕ ಅವನತಿಯ ಕಾಲದಲ್ಲಿ ನಮಗೆ ಬಹಳ ಸಹಾಯವನ್ನೀಯಿತು. ಇದಕ್ಕೋಸ್ಕರ ನಾವು ಅವರಿಗೆ ಅತ್ಯಂತ ಋಣಿಯಾಗಿದ್ದೇವೆ.

ರಾ. ರಾ. ವಿರುಪಾಕ್ಷಪ್ಪನವರ ಚರಿತ್ರಾಂಶಗಳನ್ನು ಇಲ್ಲಿ ಕೊಡುವದು ಅವಶ್ಯವಾಗಿರುತ್ತದೆ. ಇವರ ಮೂಲ ಗ್ರಾಮವು ಬೆಳಗಾವ ಜಿಲ್ಹಾ ಗೋಕಾಕ ತಾಲೂಕಿನಲ್ಲಿರುವ ಮಮದಾಪುರವು. ಇವರ ಅಜ್ಜಂದಿರ ಹೆಸರು ಸಂಗನಬಸವಪ್ಪನವರು. ಸಂಗನಬಸವಪ್ಪನವರಿಗೆ ದುಂಡಪ್ಪ,

ಮಾದಪ್ಪ, ಶಿವಲಿಂಗಪ್ಪ, ಮತ್ತು ರಾಚಪ್ಪ ಎಂಬ ನಾಲ್ವರು ಮಕ್ಕಳಿದ್ದು ಇವರಲ್ಲಿ ಮೂರನೆಯವರಾದ ಶಿವಲಿಂಗಪ್ಪನವರೇ ರಾ. ರಾ. ವಿರುಪಾಕ್ಷಪ್ಪನವರ ತಂದೆಯವರು. ಇವರ ಮಾತೋಶ್ರೀಯವರ ಹೆಸರು ಶಿವಲಿಂಗವ್ವನವರು. ರಾ. ರಾ. ವಿರುಪಾಕ್ಷಪ್ಪನವರು ೧೯೦೩ ನೇ ಇಸ್ವಿಯಲ್ಲಿ ವಿದ್ಯಾಭ್ಯಾಸಕ್ಕೋಸ್ಕರ ಹುಬ್ಬಳ್ಳಿಗೆ ಬಂದರು. ಆದರೆ ಅಲ್ಲಿ ಅವರಿಗೆ ವಿಶೇಷ ಸಹಾಯ ಸೌಕರ್ಯಗಳು ಸಿಗದ್ದರಿಂದ ಅವರ ಅಭ್ಯಾಸವು ಕನ್ನಡದ ಪೂರ್ತೆ ಮಾತ್ರ ಆಯಿತು. ಆದರೆ ಮುಂದೆ ಅವರು ಹುಬ್ಬಳ್ಳಿಯಲ್ಲಿಯೇ ವ್ಯವಹಾರದಲ್ಲಿ ತೊಡಗಿದ್ದರಿಂದ ಅವರಿಗೆ ಮನೆತನದ ತೊಡಕುಗಳು ದೂರಾದವು. ಮತ್ತು ಅವರ ತಂದೆತಾಯಿಗಳೇ ವರೂ ಹುಬ್ಬಳ್ಳಿಗೆ ಬಂದು ಇಲ್ಲಿಯೇ ಇರಹತ್ತಿದರು. ಅವರ ತಂದೆಯವರು ೧೯೧೮ನೇ ಇಸ್ವಿಯಲ್ಲಿ ತಮ್ಮ ೬೪ನೇ ವಯಸ್ಸಿನಲ್ಲಿ ಕೈಲಾಸವಾಸಿಗಳಾದರು. ತಾಯಿಯವರು ತಮ್ಮ ೫೮ನೇ ವಯಸ್ಸಿನಲ್ಲಿ ೧೯೨೫ರಲ್ಲಿ ಶಿವಾಧೀನರಾದರು. ರಾ. ರಾ. ವಿರುಪಾಕ್ಷಪ್ಪನವರಿಗೆ ಒಬ್ಬ ಹೆಣ್ಣುಮಗಳೂ ಇಬ್ಬರು ಗಂಡುಮಕ್ಕಳೂ ಇರುವರು. ಮತ್ತು ಅವರು ತಮ್ಮ ಚರಿತಾರ್ಥವನ್ನು ಸಮಾಧಾನಕರವಾಗಿ ಸಾಗಿಸುತ್ತಲಿರುವರು. ಇವರು ಶಿವಶರಣರ ವಿಚಾರಗಳಲ್ಲಿ ವಿಶೇಷ ಪ್ರೀತಿಯನ್ನು ವಹಿಸಿ ಶಿವಾನುಭವ ಕಾರ್ಯಗಳಲ್ಲಿ ಯಾವಾಗಲೂ ಉತ್ಸುಕರಾಗಿರುವರು. ಇವರು ಶಿವಾನುಭವಕ್ಕೋಸ್ಕರ ಮಾಡಿದ ಸಹಾಯಕ್ಕೋಸ್ಕರ ನಾವು ಬಹಳ ಆಭಾರಿಯಾಗಿದ್ದೇವೆ.

**ವಿಜಾಪುರ.**
ತಾ. ೧—೮—೧೯೩೭

**ಫ. ಗು. ಹಳಕಟ್ಟಿ**
ಸಂಪಾದಕ.

# ಚೆನ್ನಬಸವೇಶ್ವರನ ವಚನಗಳು.

ಚೆನ್ನಬಸವೇಶ್ವರ ದೇವರು ನಿರೂಪಿಸಿದ ಷಟ್‌ಸ್ಥಲದನುಭಾವದ ವಚನ. ಈ ವಚನದ ಸ್ಥಳ ಕುಳ ಹೇಗೆಂದು ಶ್ರೀಗುರುರಾಯಂಗೆ ಶಿಷ್ಯನು ಬಿನ್ನೈಸಿದ ಬಿನ್ನಹವು.

ಆಚರಣೆಯು ಸ್ಥಲವನರಿದು ತಾ। ವಾಚರಿಸಲ್ಬಲ್ಲರಾಗಿ ಅನುಭವಸ್ಥಲಿವ॥ ಸೂಚನೆಯನೆತ್ತಿ ಎನ್ನೊಳು। ಯೋಚಿಸಿದ ಸದ್ಗುರುವೆ ಬಸವ ಸಂಗ ಸದಾಶಿವ ॥೧॥

ಎಂದು ಹೀಗೆಂದು ಗುರುನಿರೂಪಣೆ॥

ಚನ್ನಬಸವೈಯ್ಯನನುಭವ। ಉನ್ನತ ಉಪದೇಶ ನಿನಗೆ ತಿಳಿಯಪೇಳ್ವೆ॥ ನಿನ್ನ ಮನದ ತಮಂಧವಳಿಯಲ್। ಅನ್ವಯಮಂ ಕೇಳು ನಿನಗೆ ತಿಳಿಯ ಪೇಳ್ವೆಂ ॥೨॥

ಎಲ್ಲ ವಚನಂಗಳೊಳಾ। ಗುಹ್ಯಸ್ಥಳಕುಳದ ಸೂಕ್ಷ್ಮಸೂಕ್ಷ್ಮವತುಂಬಿ॥ ಇಲ್ಲಿಯೆ ಅನುಭವ ಸಂಪೂರ್ಣವಾಗಿ। ಎಲ್ಲವ ತೋರುವೆನು ಕೇಳು ಅರಿಮುದು ಮುದದಿಂ ॥೩॥

ಇನ್ನು ಬಸವರಾಜದೇವರು ನಿರೂಪಿಸಿದ ಆಚರಣೆಯ ಸ್ಥಲದ ವಚನ.

## ಆಚರಣೆಯುಸ್ಥಲ.

೧. ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ. ಮೆಲ್ಲಮೆಲ್ಲನೆ ಮಹೇಶ್ವರನೆನಿಸಿಕೊಂಬೆ. ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ. ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ. ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ. ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ. ಮೆಲ್ಲಮೆಲ್ಲನೆ ಷಟ್ಸ್ಥಲವ ಮೀರಿ ನಿರವಯಸ್ಥಲವನೆಯ್ದುವೆನೈಯ್ಯಾ ಕೂಡಲಸಂಗಮದೇವಾ.

ಎಂದು ಹೀಗೆಂದು ಬಸವರಾಜದೇವರು ನಿರೂಪಿಸಲು ಮರಳಿ ಚನ್ನಬಸವರಾಜದೇವರ್ಘು ನಿರೂಪಿಸಿದರು. ಈ ವಚನಾರ್ಥದನುಭಾವವನು ಬಣ್ಣಿಸಿ ನುಡಿವೆನು. ಮುಂದೆ ಅನುಭಾವಸ್ಥಲ. ಅನುಭಾವಸ್ಥಲದ ವಚನ.

## ಅನುಭಾವಸ್ಥಲ

೧. ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಹೇಶ್ವರ. ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ, ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ನಿತ್ಯನಾದೆನೆಂಬರು. ನಿಮ್ಮ ಶರಣರು. ತಾವೇನು ಮರುಜೀವಣಿಯು ಕೊಂಡಿದ್ದರೆ? ಅಮೃತ ಸೇವನೆಯ ಮಾಡಿದ್ದರೆ? ಆವ ಸ್ಥಲದಲ್ಲಿ ನಿಂದಿದ್ದರೂ ಆ ಸ್ಥಲದಲ್ಲಿ ಷಟ್‌ಸ್ಥಲವಾಗದಿದ್ದಡೆ, ಆ ಭಕ್ತನ ಬಾಯಲ್ಲಿ ಹುಡಿಮಣ್ಣ ಹೊಯ್ದು ಹೋಗನೆ ನಮ್ಮ ಕೂಡಲ ಚನ್ನಸಂಗಮದೇವಾ?

---

ಅದು ಕಾರಣವಾಗಿ ಆವ ಸ್ಥಲವನಂಗಂಗೊಂಡಿದ್ದರು, ಆ ಸ್ಥಲಕ್ಕೆ ತಕ್ಕ ತಕ್ಕ ರೂಪಾಗಿ, ಷಡ್ವಿಧ ಲಿಂಗವನು ಬೆರಸಿಪ್ಪ ಭೇದವನು ಇಲ್ಲಿ ಅನುಭಾವ ಸ್ಥಲದನುವನು ಈ ವಚನದಲ್ಲಿಯೇ ಸ್ಥಲವಿಟ್ಟು ತೋರುವೆನೆಂದು ಚನ್ನಬಸವೇಶ್ವರ ದೇವರು ನಿರೂಪಿಸಿದ ವಾಕ್ಯವು.

## ತಾಮಸನಿರಸನಸ್ಥಲ

ಪ್ರಥಮದಲ್ಲಿ ಭಕ್ತಸ್ಥಲ, ಆ ಸ್ಥಲಕ್ಕೆ ತಾಮಸ ನಿರಸನಸ್ಥಲ. ತಾಮಸನಿರಸನಸ್ಥಲದ ವಚನ.

೧. ಭಕ್ತರಾದೆವೆಂದು, ಯುಕ್ತಿಗೆಟ್ಟು ನುಡಿಯುವರು. ಭಕ್ತಿಸ್ಥಲವೆಲ್ಲರಿಗೆಲ್ಲಿಯದೋ? ಗುರುವಿನಲ್ಲಿ ತನುವಂಚನೆ, ಲಿಂಗದಲ್ಲಿ ಮನವಂಚನೆ, ಜಂಗಮದಲ್ಲಿ ಧನವಂಚನೆ, ಇಂತೀ ತ್ರಿವಿಧವಂಚನೆಯುಳ್ಳನ್ನಬರ ಭಕ್ತನೆ? ಅಲ್ಲ. ಗುರುವಿನಲ್ಲಿ ಚಾರಿತ್ರವನು ಲಿಂಗದಲ್ಲಿ ಲಕ್ಷಣವನು ಜಂಗಮದಲ್ಲಿ ಜಾತಿಯನರಸುವನ್ನಕ್ಕರ ಭಕ್ತನೆ? ಅಲ್ಲ. ಅವನು ದೋಷಾರ್ಥಿ. ಸಾಕ್ಷಿ॥ ಲಿಂಗಸ್ಯ ಪ್ರತಿಪಕ್ಷೇಣಾಂ। ಸದಾಚಾರೇಣ ವರ್ಜಿತಃ। ಗುರುಲಿಂಗಜಂಗಮ ದ್ವೇಷೀ ತೇನಾರಣ್ಯಾ ದುರಾತ್ಮಕಃ॥ ಇದು ಕಾರಣ ಕೂಡಲ ಚನ್ನಸಂಗಮದೇವಾ ಭಕ್ತಸ್ಥಲವೆಲ್ಲರಿಗೆಲ್ಲಿಯದೊ?

೨. ಸುರೆಯ ಮಡಕೆಗೆ ಬೂದಿಯನು ಹೂಸಿದರೇನು, ಒಳಗೆ ಶುದ್ಧವಾಗದನ್ನಕ್ಕರ? ಅದೆಂತೆಂದೊಡೆ, ಗುರುಕಾರುಣ್ಯ ನೆಲೆಗೊಂಡು, ಗುರು ಲಿಂಗಜಂಗಮ ಒಂದೆ ಎಂದು, ಕಾಣದನ್ನಕ್ಕರ? ॥ಸಾಕ್ಷಿ॥ ಏಕಮೂರ್ತಿ ಸ್ತ್ರಯೋರ್ಭಾಗಂ। ಗುರೋರ್ಲಿಂಗಂ ತು ಜಂಗಮಂ। ಜಂಗಮಂ ಚ ಗುರೋರ್ಲಿಂಗಂ। ತ್ರಿವಿಧಂ ಲಿಂಗಮುಚ್ಯತೆ॥ ಇದು ಕಾರಣ ಕೂಡಲ ಚನ್ನಸಂಗಮದೇವರಲ್ಲಿ ಸದಾಚಾರಪಲ್ಲರಿಗೇನುಸುರುವೆ?

೩. ಕಬ್ಬುನದ ಶುನಕನ ತಂದು ಪರುಷವ ಮುಟ್ಟಿಸಲೊಡನೆ ಹೊನ್ನ ಶುನಕನಪ್ಪುದಲ್ಲದೆ, ಪರುಷವಾಗಲರಿಯದು ನೋಡಾ! ಲೋಕದ ಮಾನವನ ತಂದು ಭಕ್ತನ ಮಾಡಿದೊಡೆ, ವೇಷಲಾಂಛನಿಯಹನಲ್ಲದೆ ಭಕ್ತನಾಗಲರಿಯ ನೋಡಾ. ಇದು ಕಾರಣ, ಕೂಡಲ ಚನ್ನಸಂಗಮ ದೇವಯ್ಯ ಮಜ್ಜನಕ್ಕೆರೆವ ಭವಿಗಳನೆಂತು ಭಕ್ತರೆಂಬೆನಯ್ಯಾ?

೪. ತದ್ದಿನವ ಮಾಡುವ ಕ್ರೂರ ಕರ್ಮಿಯ ಮನೆಯಲ್ಲಿ ಮದ್ಯ ಮಾಂಸವಲ್ಲದೆ, ಲಿಂಗಕ್ಕೋಗರವಿಲ್ಲ. ॥ಸಾಕ್ಷಿ॥ ತದ್ದಿನಂ ದಿನದೋಷಂ ಶ್ಚೋಣಿತಂ ಸುರಾಮಾಂಸಯೋಃ। ಸಂಕಲ್ಪಂ ಚ ವಿಕಲ್ಪಂ ಚ ನರಕೆ ಕಾಲಮಕ್ಷಯಂ॥ ಎಂದುದಾಗಿ, ಇಂತೀ ತ್ರಿವಿಧವಿಡಿದು ಮಾಡುವಾತ ಭಕ್ತನಲ್ಲ. ಅಲ್ಲಿ ಹೊಕ್ಕು ಲಿಂಗಾರ್ಚನೆಯ ಮಾಡುವಾತ ಜಂಗಮ ನಲ್ಲ. ಇದು ಕಾರಣವಾಗಿ ಕೂಡಲ ಸಂಗಮದೇವಯ್ಯ ಈ ತ್ರಿವಿಧವು ಳ್ಳವರು ನರಕಕ್ಕೆ ಭಾಜನ.

೫. ದಾಸಿಯರ ಸಂಗ ಕಸ ನೀರು ಹೊರಸಿತ್ತು. ವೇಶಿಯ ಸಂಗ ಎಂಜಲವ ತಿನಿಸಿತ್ತು. ಪರಸ್ತ್ರೀಯರ ಸಂಗ ಪಂಚಮಹಾಪಾತಕವ ತಂದಿತ್ತು. ಈ ತ್ರಿವಿಧವು ನಾಸ್ತಿಯಾದಲ್ಲದೆ ಭಕ್ತನಲ್ಲ. ಭಕ್ತಿ ಇಲ್ಲದೆ ಮುಕ್ತಿಗೆ ಸಲ್ಲ ನಮ್ಮ ಕೂಡಲಚನ್ನ ಸಂಗಯ್ಯನಲ್ಲಿ.

೬. ಅರಸಿನ ಹೆಸರಿಟ್ಟನಾಮಿಕನಂತೆ, ನಾಮಕ್ಕರುಹನಲ್ಲದೆ, ಪಟ್ಟ ಕ್ಕರುಹನಲ್ಲ. ಅದೆಂತೆಂದೊಡೆ, ಲಿಂಗ ಜಂಗಮದ ಪ್ರಸಾದದನುಭಾ ವದ ಹೆಸರ ಹೇಳಿಕೊಂಡು ಬದುಕುವರಲ್ಲದೆ, ವೇಷವ ಧರಿಸಿಪ್ಪಾಕೆಯ ಲಾಂಛನ ಧಾರಿಗಳೆಲ್ಲರು ಸತ್ಯ ಸಂಬಂಧ ಸಜ್ಜನ ಗುಣಕ್ಕೆ ಯೋಗ್ಯರೇ? ಅಲ್ಲ. ಇದು ಕಾರಣ ಕೂಡಲ ಚನ್ನಸಂಗಯ್ಯ ಸಹಜ ಸಜ್ಜನ ಸಂಬಂ ಧಿಗಳಲ್ಲದ ಭಕ್ತ ಮಹೇಶ್ವರರಂತಿರಲಿ.

೭. ತನುಮನ ಬಳಲದೆ, ಉದ್ದಂಡ ವೃತ್ತಿಯಲ್ಲಿ ಧನವ ಗಳಿಸಿ, ಗುರು ಲಿಂಗ ಜಂಗಮಕ್ಕೆ ವೆಚ್ಚಿಸಿ, ದಾಸೋಹ ಮಾಡಿ, ಭಕ್ತರಾದೆವೆಂಬವರ ಮುಖವ ತೋರದಿರಯ್ಯಾ ಎನಗೆ. ಅವ ಪರಧನ ಚೋರಕ. ಅವ ಪಾಪಿ ಕೋಪಿ ಪರಿಭ್ರಷ್ಟ. ಅವನ ಕಾಯಕವ ವಿಚಾರಿಸದೆ, ಉಪದೇಶವ ಕೊಟ್ಟ ಗುರುವಿಂಗೆ ರೌರವನರಕ. ಅವನ ಆಯತವ ವಿಚಾರಿಸದೆ, ಅವನ ಮನೆಯಲ್ಲಿ ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮಕೆ ಏಳನೆಯ ಪಾತಕ. ಇಂತಪ್ಪ ಗುರು ಶಿಷ್ಯ ಜಂಗಮದ ಬಾಳುವೆ ಹುಲಿ ಕಪಿಲೆಯ ತಿಂದು, ಮಿಕ್ಕಿದ ನರಿ ತಿಂದಂತಾಯಿತ್ತು ಕಾಣಾ ಕೂಡಲ ಚನ್ನಸಂಗಮದೇವ.

---

ಇಂತೀ ತಾಮಸ ನಿರಸನವ ಮಾಡಿದ ಸದ್ಭಕ್ತ ಸ್ಥಲದ ನಿರ್ದೇಶ. ಆ ಸ್ಥಲದನುಭಾವದ ವಚನ.

## ಭಕ್ತಸ್ಥಲ.

೧. ಕೃಷಿಕೃತ್ಯ ಆವ ಕಾಯಕದಿಂದಾದೊಡೇನು? ತನು ಮನ ಬಳಲಿಸಿ ಗಳಿಸಿ ತಂದು, ಗುರುಲಿಂಗಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ. ಅದೆಂತೆಂದೊಡೆ ಆತನ ತನು ಶುದ್ಧ, ಆತನ ಮನ ಶುದ್ಧ, ಆತನ ನಡೆ ಶುದ್ಧ, ನುಡಿ ಎಲ್ಲ ಪಾವನವು. ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು. ಅಂತಪ್ಪ ಸದ್ಭಕ್ತನ ಮನೆಯು ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ. ಇಂತಪ್ಪ ಗುರು ಶಿಷ್ಯ ಜಂಗಮಕ್ಕೆ ನಾನು ನೆರೆ ನಂಬಿ ನಮೋ ನಮೋ ಎಂಬೆನಯ್ಯಾ ಕೂಡಲಚನ್ನಸಂಗಮದೇವಾ.

೨. ಲಿಂಗವನರಿವಡೆ ಮನವೆ ನಿಚ್ಚಣಿಕೆ. ಜಂಗಮವ ನರಿವಡೆ ಧನವೆ ನಿಚ್ಚಣಿಕೆ. ಪ್ರಸಾದವನರಿವಡೆ ತನುವೆ ನಿಚ್ಚಣಿಕೆ. ಈ ತ್ರಿವಿಧವನರಿವಡೆ ತ್ರಿವಿಧ ನಿಚ್ಚಣಿಕೆ. ಇದು ಕಾರಣ ಕೂಡಲಚನ್ನಸಂಗಯ್ಯಾ ನಿಮ್ಮ ಶರಣರಿಗಲ್ಲದೆ ತ್ರಿವಿಧ ಸಂಪತ್ತಿಲ್ಲ.

೩. ಭಕ್ತನು ತಾನು ತಾನಾಗಿರಬೇಕು. ಸಕಲಪ್ರಾಣಿಗಳ ತನ್ನಂತೆ ಕಾಣಬೇಕು. ತನು ಮನ ಧನವ ಗುರುಲಿಂಗಜಂಗಮಕ್ಕೆ ಸವೆಯಿಸ

ಬೇಕು. ಅಪಾತ್ರ ದಾನವ ಮಾಡಲಾಗದು ಸಕಲೇಂದ್ರಿಯಂಗಳ ತನ್ನ ವಶವ ಮಾಡಬೇಕು. ಇದೆ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವಂ ಪಡೆವಡೆ, ಇದೆ ಸಾಧನ ನಮ್ಮ ಕೂಡಲಚನ್ನ ಸಂಗಯ್ಯನಲ್ಲಿ.

೪. ಶಿವಭಕ್ತಿಯುಳ್ಳವಂಗೆ ಕಾಮ ಬೇಡ ಕ್ರೋಧ ಬೇಡ ಲೋಭ ಬೇಡ ಮೋಹ ಬೇಡ ಮದ ಬೇಡ ಮತ್ಸರ ಬೇಡ. ಶಿವಭಕ್ತಿಯುಳ್ಳ ವಂಗೆ ಕಾಮ ಬೇಕು ಕ್ರೋಧ ಬೇಕು ಲೋಭ ಬೇಕು ಮೋಹ ಬೇಕು ಮದ ಬೇಕು ಮತ್ಸರ ಬೇಕು. ಬೇಕೆಂಬುದಕ್ಕಾವ ಗುಣ? ಬೇಡೆಂಬುದ ಕ್ಕಾವ ಗುಣ? ಕಾಮ ಬೇಕು ಲಿಂಗದಲ್ಲಿ ಕ್ರೋಧ ಬೇಕು ಕರಣಂಗಳಲ್ಲಿ ಲೋಭ ಬೇಕು ಪಾದೋದಕ ಪ್ರಸಾದದಲ್ಲಿ ಮೋಹಬೇಕು ಗುರುಲಿಂಗ ಜಂಗಮದಲ್ಲಿ ಮದಬೇಕು ಶಿವಾಚಾರ ಘನವೆಂಬಲ್ಲಿ ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ. ಇಂತೀ ಷಡ್ಗುಣವಿರಬೇಕು. ಬೇಡೆಂಬು ದಕ್ಕಾವ ಗುಣ? ಕಾಮ ಬೇಡ ಪರಸ್ತ್ರೀಯರಲ್ಲಿ ಮದ ಬೇಡ ಶಿವಭಕ್ತ ರಲ್ಲಿ ಕ್ರೋಧ ಬೇಡ ಗುರುವಿನಲ್ಲಿ ಲೋಭ ಬೇಡ ತನುಮನದಲ್ಲಿ ಮೋಹ ಬೇಡ ಸಂಸಾರದಲ್ಲಿ ಮದ ಬೇಡ ಶಿವಭಕ್ತರಲ್ಲಿ ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ ಇಂತೀ ಷಡ್ವಿಧಗುಣವನರಿದು ಮರೆಯಬಲ್ಲಡೆ ಆತನೆ ಸದ್ಭಕ್ತ ಕಾಣಾ ಕೂಡಲ ಚನ್ನಸಂಗಮದೇವಾ.

---

ಭಕ್ತನ ಆಚಾರಲಿಂಗಸ್ಥಲ. ಇಂತಪ್ಪ ಸದ್ಭಕ್ತ ಸ್ಥಲವನಂಗಂ ಗೊಂಡು ಇಪ್ಪಾತಂಗೆ ಷಡ್ವಿಧ ಲಿಂಗವು ಹೇಗೆ ಬೆರಸಿರ್ಪವೆಂದಡೆ ಅದಕ್ಕೆ ವಿವರ.

## ಭಕ್ತನ ಆಚಾರಲಿಂಗಸ್ಥಲ.

೧. ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ, ಆ ಭವಿಸಂಗ ಭಂಗ ವೆಂದರಿವುದು ನೋಡಾ. ಭವಿಮಿಶ್ರದ ಭಂಗಗಾರರು ನಮ್ಮ ಕೂಡಲ ಚನ್ನಸಂಗಮ ದೇವನಲ್ಲಿ ಅವರು ಅತ್ತಲು ಅಲ್ಲ ಇತ್ತಲು ಅಲ್ಲ.

೨. ಮಂಡಲ ಸುತ್ತಿದ ಹಾವಿನಂತೆ, ಮಂಡಲಲ್ಲಿ ಕಟ್ಟಿದ್ದರೇನು, ಕೊರಳ ಸುತ್ತಿದ ಹಾವಿನಂತೆ ಕೊರಳಲ್ಲಿ ಸುತ್ತಿದ್ದರೇನು, ಹುಸಿ ಕಳವು ಪರದಾರ ಅನ್ಯ ದೈವ ಭಜನೆ, ಭವಿ ಬಳಕೆ ಬಿಡದನ್ನಕ್ಕರ? ಲಿಂಗಭಕ್ತ ನೆನಿಸಬಾರದು. ಭಕ್ತ ಲಿಂಗವೆನಲಿಲ್ಲ. ಆಚಾರ ಸಹಿತ ಭಕ್ತ, ಅನಾ

ಚಾರ ಸಹಿತ ಸರರು ಇಂತೆನಲಾಗಿ ಆಚಾರ ಭ್ರಷ್ಟರಾದ ಅನಾಮಿಕರ ನವ್ಮ ಕೂಡಲ ಚನ್ನಸಂಗಯ್ಯ ಬಲ್ಲನಾಗಿ ಒಲ್ಲನು.

೩. ಅಂಗಾಶ್ರಮವಳಿದು ಲಿಂಗಾಶ್ರಮವಾದ ಬಳಿಕ ಆ ಲಿಂಗಕ್ಕೆ ಲಿಂಗಾಚಾರವಲ್ಲದೆ, ಅಂಗ ಕ್ರಿಯೆಯೆಂಬುದನಂಗೈಸರು ನೋಡಾ! ಲಿಂಗ ವಲ್ಲಿ ನೈಷ್ಠಿಕವಂತೆನಾದ ಬಳಿಕ ಅನ್ಯ ನಾಮವಿಡಿದು ಬಳಲುವ ಬಳ ಲಿಕೆ ಎಲ್ಲಿಹುದೋ? ಅನಾಚಾರವ ಜರಿದು, ಆಚಾರವನರಿದ ಬಳಿಕ, ನವ್ಮ ಕೂಡಲ ಚನ್ನಸಂಗನ ಶರಣರು ಅನ್ಯವನಾಚರಿಸುವರಲ್ಲ.

೪. ಹೆಂಡಿರು ಮಕ್ಕಳಿಗೆ ಕುಲದೈವ ಮನೆದೈವವಲ್ಲದೆ ಎನಗೆ ಕುಲ ದೈವ ಮನೆದೈವವಿಲ್ಲವೆಂಬ ಭಂಡರ ಭಕ್ತಿಯ ಪರಿಯ ನೋಡಾ. ಆ ಯುಕ್ತಿ ಶೂನ್ಯರಿಗೆ ಮುಂದೆ ದೃಷ್ಟವ ಹೇಳಿಹೆ ಕೇಳಿ. ತನ್ನ ಹೆಂಡತಿ ಮತ್ತೊಬ್ಬನ ಮೆಚ್ಚಿಕೊಂಡು ಹೋಗುತ್ತಿರೆ, ಅಲ್ಲ ಅವನೆ ಒಯ್ಯುತ್ತಿರೆ, ಹೋದಡೂ ಹೋಗಲಿ, ಒಯ್ದಡೂ ಒಯ್ಯಲೆಂದು, ತಾ ಸೈರಿಸಬಲ್ಲಡೆ, ತಾನವರೊಳಗಿಲ್ಲದವನು. ಅಕಟಕಟ ಲೌಕಿಕಕ್ಕೆ ಅಜ್ಞೆಯುಂಟು, ಪಾರ ಮಾರ್ಥಕ್ಕೆ ಅಜ್ಞೆ ಇಲ್ಲವೆ? ಇದು ಕಾರಣವಾಗಿ ಕೂಡಲ ಚನ್ನಸಂಗಯ್ಯ ಭಕ್ತನಾಗಿ ಭವಿಯ ಬೆರಸುವ ಅನಾಚಾರಿ ಹೊಲೆಯರ ಮುಖವನೆನಗೆ ತೋರದಿರಯ್ಯಾ.

---

ಇಂತೀಆಚಾರಲಿಂಗದೊಳಿಪ್ಪ ಭಕ್ತನ ಗುರುಲಿಂಗಸ್ಥಲ. ಆ ಸ್ಥಲದ ಸುಭಾವದ ವಚನ.

## ಭಕ್ತನ ಗುರುಲಿಂಗಸ್ಥಲ.

೧. ಗುರುವನು ಲಿಂಗವನು ಒಂದೆ ಎಂದು ನುಡಿವ ಬಾಲಭಾ ಷೆಯ ಸಂತೆಯ ಸುದ್ದಿಯ ಕೇಳಲಾಗದು. ಅದೆಂತೆನೆ, ಲಿಂಗ ಸಾಹಿತ್ಯ ವಾಗಿ ಪ್ರಸಾದಭೋಗ, ಲಿಂಗಸಾಹಿತ್ಯವಾಗಿ ನಿದ್ರೆ ಸರ್ವ ಸಂಗವು ಹಿಂಗಿರ್ದ ಮೇಲೆ, ಗುರುವನು ಲಿಂಗವನು ಒಂದೆ ಎಂದು ಕಂಡಡೆ ಅಘೋರ ನರಕ ಕೂಡಲಚನ್ನಸಂಗಮದೇವ.

೨. ಗುರು ಶಿಷ್ಯ ಸಂಬಂಧವನೇನೆಂದುಪಮಿಸುವೆನೈಯ್ಯಾ! ಒಂದಾ ಗಿ ಹೋಗಬಾರದು. ಅವರಿದ್ದೂರಲ್ಲಿರಲಾಗದು. ಅವರ ಸಮ ಪಂಙ್ತಿ ಯಲ್ಲಿ ಕುಳ್ಳಿರಲಾಗದು. ಅವರ ಸಮ ಪಂಙ್ತಿಯಲಿ ಕುಳಿತು ಲಿಂಗಾ

ರ್ಚನೆ ಮಾಡಲಾಗದು. ಅವರಿಂತವರಿಂತವರೆಂದು ಕನಸು ಮನಸಿನಲ್ಲಿ ನೆನೆದಡೆ ಅಘೋರ ನರಕವಯ್ಯಾ ಕೂಡಲಚನ್ನಸಂಗಮದೇವಾ.

೬. ಗುರುಲಿಂಗದಲ್ಲಿ ಇಲ್ಲದ ಒಲವು ಪರದೈವದಲಾದೀತೆಂಬರು. ಶಿಗಣು ಶರಣೆನಲರಿಯದೆ ಗುರುದೊರೆಯಾದರಲ್ಲ ಜನನ ಮರಣ ರಹಿತ ನಮ್ಮ ಕೂಡಲ ಚನ್ನಸಂಗಯ್ಯನೆಂಬ ಶ್ರೀಗುರುವಿಂಗೆ ಶರಣೆಂದು ಬದುಕಲರಿಯದೆ.

೭. ಗುರುವ ನರನೆಂದನಾದೊಡೆ ಹಿಂದಣ ಭವಮಾಲೆ ಹಿಂಗದು. ಗುರು ಶಬ್ದಕ್ಕೆ ರೋಷವ ಮಾಡಿದನಾದಡೆ ಶ್ವಾನನ ಬಳಗದೊಳಗಿಪ್ಪನು. ಗುರೂಪದೇಶವ ಮೀರಿದನಾದಡೆ, ಭವಪಾಶ ಹಿಂಗದು. ಶ್ರೀ ಗುರುಲಿಂಗವೆ. ಭರ್ಗೋದೇವನೆಂಬರಿವುದು. ಕೂಡಲ ಚನ್ನಸಂಗಯ್ಯನೆಂದು ನಂಬದಿರ್ದೊಡೆ ಭವ ಹಿಂಗದು.

೮. ಗುರುವಚನವನುದಾಸೀನವ ಮಾಡಿ ಗುರುಲಿಂಗಜಂಗಮಕ್ಕೆ ವಂಚಿಸುವನ ಮುಖವ ನೋಡೆ ನೋಡೆ, ಅವನೊಡನೆ ಮಾತನಾಡೆ, ಆ ಪಾಪಿಯ ಇದಿರಿನಲ್ಲಿ ನಿಂದಿರೆ ನಿಂದಿರೆ, ನಮ್ಮ ಕೂಡಲ ಚನ್ನಸಂಗಯ್ಯನ ವಚನ 'ನ ವದಂತಿ ನ ಪಶ್ಯಂತಿ' ಎಂದುದಾಗಿ.

---

ಇನ್ನು ಭಕ್ತನ ಶಿವಲಿಂಗಸ್ಥಲ ಆ ಸ್ಥಲದನುಭಾವದ ವಚನ.

## ಭಕ್ತನ ಶಿವಲಿಂಗಸ್ಥಲ

೧. ಅಂಗದ ಮೇಲೆ ಪರಶಿವಲಿಂಗವಿರ್ದು, ಸ್ಥಾವರ ಲಿಂಗಕ್ಕೆ ಶರಣೆನಲಾಗದು. ತನ್ನಲ್ಲಿ ಲಿಂಗವಿರ್ದಂತೆ, ಅನ್ಯಲಿಂಗವ ಮುಟ್ಟಿ ದರ್ಶನ ಸ್ಪರ್ಶನವ ಮಾಡುವ ಕುನ್ನಿಗಳನೇನೆಂಬೆನಯ್ಯಾ? ತನ್ನಂಗದ ಲಿಂಗವು ರಂಗದ ಕಲ್ಲುವ ತಾಗಿದಡೆ, ಆವುದು ಹಿರಿದು, ಆವುದು ಕಿರಿದು ಎಂಬೆನಯ್ಯಾ ತಾಳ ಸಂಪುಟಕ್ಕೆ ಬಾರದ ಘನವು? ॥ಸಾಕ್ಷಿ॥ ಪ್ರಾಣಲಿಂಗಂ ಪರಿತ್ಯಜ್ಯ ಅನ್ಯಲಿಂಗಮುಪಸ್ಥಿತಂ। ಶ್ವಾನಯೋನಿ ಶತಂಗತ್ವಾ ಚಾಂಡಾಲ ಗೃಹಮಾಚರೇತ್ ॥೧॥ ಎಂದುದಾಗಿ, ।ಸಾಕ್ಷಿ॥ ದೀರ್ಘ ದಂಡಂ ಗುರು ಸ್ಪರ್ಶಂ ಕರ್ಣಲಿಂಗಂ ಸ್ಪರ್ಶನಂ ಚ। ಶಿರಂ ಜಂಗಮಸ್ಪರ್ಶಂಚ। ತ್ರಿವಿಧಃ ವಂದನೆ ತಥಾ ॥೨॥ ಅದೆಂತೆಂದೊಡೆ ॥ಸಾಕ್ಷಿ॥ ದೀರ್ಘ ದಂಡ ಗುರು ಸ್ಪರ್ಶಂ। ಪಾಣಿ ಸ್ಪರ್ಶಂ ಚ ಲಿಂಗಕಂ। ಜಂಗಮಂ ಶಿರಸ್ಪರ್ಶಂಚ।

ತ್ರಿವಿಧಂ ಭಕ್ತಿಕಾರಣಂ॥ ಎಂದುದಾಗಿ ಹಂತಿಲಿದ್ದ ಲಿಂಗವ ಕಿರಿದು ಮಾಡಿ, ದೂರದಲ್ಲಿರ್ದ ಸ್ಥಾವರವ ಹಿರಿದು ಮಾಡುವ. ಅನಾಚಾರಿ ವ್ರತಭ್ರಷ್ಟರ ಎನಗೊಮ್ಮೆ ತೋರದಿರಯ್ಯಾ ಕೂಡಲಚನ್ನಸಂಗಮದೇವಾ.

೨ ಪತಿವ್ರತೆಯಾದೊಡೆ, ಅನ್ಯ ಪುರುಷನ ಸಂಗವೇತಕಯ್ಯಾ? ಪರನಾರಿಯ ಸೋದರನಾದೊಡೆ, ಅನ್ಯ ಸ್ತ್ರೀಯರ ಸಂಗವೇತಕಯ್ಯಾ? ಲಿಂಗಸಂಗಿಯಾದೊಡೆ ಅನ್ಯ ದೈವದ ಸಂಗವೇತಕಯ್ಯಾ? ಈ ಹಿಂಗೆ ಕಂಡ ಕಂಡವರ ಹಿಂದೆ ಹರಿದಾಡುವ ಚಾಂಡಾಲತಿಯು ಚಾಂಡಾಲರಂತೆ. ಅದೆಂತೆಂದೊಡೆ, ಒಬ್ಬನ ಕೈವಿಡಿದು, ಒಬ್ಬಗೆ ಮಾತು ಕೊಟ್ಟು, ಮತ್ತೊಬ್ಬರಿಗೆ ಸನ್ನೆಯ ಮಾಡುವ ಬೋಸರಗಿತ್ತಿಯಂತೆ, ಪ್ರಾಣಲಿಂಗವಿದ್ದಂತೆ ಸ್ಥಾವರ ಲಿಂಗಕ್ಕೆ ಹರಿಸಿಕೊಂಡು ಹೋಗಿ, ಹೋರಾಟಗೊಳಲೇಕೆ? ಇಂತಪ್ಪ ಅಪಸ್ಮಾರಿ ತೊತ್ತುಗಳನೆನಗೊಮ್ಮೆ ತೋರದಿರಯ್ಯ ಕೂಡಲ ಚನ್ನಸಂಗಮದೇವಾ.

೩. ಪೃಥ್ವಿಯ ಪೂರ್ವಾಶ್ರಯವು ಸಮ್ಮಾರ್ಜನೆ ರಂಗವಲ್ಲಿಯಿಂದೆ ಹೋಯಿತ್ತು. ಅಪ್ಪುವಿನ ಪೂರ್ವಾಶ್ರಯ ಮಂತ್ರ ವಿಭೂತಿಯಿಂದೆ ಹೋಯಿತ್ತು. ಅಗ್ನಿಯ ಪೂರ್ವಾಶ್ರಯ ಧೂಪ ದೀಪದಿಂದೆ ಹೋಯಿತ್ತು. ವಾಯುವಿನ ಪೂರ್ವಾಶ್ರಯ ಶಿವಧ್ಯಾನದಿಂದೆ ಹೋಯಿತ್ತು. ಆಕಾಶದ ಪೂರ್ವಾಶ್ರಯ ಸ್ತೋತ್ರದಿಂದೆ ಹೋಯಿತ್ತು. ಆತ್ಮನ ಪೂರ್ವಾಶ್ರಯ ಕಿಂಕುರ್ವಾಣದಿಂದೆ ಹೋಯಿತ್ತು. ಚಂದ್ರಸೂರ್ಯರ ಪೂರ್ವಾಶ್ರಯ ಮಾಡುವ ಕ್ರಿಯದಿಂದೆ ಹೋಯಿತ್ತು. ಇದು ಕಾರಣವಾಗಿ ಭಕ್ತ ಕಾಯ ಮಮಕಾಯವಯ್ಯ ಕೂಡಲ ಚನ್ನಸಂಗಮದೇವಾ.

---

ಭಕ್ತನ ಜಂಗಮಲಿಂಗಸ್ಥಲ. ಇಂತಪ್ಪ ಶಿವಲಿಂಗ ಸಂಗದೊಳಿರ್ಪ ಸದ್ಭಕ್ತನ ಜಂಗಮಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಭಕ್ತನ ಜಂಗಮಲಿಂಗಸ್ಥಲ.

೧. ಒಡೆಯರು ಮನೆಗೆ ಬಂದುದ ಕಂಡು ತೆರಹು ಮರೆಹಾಗಿಪ್ಪನೆ ಭಕ್ತನು? ಹೊನ್ನುಳ್ಳ ದೊರೆಯಂತೆ ಭಾವಿಸಿಕೊಂಡು ಬಿಮ್ಮನಲ್ಲಿ ಇಪ್ಪನೆ ಭಕ್ತ? ಜಂಗಮ ಪ್ರೇಮಿಗೆ ಜಡಮತಿಯುಂಟೆ ಅಯ್ಯ? ನಿಮ್ಮ ಕ್ಕುದ ಕೊಂಡು ಮಿಕ್ಕುದನರಿಯದಿರ್ಪ ಮಹಾ ಮಹಿಮರ ಪಾದವ ತೋರಯ್ಯ ಕೂಡಲ ಚನ್ನಸಂಗಮದೇವಾ.

೨. ಪರುಷದ ಪರ್ವತದಲ್ಲಿ ಕಬ್ಬುನ ಉಂಟೇ ಅಯ್ಯಾ? ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವಾತಂಗೆ ಅವಗುಣ ಉಂಟೆ ಅಯ್ಯಾ? ಇದು ಕಾರಣವಾಗಿ ಭಕ್ತಕಾಯ ಮಮಕಾಯವಯ್ಯಾ ಕೂಡಲಚನ್ನಸಂಗಮದೇವಾ.

೩. ಜಂಗಮವ ಕಾಣುತ್ತ ಅಹಂಕಾರದಲ್ಲಿಪ್ಪ ಅನಿತ್ಯ ದೇಹಿಯ ನೇನೆಂಬೆನಯ್ಯಾ? ಲಿಂಗಸ್ಥಲಕ್ಕೆ ಸಲ್ಲರು. ಗುರುಲಿಂಗ ಹೇಳಿದುದ ಮರೆದರು. ॥ಸಾಕ್ಷಿ॥ ಭಸ್ಮಾಂಗೀಯಾಗತಂ ದೃಷ್ಟ್ವಾ । ಆಸನೇನ ಪರಿತ್ಯಜೇತ್। ಸ್ವಧರ್ಮ ಪುತ್ರಧರ್ಮಶ್ಚ । ಸರ್ವಧರ್ಮ ವಿನಶ್ಯತಿ॥ ಕುಲನಾಮಃ ಕುಲೀನಮಾ । ಭೂತಿರುದ್ರಾಕ್ಷ ಧಾರಣಾತ್ । ದೃಷ್ಟ್ವೋನ್ನತಾ ಸನಂ ತ್ಯಕ್ತ್ವಾ ಶ್ವಾನ ಯೋನಿಷು ಜಾಯತೇ॥ ಇಂತೆಂದುದಾಗಿ, ಕೂಡಲಚನ್ನಸಂಗಮದೇವಾ, ಭಸ್ಮಾಂಗಿಯ ಕಂಡಡೆ ನಮೋ ನಮೋ ಎಂಬೆನು.

೪. ಮಾಡುವ ದಾಸೋಹ ಕಿಂಕುರ್ವಾಣದಿಂದಾದೊಡೆ, ಆ ಭಕ್ತನ ಅವಗುಣಂಗಳು ಮುಟ್ಟಲಮ್ಮವು. ಅರ್ಥ ಪ್ರಾಣ ಅಭಿಮಾನವೆಂಬ ತ್ರಿಸ್ಥಾನವ ಶುದ್ಧವ ಮಾಡುವಲ್ಲಿ ನಿರಾಭಾರಿಯ ಮಾಡಿಕೊಂಡಿರ್ಪನು. ॥ಸಾಕ್ಷಿ॥ ಅರ್ಥ ಪ್ರಾಣಾಭಿಮಾನಂ ಚ । ಗುರೋರ್ಲಿಂಗಂತು ಜಂಗಮಂ ತ್ರಿಸ್ಥಾನ ಶುದ್ಧಿಮಾಪ್ನೋತಿ । ನಿರಾಭಾರಂತು ಮಜ್ಜನಂ । ದಾಸೋಹಮಿತಿ ಕರ್ತವ್ಯಂ ಮಾರ್ಗಣಾಂ ನಾಸ್ತಿ ಕಿಂ ಪ್ರಭೋ॥ ಇದು ಕಾರಣವಾಗಿ ನಿರಾಭಾರಿಯೊಳಡಗಿರ್ಪ ನಮ್ಮ ಕೂಡಲ ಚನ್ನಸಂಗಯ್ಯನು.

೫. ಭಕ್ತನ ಹಸ್ತ ಮುಟ್ಟೆ ಪಾವನವಾದೆವೆಂಬರು. ಅಂಬನ್ನಕ್ಕರ ತಾವೇನು ಭವಿಗಳೆ? ಅವನ ಲಿಂಗದೇಹಿ ಎಂತೆಂಬೆ? ಲಿಂಗಾಚಾರಿ ಎಂತೆಂಬೆ? ಆತ ಪವಿತ್ರ ಕಾಯನೆಂತೆಂಬೆ? ಇದು ಕಾರಣ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗವೆ ಕ್ಷೇತ್ರವು ಜಂಗಮವೆ ಬೀಜವೆಂದರಿಯರಾಗಿ.

೬. ಅಂಗದ ಮೇಲೆ ಲಿಂಗಸ್ಥಾಪ್ಯವುಳ್ಳ ಭಕ್ತನು, ಜಂಗಮಕ್ಕೆ ಜಳಕವ ಮಾಡಿಸದೆ, ತಾನೆ ಮಾಡಿದೊಡೆ ಬಚ್ಚಲ [illegible] ವಿಂದ ಸಮಾನ, ಆ ಜಂಗಮಕ್ಕೆ ಗಂಧವ ಧರಿಸದೆ, ತಾನೆ ಧರಿಸಿಕೊಂಡಡೆ, ದುರ್ಗಂಧವ ಧರಿಸಿಕೊಂಡ ಸಮಾನ, ಆ ಜಂಗಮಕ್ಕೆ ಅಕ್ಷತೆಯ ನೀಡದೆ ತಾನೆ ಇಟ್ಟುಕೊಂಡೊಡೆ, ಹೆಣನ ಹಣೆಯಕ್ಕಿಯನಿಟ್ಟ ಸಮಾನ, ಆ ಜಂಗ

ಮಕ್ಕೆ ಪುಷ್ಪವ ತುರುಬದೆ, ತಾನೆ ತುರುಬಿಕೊಂಡಡೆ, ಪಕ್ಷಿಗಳ ಪಕ್ಕವ ಮುಡಿದ ಸಮಾನ. ಆ ಜಂಗಮಕ್ಕೆ ವಸ್ತ್ರವ ಹೊದಿಸದೆ ತಾನೆ ಹೊದ್ದನಾದೊಡೆ ನಾಯ ತೊಗಲ ಹೊದ್ದ ಸಮಾನ. ಆ ಜಂಗಮಕ್ಕೆ ಗಂಧ ಲೇಪನ ಮಾಡದೆ, ತಾ ಲೇಪಿಸಿಕೊಂಡಡೆ, ಅಮೇಧ್ಯವ ಹೂಸಿಕೊಂಡ ಸಮಾನ, ಆ ಜಂಗಮಕ್ಕೆ ಧೂಪಾರತಿಯ ಮಾಡದೆ, ತಾನೆ ಮಾಡಿಕೊಂಡಡೆ, ಹೆಣನ ಸುಟ್ಟ ಹೊಗೆಯ ವಾಸನವ ಕೊಂಡ ಸಮಾನ, ಆ ಜಂಗಮಕ್ಕೆ ದೀಪಾರತಿಯನೆತ್ತದೆ ತಾನೆ ಎತ್ತಿಕೊಂಡಡೆ, ಸತ್ತ ಹೆಣಕ್ಕೆ ನಿವಾಳಿಯನೆತ್ತಿದ ಸಮಾನ, ಆ ಜಂಗಮಕ್ಕೆ ಆರೋಗಣೆಯ ಮಾಡಿಸದೆ ತಾನೆ ಉಂಡಡೆ, ಮಾಂಸ ಕಿಲ್ಬಿಷ ಕ್ರಿಮಿಯ ತಿಂದ ಸಮಾನ, ಆ ಜಂಗಮಕ್ಕೆ ಅಮೃತಪಾನಂಗಳ ಕೊಡದೆ, ತಾನೆ ಕೊಂಡಡೆ, ಸುರಾಪಾನವ ಕೊಂಡ ಸಮಾನ, ಆ ಜಂಗಮಕ್ಕೆ ಹಸ್ತ ಮಜ್ಜನಕ್ಕೆರೆಯದೆ ತಾನೆ ತೊಳೆದು ಮುಕ್ಕುಳಿಸಿದರೆ ರಕ್ತದಲ್ಲಿ ಮುಕ್ಕುಳಿಸಿದ ಸಮಾನ, ಆ ಜಂಗಮಕ್ಕೆ ವೀಳೆಯವ ಕೊಡದೆ ತಾನೆ ವೀಳೆಯವ ಮಾಡಿದೊಡೆ, ತ್ರಿಭಂಗಿಯ ತಿಂದ ಸಮಾನ, ಆ ಜಂಗಮಕ್ಕೆ ಸುಖಾಸನವನಿಕ್ಕದೆ, ತಾನೆ ಗದ್ದುಗೆಯ ಮೇಲೆ ಕುಳಿತಡೆ, ಬಂದೀಖಾನೆಯಲ್ಲಿ ಕುಳಿತ ಸಮಾನ, ಆ ಜಂಗಮಕ್ಕೆ ಸರ್ವಾಭರಣವನಿಕ್ಕದೆ, ತಾನೆ ಇಟ್ಟುಕೊಂಡಡೆ, ಶಿವ ಕರ ಚರಣದಲ್ಲಿ ಸಂಕೊಳೆಯನಿಕ್ಕಿಕೊಂಡ ಸಮಾನ, ಆ ಜಂಗಮಕ್ಕೆ ಅಂದಳ ಕುದುರೆ ಆನೆ ಮೊದಲಾದ ವಾಹನಂಗಳ ಕೊಡದೆ, ತಾನೆ ಏರಿಕೊಂಡಡೆ, ವಿಮಾನದ ಮೇಲಣ ಹೆಣದ ಸಮಾನ, ಆ ಜಂಗಮಕ್ಕೆ ಸ್ತೋತ್ರಗೀತ ನೃತ್ಯಂಗಳ ಕೇಳಿಸದೆ, ತಾನೆ ಕೇಳಿದೊಡೆ, ದುಃಶಬ್ದ ದುರ್ನಾದವ ಕೇಳಿದ ಸಮಾನ, ಆ ಜಂಗಮಕ್ಕೆ ಚಿತ್ರ ವಿಚಿತ್ರ ವಿನೋದಾಟವನೆಲ್ಲವ ನೋಡಿಸದೆ ತಾನೆ ನೋಡಿದಡೆ ತೊಗಲ ಬೊಂಬೆಯ ನೋಡಿದ ಸಮಾನ, ಆ ಜಂಗಮಕ್ಕೆ ಕನ್ಯೆ ಸ್ತ್ರೀ ವಿವಾಹವ ಮಾಡದೆ ತಾನೆ ಮದುವೆಯಾಗಿ ಸತಿ ಸಂಯೋಗವ ಮಾಡಿದೊಡೆ, ಮಾತೃ ಸಂಯೋಗವ ಮಾಡಿದ ಸಮಾನ, ಆ ಜಂಗಮಕ್ಕೆ ಮಠವ ಕಟ್ಟಿಸಿಕೊಡದೆ, ತಾನೆ ಸೆಜ್ಜೆ ಗೃಹಂಗಳೊಳಗಿರ್ದನಾದೊಡೆ, ನರಕದ ಹೊಂಡದೊಳಗಿರ್ದ ಸಮಾನ, ಇಂತೀ ಸಕಲಾದಿ ಭೋಗಾದಿ ಭೋಗಂಗಳನು ಮೊದಲೆ ಜಂಗಮಕ್ಕೆ ಅರ್ಪಿಸದೆ, ತಾನೆ ಲಿಂಗಸಾಹಿತ್ಯವೆಂದು ಕೊಂಡಡೆ, ಅವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕ ಪ್ರಸಾದವಿಲ್ಲ. ಅವನು ಸರ್ವಾಪರಾಧಿಯಯ್ಯಾ. ಅವಂಗೆ

ಸಹಜ ಭಕ್ತಿ ಸಮಭಾಜನನಿಲ್ಲನಾಗಿ, ಅವಂಗೆ ನಿಜಮುಕ್ತಿ ಎಂದಿಗೂ ಇಲ್ಲವಯ್ಯಾ ಕೂಡಲ ಚನ್ನಸಂಗಮದೇವಾ.

೭. ಜ್ಞಾನ ಗುರುವಿನಲ್ಲಿ ಸಾಹಿತ್ಯ, ಸುಜ್ಞಾನ ಲಿಂಗದಲ್ಲಿ ಸಾಹಿತ್ಯ, ಮಹಾಜ್ಞಾನ ಜಂಗಮದಲ್ಲಿ ಸಾಹಿತ್ಯ, ಇಂತಪ್ಪ ಜ್ಞಾನ, ಸುಜ್ಞಾನ, ಮಹಾಜ್ಞಾನ, ಜಂಗಮದಲ್ಲಿ ಸಾಹಿತ್ಯ. ಇದು ಕಾರಣವಾಗಿ, ಸಕಲ ಭೋಗಾದಿ ಭೋಗಂಗಳನು, ಗುರುವಿಂಗೆ, ಲಿಂಗಕ್ಕೆ ಕೊಡಲಾಗದು. ಅದೆಂತೆಂದೊಡೆ ॥ಸಾಕ್ಷಿ॥ ಮಧ್ಯಮಂ ಲಿಂಗಪೂಜ್ಯಂಚ। ಉತ್ತಮಂ ಗುರು ಪೂಜಯೋಃ ವಿಶೇಷಂ ಚ ಜಂಗಮಾನಾಂ। ಸಮಯಾಚಾರಂ ತು ನಿರ್ಣಯಂ॥ ಇಂತೆಂದುದಾಗಿ, ಸಕಲ ಭೋಗಾದಿ ಭೋಗಂಗಳನು ಮೊದಲಾದ ಸುಖಂಗಳನು ಜಂಗಮಕ್ಕೆ ಸಮರ್ಪಿಸಿದೊಡೆ, ಆ ಸುಖವ ಸೇವಿಸಬಲ್ಲನು. ಆ ಮೇಲೆ ಆ ಒಕ್ಕ ಮಿಕ್ಕುದ ತನಗೆ ಪ್ರಸಾದವಾಯಿತ್ತು. ತನ್ನ ಲಿಂಗಕ್ಕು ತನಗು ತೃಪ್ತಿಯಾಯಿತ್ತು. ಹೀಗಲ್ಲದೆ ಜಂಗಮಕ್ಕೆ ಕೊಡದೆ, ತನಗೆ ಲಿಂಗ ಸಾಹಿತ್ಯ ಉಂಟೆಂದು, ತನ್ನ ಲಿಂಗಕ್ಕೆ ಆ ಸಕಲ ಪದಾರ್ಥವನರ್ಪಿಸಿದೊಡೆ, ಅದು ಆ ಸುಖವನು ಭೋಗಿಸಲರಿಯದಾಗಿ, ತನಗೆ ಪ್ರಸಾದವಿಲ್ಲ. ಪ್ರಸಾದವಿಲ್ಲವಾಗಿ ಮತ್ತೆ, ಮುಕ್ತಿಯು ಇಹಪರಪಡೆಯಾಟ ಉಂಟಾದಡೇನು? ನಿಜಮುಕ್ತಿಗೆ ಸಲ್ಲ. ಅದೆಂತೆನೆ, ಜಂಗಮದ ಒಕ್ಕು ಮಿಕ್ಕ ಪ್ರಸಾದವಿಲ್ಲದವಂಗೆ ನಿಜಮುಕ್ತಿಯು ಎಂದೆಂದಿಗೂ ಇಲ್ಲ. ಇದು ಕಾರಣವಾಗಿ, ಜಂಗಮಕ್ಕೆ ಮಾಡದೆ, ಆ ಗುರುಶಿಷ್ಯರಿಬ್ಬರು ತಮ್ಮಲ್ಲಿ ಲಿಂಗ ಉಂಟೆಂದು ತಮ್ಮ ಲಿಂಗಕ್ಕೆಂದು, ಅರುಮ್ಮಾಡುತ್ತಿಹರು, ಆ ಲಿಂಗಕ್ಕೆ ತೃಪ್ತಿ ಇಲ್ಲ. ಇದಕ್ಕೆ ॥ಸಾಕ್ಷಿ॥ ಲಿಂಗಾರ್ಪಿತಂ ನ ಕರ್ತವ್ಯಂ। ಕರ್ತವ್ಯಂ ಜಂಗಮಾರ್ಪಿತಂ ಗುರೋರ್ಲಿಂಗಂ ಉಭಯೋರ್ಮಧ್ಯೆ ಜಂಗಮಂ ಚ ವಿಶೇಷತಃ॥ ಇದು ಕಾರಣವಾಗಿ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಸ್ವಯ ಚರ ಪರವೆಂಬ ಸ್ಥಳಕುಳದ ಸಮಯಾಚಾರಕ್ಕೆ ಇದೇ ನಿರ್ಣಯವು.

೮. ಶ್ರೀ ಗುರು ಸಾಹಿತ್ಯವ ಸಂಬಂಧವ ಮಾಡುವಲ್ಲಿ, ಈ ಲಿಂಗವೇ ಜಂಗಮ. ಆ ಜಂಗಮವೇ ಈ ಲಿಂಗವೆಂದು ಹೇಳಿಕೊಟ್ಟಂತಹ ವಿವರವನರಿಯದೆ, ಮರೆದು ಈ ಲಿಂಗದೊಳಗೆ ಜಂಗಮ ಉಂಟೆಂದು, ಬೊಗುಳುತಿರ್ಪ ಮೂಕೊರೆಯರು ನೀವು ಕೇಳಿರೋ. ರಾಶಿಗಿಕ್ಕಿದ ಲಚ್ಚಣಾ

ರಾಶಿಯು ಕೊಳಬಲ್ಲುದೇನೋ ಮೂರ್ಖ; ರಾಶಿಯು ಒಡೆಯನಲ್ಲದೆ? ಆ ಪರಿಯಲ್ಲಿ ಈ ಲಿಂಗವು ಜಂಗಮದ ಮುದ್ರೆ ಎಂದು ತಿಳಿ. ಅದಕ್ಕೆ ಜಂಗಮವೆ ಮುದ್ರೆಗೆ ಪತಿಯಾದ ಕಾರಣ, ಆ ಜಂಗಮದೊಳಗೆ, ಆ ಲಿಂಗ ಉಂಟೆಂಬುವುದು ಸತ್ಯವಲ್ಲದೆ, ಈ ಲಿಂಗದೊಳಗೆ ಜಂಗಮವು ಉಂಟೆಂಬುವದು ಸತ್ಯವಲ್ಲ. ವೃಕ್ಷದ ಕೊನೆಗಳಿಗೆ, ಉದಕವ ನೀಡಿದರೆ ಫಲವಹುದೆ, ಬೇರಿಂಗೆ ನೀರು ಬೇಕಲ್ಲದೆ? ॥ಸಾಕ್ಷಿ॥ ವೃಕ್ಷಸ್ಯ ವದನಂ ಭೂಮಿ। ಸ್ಥಾವರಸ್ಯ ಚ ಜಂಗಮಃ। ಸ್ಥಾವರಂ ವೃಕ್ಷ ಶಾಖೇ ಚ ವೃಕ್ಷಮೂಲಂ ತು ಜಂಗಮಃ। ಉಭಯೋರ್ಮಧ್ಯ ಭಾವೇನ। ಜಂಗಮಂ ಚ ಪ್ರಸಾದಕಂ। ತತ್ಪ್ರಸಾದಂ ಮಹಾದೇವಿ। ಮಮತೃಪ್ತಂ ಚ ಸರ್ವತಃ॥ ಇದು ಕಾರಣವಾಗಿ, ವೃಕ್ಷದ ಆಧಾರವೆ ಪೃಥ್ವಿ, ಆ ಪೃಥ್ವಿಯೆ ಜಂಗಮವು, ಶಾಖೆಯೇ ಲಿಂಗವು. ದೇಹದ ಮೇಲೆ ಸಕಲ ಪದಾರ್ಥವ ತಂದಿರಿಸಿದೊಡೆ ತೃಪ್ತಿಯಾಗುವದೆ ಮುಖದಿಂದೊಳಿಯಕ್ಕೆ ನೀಡಬೇಕಲ್ಲದೆ? ಅದು ಕಾರಣವಾಗಿ, ಅವಯವಂಗಳುಳ್ಳ ಕಾಣಲ್ಪಟ್ಟ ಮುಖವನುಳ್ಳದೆ ಜಂಗಮವು. ದೇಹವೇ ಲಿಂಗವು. ಲಿಂಗವೆಂಬುವುದು ಜಂಗಮದೊಂದಂಗವಯ್ಯಾ ಕೂಡಲ ಚನ್ನಸಂಗಮದೇವಾ.

೯, ಗುರುವಾದಡೆಯು ತನ್ನ ಶಿಷ್ಯನ ಕೈಯಿಂದೆ ತಾ ಮಾಡಿಸಿಕೊಂಬ ಸರ್ವೋಪಚಾರದ ಸೇವೆಯನು ಜಂಗಮಕ್ಕೆ ಮಾಡಿಸದೆ, ತಾನೆ ಸೇವೆಯ ಮಾಡಿಸಿಕೊಂಡಡೆ, ಶ್ವಾನ ಒಡಲ ಹೊರೆದಂತೆ. ಅದು ಹೇಗೆಂದೊಡೆ, ತನ್ನ ಲಿಂಗವನಾ ಶಿಷ್ಯಂಗೆ ಕೊಟ್ಟು, ತಾನು ವ್ರತಗೇಡಿಯಾಗಿ ಹೋಹಲ್ಲಿ. ಆ ಜಂಗಮವೇ ಸಾಕ್ಷಿಯಾಗಿರ್ದು ವಿಭೂತಿ ವೀಳೆಯವ ತಕ್ಕೊಂಡು, ಕರ್ತರಾಗಿರ್ದ ಕಾರಣ ಅವರೊಕ್ಕುದ ಕೊಂಡು, ಗುರುಶಿಷ್ಯರಿಬ್ಬರು ತಮ್ಮ ಪೂರ್ವಾಶ್ರಯವ ಕಳೆದರಾಗಿ, ಆ ಜಂಗಮದಲ್ಲಿ ಅಹಂ ಮಮತೆಯಿಂದೆ ಮುಂದುಗೆಟ್ಟು ಜಂಗಮಕ್ಕೆ ಸರ್ವ ಸೇವೆಯ ಮಾಡಿಸದೆ, ಗುರುವಾದಡೂ ಆಗಲಿ, ಲಿಂಗವಾದಡೂ ಆಗಲಿ, ಆ ಜಂಗಮ ತಾನಾದಡೂ ಆಗಲಿ, ಪರಬ್ರಹ್ಮ ಜಂಗಮದಲ್ಲಿ ಪಾದೋದಕ ಪ್ರಸಾದವಿಲ್ಲದಿದೊಡೆ ಅವರ ನೋಲ್ಲೆನಯ್ಯಾ. ಅದೇಕೆಂದೊಡೆ ಅವರು ಬರಿಮುಖರೆಂಬೆ, ಅಂಗಹೀನರೆಂಬೆ, ಲಿಂಗದ್ರೋಹಿಗಳೆಂಬೆ, ದುರ್ಮನದ ಮುರ್ಮುಖರೆಂಬೆ. ಅದೆಂತೆಂದೊಡೆ ಆ ಜಂಗಮದಲ್ಲಿ ಗುಣವ ನೋಡದೆ ಅವಗುಣವ ನೋಡದೆ ರೂಪವ ನೋಡದೆ ಕುರೂಪವ ನೋಡದೆ, ಕೋಪವ ನೋಡದೆ, ಶಾಂತವ

ನೋಡದೆ, ವಿವೇಕವ ನೋಡದೆ; ಅವಿವೇಕವ ನೋಡದೆ, ಮಲಿನವ ನೋಡದೆ, ನಿರ್ಮಲಿನವ ನೋಡದೆ, ರೋಗವ ನೋಡದೆ, ನಿರೋಗವ ನೋಡದೆ, ಕುಲವ ನೋಡದೆ, ಛಲವ ನೋಡದೆ, ಆಶೆಯ ನೋಡದೆ, ನಿರಾಶೆಯ ನೋಡದೆ, ಅವರಂಗದ ಮೇಲಣ ಪರಶಿವ ಲಿಂಗವ ನೋಡಿ, ಆ ಜಂಗಮಕ್ಕೆ ನೀಡಿ, ಮಾಡಬೇಕೆಂಬ ಹರುಷಾನಂದವಾವರಿಸಿ ಆ ಜಂಗಮದಲ್ಲಿ ಪಾದೋದಕ ಪ್ರಸಾದವ ಕೊಂಬ ಶರಣನೆ ಸಂಗನಬಸವಣ್ಣನೆಂಬೆ ಕಾಣಾ ಕೂಡಲಚನ್ನಸಂಗಮದೇವಾ.

೧೦. ಆ ಜಂಗಮಕ್ಕೆ ಭಕ್ತನು ಗಂಡನುಳ್ಳ ಸಜ್ಜನ ಸತಿಯಂತಿರಬೇಕು. ಅದು ಹೇಗೆಂದೊಡೆ, ಹೊಯ್ದೊಡೆ, ಬೈಯ್ದೊಡೆ, ಕೋಪಿಸಿದೊಡೆ, ನಿಂದಿಸಿದೊಡೆ, ಅಳಲಿಸಿದೊಡೆ, ಬಳಲಿಸಿದೊಡೆ, ಹುರುಡಿಸಿದೊಡೆ, ಹೊರಡಿಸಿದೊಡೆ, ಇಂತಿವು ಮೊದಲಾಗಿಯೆ ನಾನೊಂದು ಮಾಡಿದೊಡೆಯು, ಮನದಲ್ಲಿ ಮರುಗಿದೊಡೆ, ಇದಿರುತ್ತರವ ಕೊಟ್ಟಡೆ, ಆ ಸಜ್ಜನ ಸತಿಯ ಗುಣಕ್ಕೆ ಕೊರತೆಯಹುದು. ಅದೆಂತೆಂದೊಡೆ, ತನ್ನ ಪುರುಷನೆ ದೈವವೆಂದು ನಂಬಿ, ಆತನ ಗುಣವ ನೋಡದೆ ತನ್ನ ಗುಣವ ಬಿಡದೆ, ಇರ್ದಡೆ ಪತಿವ್ರತೆ ಎನಿಸಿಕೊಂಬುವಳು. ಆ ಮೇಲೆ ಮುಕ್ತಿಯಪ್ಪುದು ತಪ್ಪದು ನೋಡಿರಿ. ಆ ಪತಿವ್ರತೆಯಂತೆ ಜಂಗಮ ದಾಸೋಹ ಸದ್ಭಕ್ತಿಯುಳ್ಳವರು ಆ ಜಂಗಮವು ಮಾಡಿದಂತೆ, ಮಾಡಿಸಿಕೊಂಬುವುದು. ಇದಿರುತ್ತರವ ಕೊಡಲಾಗದು. ನಿರುತ್ತರದಲ್ಲಿರ್ಪುದು. ಈ ಹೀಂಗಿರಬೇಕಲ್ಲದೆ, ಆ ಜಂಗಮಕ್ಕೆ ಇದಿರುತ್ತರವ ಕೊಟ್ಟು ಅವರಿಗೆ ತಾ ಮಾಡುವ ಭಕ್ತಿಯು ಸಾಮಾನ್ಯಮಾಡಿದೊಡೆ, ತಾ ಹಿಂದೆ ಮಾಡಿದ ಭಕ್ತಿ ಎಲ್ಲ ಬೆಂದು ಹೋಗಿ, ಮುಂದೆ ನರಕಕ್ಕೆ ಗುರಿಯಪ್ಪುದು ತಪ್ಪದು. ಇದು ಕಾರಣವಾಗಿ ಆ ಪರಂಪರ ಪರಕ್ಕೆ ಪರವಾದ ಪರಮ ಜಂಗಮದಲ್ಲಿ ತಮ್ಮ ಹಿರಿಯತನದ ಸಿರಿಯ ಗರುವಿಕೆಯಂ ಬಿಟ್ಟು ಭಯಭಕ್ತಿ ಕರುಣ ಕಿಂಕುರ್ವಾಣ ನಯ ನುಡಿ ನಮಸ್ಕಾರವುಳ್ಳೊಡೆ ಗುರುಶಿಷ್ಯತ್ವದ ಸಂಬಂಧದ ನಿರ್ಣಯದ ನಿವೃತ್ತಿಯಯ್ಯ ಕೂಡಲ ಚನ್ನಸಂಗಮದೇವಾ.

೧೧. ಜಂಗಮ ಭಕ್ತನು ಚಿನ್ನದಂತೆ, ಕಬ್ಬಿನಂತೆ, ಶ್ರೀಗಂಧದಂತಿರಬೇಕಯ್ಯಾ! ಅದೆಂತೆಂದೊಡೆ, ಆ ಚಿನ್ನವು ಕಾಸಿದೊಡೆಯು ಕರಗಿಸಿದೊಡೆಯು ನಿಗುಚಿದೊಡೆಯು ಆ ಮೇಲೆ ಪುಟವನಿಕ್ಕಿದೊಡೆಯು ಬಣ್ಣ

ವಧಿಕವಪ್ಪುದಲ್ಲದೆ, ಕಿರಿದಾಗದು ನೋಡಿರೆ. ಇವರು ನನ್ನನೇಕೆ ಗಾಸಿ ಮಾಡಿದರೆನ್ನದು, ನೋಡಿರೆ. ಆ ಕಬ್ಬು ಕಡಿದೊಡೆ, ಕಂಡಿಸಿದೊಡೆ ಗಾಣದಲಿಕ್ಕಿ ಹಿಂಡಿ ಹಿಳಿಚಿದೊಡೆ, ಬಂದ ರಸವ ಸುಟ್ಟಡೆ, ಹೇಗೆ ನಾನಾ ಪ್ರಕಾರದಲ್ಲಿ ಸಾಯಸಂಗೊಳಿಸಿದೊಡೆಯು ಮಿಗೆ ಮಿಗೆ ಮಧುರವಾಗಿ ಪ್ಪುದಲ್ಲದೆ ವಿಷವಾಗದು ನೋಡಿರೆ. ಆ ಶ್ರೀಗಂಧವು ಕೊರೆದೊಡೆಯು ಅರೆವಡೆಯು, ಪೂಸಿಕೊಂಡಡೆಯು ಬೆಂಕಿಯೊಳಗೆ ಹಾಕಿಕೊಂಡಡೆಯು ಪರಿಮಳ ಘನವಪ್ಪುದಲ್ಲದೆ, ದುರ್ಗಂಧವಾಗದು. ನಾನಾ ಪರಿಯಲ್ಲಿ ನನ್ನ ನೇಕೆ ನೋಯಿಸಿವಿರೆಂದು ತನ್ನಲ್ಲಿ ದುಃಖಂಗೊಳ್ಳದು ನೋಡಿರೆ. ಇದು ಕಾರಣವಾಗಿ, ಆ ಚಿನ್ನದಂತೆ ಆ ಕಬ್ಬಿನಂತೆ, ಆ ಶ್ರೀಗಂಧದಂತೆ, ಈ ತ್ರಿವಿಧ ಗುಣದಲ್ಲಿ ನಿರುತರಾಗಿರ್ದ ಭಕ್ತರು. ಅವರ ಗುಣವ ನೋಡಪ್ಪೆ, ತಮ್ಮ ಗುಣವ ಬಿಡದ ಕಾರಣದಿಂದೆ, ಆತನೆ ಸದ್ಭಕ್ತನಹ. ಆತನೇ ವೀರ ಮಾಹೇಶ್ವರನಹ. ಆತನೆ ಪರಮ ಪ್ರಸಾದಿಯಹ. ಆತನೆ ಘನ ಪ್ರಾಣಲಿಂಗಿಯಹ. ಆತನೆ ಮಹಾ ಶರಣನಹ. ಆತನೆ ನಿಜಲಿಂಗೈಕ್ಯನಹ. ಇಂತೀ ಷಟ್‌ಸ್ಥಲದಲ್ಲಿ ಸಂಪನ್ನನಾದಡೆ ಜಂಗಮ ಭಕ್ತಿಗೆ ಮೂಲವಯ್ಯ ಕೂಡಲ ಚನ್ನಸಂಗಮದೇವಾ.

---

ಇಂತು ಸದ್ಭಕ್ತನ ಜಂಗಮಲಿಂಗಸ್ಥಲ. ಮುಂದೆ ಭಕ್ತನ ಪ್ರಸಾದ ಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಭಕ್ತನ ಪ್ರಸಾದಲಿಂಗಸ್ಥಲ.

೧. ಭವಿಯ ಮನೆಯ ಭವಿಪಾಕವಲ್ಲದೆ, ಭಕ್ತರ ಮನೆಯಲ್ಲಿ ಭವಿಪಾಕವಿಲ್ಲವಯ್ಯ. ಆ ಭಕ್ತನ ಸ್ತ್ರೀಯ ಲಿಂಗ ಮುಂತಾಗಿ ಗುರುಲಿಂಗ, ಜಂಗಮಕ್ಕೆ ಬೇಕೆಂದು ಭಕ್ತಿರತಿಯಿಂದೆ, ಲಿಂಗಹಸ್ತದಿಂದೆ ಮಾಡಿದ ದ್ರವ್ಯ ಸಕಲ ಪದಾರ್ಥಂಗಳೆಲ್ಲ ಶುದ್ಧ ಪಾಕ. ಹಸ್ತ ಪರುಷದಿಂದೆ ಅತ್ಯಂತ ಪವಿತ್ರವಾದ ಪಾಕವು. ಅದು ಲಿಂಗಕ್ಕೆ ಸಲ್ಲುವುದು. ಅದನತಿಗಳೆದೊಡೆ ದ್ರೋಹವಯ್ಯಾ. ಆ ಭಕ್ತಿ ಪದಾರ್ಥವನು ಲಿಂಗಕ್ಕೆ ಕೊಟ್ಟು ಕೊಳಬೇಕಯ್ಯಾ ಕೂಡಲಚನ್ನಸಂಗಮದೇವಾ.

೨. ಭವಿಯಮನೆಯಲ್ಲಿ ಭವಿಯ ಹಸ್ತದಲ್ಲಿ ಭವಿಪಾಕವಲ್ಲದೆ, ಭಕ್ತರ ಮನೆಯಲ್ಲಿ ಭಕ್ತರ ಹಸ್ತದಲ್ಲಿ ಭವಿ ಪಾಕ ಉಂಟೆ? ಇಲ್ಲ

ವಯ್ಯಾ. ಸುಡಲಿ. ಇದರ ಯುಕ್ತಿ ಎಂತಹುದೋ? ಭಕ್ತಿ ಎಂತಹುದೋ? ಮುಕ್ತಿ ಎಂತಹುದೋ? ಆ ಪರಮ ಸದ್ಭಕ್ತನ ಹಸ್ತದಿಂದೆ ಬಂದ ಸಕಲ ಪದಾರ್ಥಂಗಳೆಲ್ಲ ಲಿಂಗ ಪ್ರಸನ್ನತ್ವದಿಂದೆ ಬಂದುದಾಗಿ, ಆ ಪದಾರ್ಥವನು ಶುದ್ಧತೆಯಿಂದ ಲಿಂಗಕ್ಕೆ ಕೊಟ್ಟು ಕೊಂಬುವುದೆ ದೇವರ ಭಕ್ತರ ನಡೆ. ಅವರೊಕ್ಕುದೆ ಮಹಾಪ್ರಸಾದವಯ್ಯಾ ಕೂಡಲ ಚನ್ನಸಂಗಮದೇವಾ.

೩. ಭಕ್ತರ ಮನೆಯನರಸಿಕೊಂಡು ಹೋಗಿ, ಭಕ್ತ ದೇಹಿಕ ದೇವನೆಂಬ ಶ್ರುತಿ ವಚನವ ಕೇಳಿ, ಭಕ್ತನೆ ದೇವನೆಂದರಿದು ಮತ್ತೆಯು ಮುಕ್ತಿಯನರಸುವ ಪಾತಕರ ವಿಧಿ ಎಂತೋ? ಭಕ್ತರ ಮಠಕ್ಕೆ ಹೋಗಿ ಅದು ಇದು ಎಂಬ ಸಂದೇಹಿ ಪಾತಕಿ ನೀ ಕೇಳು. ಆ ಭಕ್ತರ ಮಠದೊಳಗೆ ಭಕ್ತಿರತಿಯ ಬೆಳಸು, ಲಿಂಗದ ಕಳೆಯು, ಪ್ರಸಾದದ ರಾಶಿ, ಇಂತಪ್ಪ ಪ್ರಸಾದವಿದ್ದಲ್ಲಿಗೆ ಹೋಗಿ ಸೂತಕವನರಸುವ ಪಾತಕರ ಮೆಚ್ಚುವನೆ ನಮ್ಮ ಕೂಡಲ ಚನ್ನಸಂಗಮದೇವಾ?

೪. ಜಂಗವನು ಆರೋಗಣೆಯ ಮಾಡಿ, ಮಿಕ್ಕದು ಪ್ರಸಾದ ಅದನು ವಿಶ್ವಾಸದಿಂದೆ, ತನ್ನ ಲಿಂಗಕ್ಕೆ ಕೊಟ್ಟು, ಅದ ಸ್ವೀಕರಿಸಿಕೊಂಡರೆ ಪ್ರಸಾದಿ. ಇದೇ ಪ್ರಸಾದದಾದಿ ಕಾಣಯ್ಯ! ಆದಿಯನಾದಿಯ ಪ್ರಸಾದವ ಭೇದಿಸಬಲ್ಲಡೆ ಇದೇ ಪ್ರಸಾದದಾದಿ ಕಂಡಯ್ಯ. ಲಿಂಗ ಜಂಗಮಕ್ಕೆ ನೀಡದೆ, ಜಂಗಮ ಲಿಂಗಕ್ಕೆ ಕೊಡದೆ, ತಾನೆ ಕೊಂಡಡೆ, ಪುಳುಗುಂಡದೊಳಗಿಕ್ಕುವನು ಕೂಡಲ ಚನ್ನಸಂಗಮದೇವಾ.

೫. ಗುರು ಪ್ರಸಾದವೆಂದೆಂಬಿರಿ, ಲಿಂಗ ಪ್ರಸಾದವೆಂದೆಂಬಿರಿ, ಅಚ್ಚ ಪ್ರಸಾದವೆಂದೆಂಬಿರಿ, ಭರಿತ ಭೋಜನವೆಂದೆಂಬಿರಿ. ಗುರು ಪ್ರಸಾದವಾವುದು, ಲಿಂಗ ಪ್ರಸಾದವಾವುದು, ಅಚ್ಚಪ್ರಸಾದವಾವುದು, ಭರಿತಭೋಜನವಾವುದು ಬಲ್ಲಡೆ ಹೇಳಿರೊ. ಅರಿಯದಿದ್ದರೊಡೆ ಕೇಳಿರೊ. ಆ ಶ್ರೀ ಗುರು ಆರೋಗಣೆಯ ಮಾಡಿದ ಬಳಿಕ ಹಸ್ತಮಜ್ಜನಕ್ಕೆರೆದು ಒಕ್ಕುಮಿಕ್ಕುದ ಕೊಂಬುವುದೆ, ಗುರುಪ್ರಸಾದ. ಇಂತಲ್ಲದೆ ಕೈಯ್ಯೊಡ್ಡಿ ಬೇಡುವಾತ ಗುರುದ್ರೋಹಿ, ಕೈ ನೀಡಿಕ್ಕುವಾತ ಶಿವದ್ರೋಹಿ. ಇನ್ನು ಲಿಂಗಪ್ರಸಾದವನರಿವ ಕ್ರಮವೆಂತೆಂದೊಡೆ, ಹಿಂದಣ ಪ್ರಮಾಣಿನಲ್ಲಿ ಪುರುಷ ಹಾರ ಪ್ರಮಾಣಿನಿಂದೆ, ತೆರಹು ಮರಹಿಲ್ಲದೆ, ಭರಿತ ಭೋಜನವೆಂದು, ಗಡಣೆಸಿಕೊಂಡು, ತಟ್ಟು ಮುಟ್ಟು ಲಿಂಗಕ್ಕೆ ನೈವೇದ್ಯವ ತೋರಿಸಿ, ತಾಳವ ಕೊಟ್ಟು, ಸೆಜ್ಜೆ

ಅರಮನೆಗೆ ಬೀಜಯಂಗೈಸಿಕೊಂಡು, ಪಂಚೇಂದ್ರಿಯ ಸಪ್ತಧಾತುಗಳು
ತೃಪ್ತವಾಗಲ್ಕೆ ಪ್ರಸಾದ ಭೋಗವುಂ ಮಾಡುವುದು. ಲಿಂಗಪ್ರಸಾದ
ಅಖಂಡಿತವಾದೊಡೆ, ಶಿವಲಿಂಗ ಪ್ರಸಾದಿಗಳಿಗೆ ಕೊಡುವುದು. ಕೊಡದೆ
ಫಲಗ್ರಾಹಕತನದಿಂದೆ ಕೊಂಡು ಒಡಲ ಕೆಡಿಸಿಕೊಂಡಡೆ, ಪಂಚ ಮಹಾ
ಪಾತಕವಯ್ಯಾ. ಆ ದುರಾಚಾರಿಯ ಮುಖವ ನೋಡಲಾಗದು ಕೂಡಲ
ಚನ್ನಸಂಗಮದೇವಾ.

೬. ರೂಪಾಗಿ ಬಂದುದ ಕಾಯದ ಕೈಯ್ಯಲ್ಲಿ ಕೊಡುವುದು.
ರುಚಿಯಾಗಿ ಬಂದುದ ಮನದ ಕೈಯ್ಯಲ್ಲಿ ಕೊಡುವುದು. ತೃಪ್ತಿಯಾಗಿ
ಬಂದುದ ಭಾವದ ಕೈಯ್ಯಲ್ಲಿ ಕೊಡುವುದು. ಅರ್ಪಿಸುವ ತೆರನಿದು. ರೂಪು
ರುಚಿ ತೃಪ್ತಿಯ ಅನುವನರಿದೊಡೆ ಪ್ರಸಾದಿಯಯ್ಯಾ. ಸಾಕ್ಷಿ॥ ಇಷ್ಟಾ
ರ್ಪಿತಂ ಚ ರೂಪಿಣಾಂ। ಪ್ರಾಣಾರ್ಪಿತಂ ಚ ರುಚಿಸ್ತಥಾ। ತೃಪ್ತ್ಯಾ
ರ್ಪಿತಂ ಚ ಸುಜ್ಞಾನಂ। ಅರ್ಪಿತಂ ತ್ರಿವಿಧಾತ್ಮಕಂ॥ ಇಂತೆಂದುದಾಗಿ
ರೂಪು ರುಚಿ ತೃಪ್ತಿಯ ಕೂಡಬಲ್ಲಡೆ ಭಕ್ತನಯ್ಯಾ ಕೂಡಲಚನ್ನಸಂಗ
ಮದೇವರಲ್ಲಿ.

---

ಇಂತೀ ಭಕ್ತನ ಪ್ರಸಾದಿ ಲಿಂಗಸ್ಥಲದ ಮುಂದೆ ಪ್ರಸಾದ ಲಿಂಗದೊ
ಳಗೆ ಸಂಯೋಗವಾಗಿರ್ಪ ಭಕ್ತನ ಮಹಾಲಿಂಗಸ್ಥಲ. ಆ ಸ್ಥಲದನುಭಾ
ವದ ವಚನ.

## ಭಕ್ತನ ಮಹಾಲಿಂಗಸ್ಥಲ

೧. ಸದಾಚಾರಿಯಾದೊಡೆ, ಉಪ್ಪರಗುಡಿ ಸಿಂಧು ಪತಾಕೆ, ಒಬ್ಬ
ರಿಗೊಬ್ಬರು ಶರಣೆಂಬುವುದೆ, ಸರ್ವತೀರ್ಥ, ಆ ಭಕ್ತನ ದೇಹವೇ ತ್ರಿಕೂ
ಟದ ಶಿವಾಲಯ, ಕಾಲೇ ಕಂಭ, ಶಿರವೇ ಸುವರ್ಣದ ಕಳಸ, ಶಿವಾಚಾ
ಚಾರವೇ ಪೌಳಿ, ವಿಭೂತಿಯ ಧವಳಿಸಿ, ಪರದೈವವ ಹೊಗಳಿಸದೆ,
ಪ್ರಣವ ಪಂಚಾಕ್ಷರಿಯ ಗುಡಿಯ ದ್ವಾರವಾಟ ಒಪ್ಪುತ್ತಿರೆ, ವಿನಯವೆ
ಅಗ್ಗವಣಿ, ಸಜ್ಜನವೆ ಮಜ್ಜನ, ಸದಾ ಸನ್ನಿಹಿತವೇ ಲಿಂಗಪೂಜೆ; ಸತ್ಯವೆ
ಆಡ್ಡಣಿಗೆ, ಸಮತೆಯೇ ಪರಿವಾಣ, ಮನವೇ ಮೀಸಲೋಗರ, ಲಿಂಗ
ವಾರೋಗಣೆಯ ಮಾಡುತ್ತಿರಲು, ಹರುಷವೇ ಹಸ್ತ ಮಜ್ಜನ, ಪ್ರೀತಿಯೆ
ಕರ್ಪೂರದ ವೀಳ್ಯ, ಕಲಿತನವೇ ಜಾಗಟೆ, ಫಲಪದವೇ ಭೇರಿ. ವಿರಕ್ತಿಯೇ

ಮದ್ದಳೆ, ಸಾಂಪ್ರದಾಯವೇ ಗೀತ. ಇದು ಕಾರಣ ಕೂಡಲಚನ್ನಸಂಗಯ್ಯಾ ನಿಮ್ಮ ಶರಣರು ಸರ್ವಾಂಗಲಿಂಗಿಗಳು.

೨. ಗುರುಲಿಂಗಜಂಗಮವು ಸನ್ಮತವಾದ ಕ್ರಿಯವನಹುದಾಗದೆಂಬುವರು. ಸತ್ಕ್ರಿಯೆಯಿಡಿದು ತನುವ ಗಮಿಸುವುದು. ಅರುಹುವಿಡಿದು, ಮನವ ಗಮಿಸುವುದು. ಸಾಕ್ಷಿ॥ ಕ್ರಿಯಾದ್ವೈತ ನ ಕರ್ತವ್ಯಂ। ಭಾವಾದ್ವೈತ* ಸಮಾಚರೇತ್ । ಕ್ರಿಯಾ ನಿರ್ವಾಹ ತೇ ಯಸ್ತು ॥ ಭಾವಶುದ್ಧಂ ತು ಶಾಂಕರಿ ಎಂದುದಾಗಿ ಅನುಭಾವದಿಂದೆ ಸಕಲೇಂದ್ರಿಯಂಗಳು ನಮ್ಮ ಕೂಡಲಚನ್ನಸಂಗಯ್ಯನಲ್ಲಿ ತದ್ರೂಪು.

೩. ಮಾಟವಿಲ್ಲದ ಕೂಟವದೇಕೋ? ಕೂಟವಿಲ್ಲದ ಮಾಟವದೇಕೋ? ಮಾಟಕೂಟವೆರಡರನುವನರಿಯಬೇಕು. ಸಟೆಯಿಲ್ಲದೆ ದಿಟವ ತಿಳಿಸಿ ಸಯವಾಗಬೇಕು. ಮಾಟಕೂಟವೆರಡರನುಮತದಿಂದವೆ, ಭಕ್ತಿರತಿಯಯ್ಯಾ ಕೂಡಲಚನ್ನಸಂಗಮದೇವಾ.

೪. ಸೂತಕವಿರಹಿತ ಲಿಂಗಾರಾಧನೆ ತನುಮೂರ್ತಿಯಾದ ಲಿಂಗೈಕ್ಯ. ಪಾತಕ ವಿರಹಿತ ಜಂಗಮಾರಾಧನೆ ಮನಮೂರ್ತಿಯಾದ ಲಿಂಗೈಕ್ಯ. ಸೂತಕ ಪಾತಕ ಹಿಂಗಿತ್ತಯ್ಯ ನಮ್ಮ ಕೂಡಲಚನ್ನ ಸಂಗಯ್ಯನಲ್ಲಿ ಲಿಂಗೈಕ್ಯವು.

೫. ಇನ್ನು ಗುರುವೆಂದು ಮನದಲ್ಲಿ ಹೊಳೆದು ಕಾಣಿಸುವನ್ನಕ್ಕರ ಗುರುಲಿಂಗ ಸಾಹಿತ್ಯವಾದುದಿಲ್ಲ. ಇನ್ನು ಲಿಂಗವ ಬೆರಿಸಬೇಕೆಂದು ಮನದಲ್ಲಿ•ಕಾಮಿಸುವನ್ನಕ್ಕರ ಲಿಂಗ ಸಾಹಿತ್ಯವಾದುದಿಲ್ಲ. ಇನ್ನು ವಿಶೇಷತ್ವವಾವುದೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ ಜಂಗಮಲಿಂಗ ಸಾಹಿತ್ಯವಾದುದಿಲ್ಲ. ಇನ್ನು ನಿಜಮುಕ್ತಿಯಾಗಬೇಕೆಂದು ಮನದಲ್ಲಿ ಕಲ್ಪಿಸಿಕೊಂಡು ಕಾಮಿಸುವನ್ನಕ್ಕರ ಪ್ರಸಾದಲಿಂಗ ಸಾಹಿತ್ಯವಾದುದಿಲ್ಲ. ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಈ ಚತುರ್ವಿಧವನೇಕೀಕರಿಸಿಕೊಂಡನುಭಾವಿಸಿ ಪ್ರಾಣಲಿಂಗಿಯಾದ ಮಹಾ ಮಹಿಮ ಕಾಣಿಸಲಿಲ್ಲ ಭಾವಿಸಲಿಲ್ಲ ಭಜಿಸಲಿಲ್ಲ. ಆತ ನಿಶ್ಚಿಂತ ಪರಮ ಸುಖಿ. ಆತನಿದ್ದುದೆ ಕೈಲಾಸ. ಆತ ಸರ್ವಾಂಗ ಲಿಂಗಿಯಯ್ಯಾ ಕೂಡಲಚನ್ನ ಸಂಗಮದೇವಾ.

ಇಂತೀ ಭಕ್ತಸ್ಥಲ ಒಂದರಲ್ಲಿ ಷಡ್ವಿಧಲಿಂಗ ಸಮರಸವನ್ನೈದುತ್ತಿಹುದು ಮುಂದೆ ಮಹೇಶ್ವರ ಸ್ಥಲವಾದುದು. ಆ ಮಹೇಶ್ವರ ಸ್ಥಲದ ತಾಮಸ ನಿರಸನಸ್ಥಲ. ಆ ಸ್ಥಲಾನುಭಾವದ ವಚನ.

## ಮಹೇಶ್ವರಸ್ಥಲದ ತಾಮಸ ನಿರಸನಸ್ಥಲ

೧. ಹಾದರ ಸೂಳೆಗೆ ಕಟ್ಟಿಳೆ ವಿದ್ಯಾವಂತಂಗೆ ಮದ್ದು ಮರ ಹಾವಡಿಗಂಗೆ ಗೆಲ್ಲ ಸೋಲದ ಮಾತು ಮತ್ಸರ ಕೊಲ್ಲಾಟಿಯಂಗಲ್ಲದೆ, ಶಿವಭಕ್ತರಿಗುಂಟೆಯಯ್ಯಾ? ಒಬ್ಬರಿಗೊಬ್ಬರು ಮತ್ಸರಿಸಿ ನರಕಕ್ಕಿಳಿಯ ಹೇಳಿಕೊಟ್ಟನೆ ಶ್ರೀಗುರು ಲಿಂಗವ? ॥ಸಾಕ್ಷಿ॥ ಲಿಂಗ ಭಕ್ತಸ್ಯ ಕೃದ್ವೇಷಿ। ಸಕೃಲ್ಲಿಂಗೇನ ದೂಷಕಂ। ಯುಗಕೋಟಿಕ್ರಿ ಮದ್ಭಕ್ತ್ವ। ವಿಮಾಯ್ಯಾ ಜಾತಿಕ್ರಮಿಃ॥ ಇದನರಿದು ಶಿವಭಕ್ತರು ಮದ ಮತ್ಸರವಂ ಬಿಟ್ಟು, ಗುರು ಲಿಂಗ ಜಂಗಮಕ್ಕೆ ಭಕ್ತಿಯಿಂದೆ ಸರ್ವೋಪಚಾರವಂ ಮಾಡುವ ಭಕ್ತನೆ ಶಿವನೆಂದು ಕಾಣದಿರ್ದೊಡೆ ಅಘೋರ ನರಕವಯ್ಯಾ ಕೂಡಲ ಚನ್ನಸಂಗಮದೇವಾ.

೨. ಅರ್ಥಮದ, ಅಹಂಕಾರಮದ, ಕುಲಮದ, ಛಲಮದ ಬಿಡದು, ಸಮಯಾಚಾರ ಸಮಯೋಚಿತ ಭಕ್ತಿ ಇನ್ನಾರಿಗೆಯು ಅಳವಡದು ನೋಡಾ! ಮಲಿನದ ಮಾರಿಯ ಮಿಂಚಿನ ಢಾಳಕರಿಗೆ ಸಮಯಾಚಾರದ ಭಕ್ತಿ ಎಲ್ಲಿಹದೊ ಅಯ್ಯಾ ಕೂಡಲಚನ್ನಸಂಗಮದೇವಾ?

೩. ಬ್ರಹ್ಮೋಪದೇಶವಾಯಿತ್ತೆಂದು ಬ್ರಹ್ಮದೊಡನೆ ಧಿಕ್ಕರಿಸಬೇಡ. ಕಾಲಜ್ಞಾನವಾಯಿತ್ತೆಂದು ಕರ್ಮವ ಹಳಿಯಬೇಡ. ಶಿವಜ್ಞಾನದೀಪ್ತಿ ತಲೆದೋರಿತ್ತೆಂದು, ಶಿವಶರಣರೊಡನೆ ಧಿಕ್ಕರಿಸಬೇಡ. ಈ ತ್ರಿವಿಧದುತ್ಪತ್ತಿ ಸಲ್ಲದು. ಈ ವೇಶಿಯ ಮಕ್ಕಳಿಗೆ ನಾನೇನೆಂಬೆನಯ್ಯಾ ಕೂಡಲಚನ್ನ ಸಂಗಮದೇವಾ?

೪. ಸತ್ಯವಿಲ್ಲದ ಭಕ್ತಿ ಹತ್ತು ಸಾವಿರ ಕಾಲ ಮಾಡಿವಡೇನು, ನಿಷ್ಠೆ ಇಲ್ಲದ ಪೂಜೆಯನೇಸುಕಾಲ ಮಾಡಿದಡೇನು, ಭಾವ ನೆಲೆಗೊಳ್ಳದನ್ನಕ್ಕರ? ನಿಜವಿಲ್ಲದ ಪ್ರಸಾದವನೇಸು ಕಾಲಕೊಂಡಡೇನು? ಅಭ್ಯಾಸವಾಯಿತ್ತಲ್ಲದೆ ಸಹಜವಲ್ಲ ಸಮ್ಯಕ್ತವಲ್ಲ. ಒಬ್ಬರ ಕಂಡೊಬ್ಬರು ಮಾಡುವರಲ್ಲದೆ ತಮ್ಮ ತಾವು ವಿಚಾರಿಸಿಕೊಳ್ಳಲರಿಯರು. ಇಂತೀ ವಿವರವನರಿಯದ ಅಜ್ಞಾನಿಗಳಿಗೆ ಭಕ್ತಮಹೇಶ್ವರರೆನಲಾಗದಯ್ಯಾ ಕೂಡಲಚನ್ನ ಸಂಗಮದೇವಾ ನೀ ಸಾಕ್ಷಿಯಾಗಿ ಛೀ ಎಂಬೆನು.

೫. ಲೋಕದೊಳಗಿಪ್ಪರು ಲೋಕದಂತೆ ಲೋಕದೊಳಗೆ ಸುಳಿವರು. ಲೋಕದಂತೆ ಲೋಕದ ಹಾಗಿಪ್ಪರು. ಲೋಕದ ಹಗಾಗರು ಲಿಂಗದ ಸುದ್ದಿಯನಿವರೆತ್ತ ಬಲ್ಲರೊ? ಜಂಗಮದ ಸುದ್ದಿಯನಿವರೆತ್ತ ಬಲ್ಲರೋ? ಪ್ರಸಾದದ ಸುದ್ದಿಯ ತಾವೆತ್ತ ಬಲ್ಲರೊ? ಲಿಂಗ ಜಂಗಮದ ಪ್ರಸಾದವೆಂದು ಬರಿದೆ ಹೊರುವ ವಾಗ್ಬ್ರಹ್ಮಿತರು ಈ ತ್ರಿವಿಧಕ್ಕೆ ವಿರಹಿತರೆಂಬೆ ನಮ್ಮ ಕೂಡಲಚನ್ನಸಂಗಯ್ಯನಲ್ಲಿ.

೬. ಮುತ್ತು ನೀರಿನಲ್ಲಿ ಹುಟ್ಟಿ, ಮತ್ತೆ ನೀರಪ್ಪುದೆ? ಆಗದಾಗಿ. ಗುರು ಕಾರುಣ್ಯವ ಪಡೆದ ಭಕ್ತನು ಮರಳಿ ತನ್ನ ಹಿಂದಣ ಪೂರ್ವಾಶ್ರಯವ ಬೆರಸಿದೊಡೆ, ಆಚಾರ ಭ್ರಷ್ಟನಾದ. ಗುರುದ್ರೋಹಿ ಲಿಂಗದ್ರೋಹಿ ಜಂಗಮದ್ರೋಹಿ ಪಾದೋದಕ ಪ್ರಸಾದ ದ್ರೋಹಿ ಇಂತೀ ಷಡ್ವಿಧ ದ್ರೋಹ ಬಂದುದೆಂದರಿಯದವಂಗೆ ಕುಂಭೀಪಾತಕ ನಾಯಕ ನರಕ ತಪ್ಪದಯ್ಯಾ ಕೂಡಲಚನ್ನಸಂಗಮದೇವಾ.

೭. ಗುರುಭಕ್ತಿ, ಗುರು ಭಜನೆ ಇಲ್ಲದ ನರಕಿಯ ನೆರೆಯಲ್ಲಿರಲಾಗದು. ಶಿವಭಕ್ತಿ ಶಿವಭಜನೆ ಇಲ್ಲದ ಪಾಪಿಯ ಸಂಗವ ಮಾಡಲಾಗದು. ಶೈವ ಸನ್ಯಾಸಿ ಪಾಶುಪತಿ ಕಾಳಾಮುಖಿ ಮೊದಲಾದ ಬಹುಮುಖದ ಗುರುವೆಂಬ ಪಾತಕಿಯ ಮಾತಾಡಿಸಲಾಗದು. ತಟ್ಟು ಮುಟ್ಟಿಯನಿಟ್ಟ ಭ್ರಷ್ಟರಿಗೆ ಶಿಷ್ಯನಾದ ಅನಾಮಿಕನ ಮುಖವ ನೋಡಲಾಗದಯ್ಯಾ. ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರವೆಂಬ ಅಷ್ಟಾವರಣದಲ್ಲಿ ಪ್ರೀತಿಪ್ರೇಮವಿಲ್ಲದ ನರಕಿಯ ಗುರುವೆಂಬ ಅಬದ್ಧನ ಮಾತು ಬೇಡವಯ್ಯಾ. ಭಕ್ತಿ ಇಲ್ಲದ ಠಾವಿನಲ್ಲಿ ಯುಕ್ತಿ ಇಲ್ಲ. ಆ ಯುಕ್ತಿ ಇಲ್ಲದವನಲ್ಲಿ ಮುಕ್ತಿ ಇಲ್ಲ. ಈ ಅವಿವೇಕಿಯಾದ ಯುಕ್ತಿ ಶೂನ್ಯನ ಗುರುವೆಂದು ಉಪದೇಶವ ಪಡೆದವನ ಸೊಲ್ಲು ಬೇಡವಯ್ಯಾ. ಸಾಕ್ಷಿ॥ ಜ್ಞಾನವಮಾಚಾರ ಹೀನೇಷು ಸರ್ವವೇದ ಸಮನ್ವಿತಂ। ದೃಷ್ಟ್ವಾ ಚಾಂಡಾಲ ಭಾಂಡೇಷು। ಯಥಾಭಾಗೀರಥೀಜಲಂ। ಎಂದುದಾಗಿ, ಕೂಡಲ ಚನ್ನಸಂಗ ನಿಮ್ಮ ಸಮಯಕ್ಕೆ ಸಮನಿಸದ ಮನುಜರ ಮುಖವನೆನಗೆ ತೋರದಿರಯ್ಯಾ.

ಇಂತೀ ತಾಮಸ ನಿರಸನ ಮಾಡಿದ ನೈಷ್ಠಿಕ ಮಹೇಶ್ವರಸ್ಥಲ. ಆ ಮಹೇಶ್ವರನ ನಿರ್ದೇಶಸ್ಥಲ. ಆ ಸ್ಥಲದನುಭಾವದ ವಚನ.

## ನೈಷ್ಠಿಕ ಮಹೇಶ್ವರಸ್ಥಲ.

೧. ಸಜ್ಜನ ಸದ್ಭಾವಿ ಅನ್ಯರ ಕೈಯ್ಯಾಂತು ಬೇಡ. ಲಿಂಗವ ಮುಟ್ಟಿದ ಕೈ ಮೂಸಲು. ಕಂಗಳಲ್ಲಿ ಒಸೆದು ನೋಡ ಪರಸ್ತ್ರೀಧುವ. ಮನದಲ್ಲಿ ನೆನೆಯ ಪರಹಿಂಸೆಯ. ಮಾನವರ ಸೇವೆಯ ಮಾಡ. ಲಿಂಗವ ಪೂಜಿಸಿ ಲಿಂಗವ ಬೇಡ. ಆ ಲಿಂಗದ ಹಂಗನೊಲ್ಲ. ಕೂಡಲ ಚನ್ನ ಸಂಗಮನೆ ನಿಮ್ಮೊಳು ಸಮರಸೈಕ್ಯವನರಿದ ನಿಜ ಶರಣನು.

೨. ಭಕ್ತಿಪದಾರ್ಥವೆಂದರಿದ ಮಹೇಶ್ವರನು ತನ್ನಲ್ಲಿ ತಾನು ಸನ್ನಿಹಿತನಾಗಿರಬೇಕು. ಎಲ್ಲಿ ಎಂದೊಡೆ ಅತಿ ಸೂಕ್ಷ್ಮವಾದ ಜಂಗಮದಲ್ಲಿ, ಹಾಂಗೆ ಲಿಂಗದಲ್ಲಿ ಹಾಂಗೆ ಪ್ರಸಾದದಲ್ಲಿ ಇಂತೀ ತ್ರಿವಿಧದಲ್ಲಿ ಸಾವಧಾನ ಭಕ್ತಿ ಇಲ್ಲದಿರ್ದೊಡೆ, ಶ್ವಾನ ಯೋನಿಸು ಜಾಯತೆ ಎಂದುದಾಗಿ ಜಂಗಮದಲ್ಲಿ ಪ್ರೀತಿ ಪ್ರೇಮವನುಳ್ಳ ಸಾವಧಾನ ಭಕ್ತಿಯನರುಪುವುದು ನಮ್ಮ ಕೂಡಲಚನ್ನಸಂಗಮದೇವರ ವಚನ.

೩. ಅರೆ ಭಕ್ತರಾದವರ ನೆರೆಯಲ್ಲಿರಲಾಗದು. ಲಿಂಗ ನೈಷ್ಠೆ ಇಲ್ಲದವರ ಅಂಗಣವ ಮೆಟ್ಟಲಾಗದು. ಜಂಗಮ ಪ್ರೇಮಿಗಳಲ್ಲದವರೊಡನೆ ಮಾತಾಡಲಾಗದು. ಪ್ರಸಾದ ಸನ್ನಿಹಿತವಿಲ್ಲದವರ ಸಮಪಂಕ್ತಿಯಲ್ಲಿ ಕುಳಿರಲಾಗದು. ಇದು ಕಾರಣ ಕೂಡಲಚನ್ನಸಂಗಯ್ಯ ನೀ ಸಾಕ್ಷಿಯಾಗಿ ಈ ಚತುರ್ವಿಧ ಸನ್ನಿಹಿತರಲ್ಲದವರುಗಳ ಮೆಚ್ಚರು ನಿಮ್ಮ ಶರಣರು.

೪. ಬಟ್ಟಬಯಲೆಲ್ಲ ಗಟ್ಟಿಗೊಂಡೊಡೆ, ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಹದೊ? ಮೇಘಜಲವೆಲ್ಲ ಮುತ್ತಾದಡೆ, ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಹದೊ? ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದೊಡೆ, ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಹದೊ? ಸಾಕ್ಷಿ॥ ಗುರುಭಕ್ತಿಂ ಪರಿತ್ಯಜ್ಯ ಸದ್ಯೋಪಿ ನರಕಂ ವ್ರಜೇತ್ ; ಇಂತೆಂದುದಾಗಿ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಸಾವಿರಕೊಬ್ಬ ಸತ್ಯ, ಲಕ್ಷಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.

೫. ಪರಧನ, ಪರಸ್ತ್ರೀ, ಪರಹಿಂಸೆಯ ತೊರೆಯದನಕ್ಕರ ಎಂತು ಮಹೇಶ್ವರನಪ್ಪನಯ್ಯಾ! ಗುರುಪ್ರಸಾದದಲ್ಲಿ ನಿಯುತಾವಧಾನಿಯಾಗದವ

ಶ್ವರ ಎಂತೆಪ ಮಹೇಶ್ವರನಪ್ಪನಯ್ಯಾ! ನಮ್ಮ ಕೂಡಲಚನ್ನಸಂಗಯ್ಯ ನಲ್ಲಿ ಮಹೇಶ್ವರನೆನಿಸಿಕೊಂಬುವದೇನು ಸಾಮಾನ್ಯವೆ?

೬. ಲಿಂಗನೈಷ್ಠೆ ನಿಬ್ಬೆರಗು ಗಟ್ಟಿಗೊಂಡೊಡೆ ಮಹೇಶ್ವರ. ಏಕೋಭಾವದಲ್ಲಿ ಸೊಮ್ಮು ಸಂಬಂಧ ಆಹ್ವಾನ ವಿಸರ್ಜನ ನಿರ್ಭಾವ ಬುದ್ಧಿ ನೆಲೆಗೊಂಡೊಡೆ ಆತ ಮಹೇಶ್ವರ. ಗುರುಮುಖದಲ್ಲಿ ಶುದ್ಧವಾಗಿ ಪಂಚ ಭೂತ[illegible] ಹಂಗಡಗಿದೊಡೆ ಆತ ಮಹೇಶ್ವರ. ಪರದೈವದ ಪೂಜೆ ಮಾನವರ ಸೇವೆ ಪರಧನ ಪರ ಸ್ತ್ರೀಹಿಂಸೆಯಂ ಬಿಟ್ಟು ಏಕಲಿಂಗ ನಿಷ್ಠಾಪರನಾಗಿರಬೇಕು. ॥ಸಾಕ್ಷಿ॥ ದಾಸತ್ವ ವೀರದಾಸತ್ವಂ ಭೃತ್ಯತ್ವಂ। ವೀರ ಭೃತ್ಯಯೋಃ। ಸಜ್ಜನಂ ಸಕಳಂ ವಸ್ತ್ರ। ಸಮಯಾಚಾರಂತು ಷಡ್ವಿಧಂ। ಎಂಬ ಶೃತಿಯರ್ಥವ ನೋಡಿ, ನಿಯತನಾಗಬಲ್ಲಡೆ ಆತ ಮಹೇಶ್ವರನಪ್ಪನಯ್ಯಾ. ಗುರುಮಾರ್ಗವೆ ತನಗೆ ಸನ್ಮತವಾಗಿ ತನ್ನ ಮಾರ್ಗವೆ ಗುರುವಿಗೆ ಸನ್ಮತವಾಗಿ ವೀರಶೈವಾಚಾರ ಸಂಪನ್ನನಾಗಿರಬಲ್ಲಡೆ, ಆತ ಮಹೇಶ್ವರನಪ್ಪನಯ್ಯಾ. ಇಂತೀ ಸನ್ಮತದವಿವರವನರಿಯದೆ ನಾನು ಮಾಹೇಶ್ವರ ತಾನು ಮಹೇಶ್ವರರೆಂಬರಯ್ಯಾ. ಈ ಮೂಕೊರೆಯರ ಮೆಚ್ಚುವನೆ ನಮ್ಮ ಕೂಡಲ ಚನ್ನಸಂಗಮದೇವರು?

---

ಇನ್ನು ಮಹೇಶ್ವರನ ಆಚಾರ ಲಿಂಗಸ್ಥಲ. ಇಂತಪ್ಪ ಮಹೇಶ್ವರ ಸ್ಥಲವನಂಗಂಗೊಂಡಿಪ್ಪ ನೈಷ್ಠಿಕಂಗೆ ಷಡ್ವಿಧಲಿಂಗವು ಹೇಗೆ ಬೆರಸಿರ್ಪವೆಂದೊಡೆ ಅವು ಆಚಾರಲಿಂಗಸ್ಥಲದ ವಚನ.

## ಆಚಾರಲಿಂಗಸ್ಥಲ.

೧. ಶಿವ ಜನ್ಮದಲ್ಲಿ ಹುಟ್ಟಿದ ಮೇಲೆ, ಶಿವಶರಣ ರೊಕ್ಕುದು ಕೊಂಬುವುದು. ಭವಭಾರಿಗಳ ಮನೆಯಲ್ಲಿ ಲಿಂಗಾರ್ಚನೆಯ ಮಾಡಲಾಗದು. ಭವವಿರಹಿತ ಲಿಂಗಕ್ಕೆ ಭವಿ ಪಾಕವ ಕೊಟ್ಟೊಡೆ ರೌರವ ನರಕ ತಪ್ಪದು ನೋಡಾ. ॥ಸಾಕ್ಷಿ॥. ಅಸಂಸ್ಕಾರ ಕೃತಂ ಪಾಕಂ। ಶಂಭೋರ್ನೈವೇದ್ಯ ಮೇವ ಚ। ಅನ್ನೈವೇದ್ಯ ಭುಕ್ತ್ಯಾನ್ನಂ। ಪ್ರಸಾದಂ ನಿಷ್ಫಲಂ ಭವೇತ್॥ ಎಂದುದಾಗಿ, ಇದು ಕಾರಣ ಕೂಡಲಚನ್ನಸಂಗಯ್ಯ ಭವಿಪಾಕ ಪುನರಪಿ ಜನ್ಮ.

೨. ಶಿವ ಮಂತ್ರ ಸಂಸ್ಕಾರವಾದಾತನು ತನ್ನ ಲಿಂಗಕ್ಕೆ ಭವಿಗಳನ್ನವ ಮಾಡುವನ್ನಕ್ಕರ, ಭವಿ ಮಿಶ್ರವ ಕಳೆವೆನೆಂದೆನ್ನಬಹುದೆ? ಶಿವ ಮಂತ್ರ ಸಂಸ್ಕಾರವುಳ್ಳವನಾಗಿ, ಜಾತಿಸೂತಕ, ಜನನಸೂತಕ, ಪ್ರೇತ ಸೂತಕ, ಎಂಜಲಸೂತಕ, ರಜಸೂತಕವೆಂಬ ಪಂಚಸೂತಕವುಳ್ಳ ಮಹಾನುಭಾವಿಗಳು ತಮ್ಮ ಲಿಂಗಕ್ಕೆ ಪದಾರ್ಥ ಮಾಡುವದನ್ನಕ್ಕರ ಭವಿಮಿಶ್ರವ ಕಳೆದೆವೆಂತೆನ್ನಬಹುದೆ ಅಯ್ಯಾ? ತನುಭವಿಯ ಹಸ್ತದಿಂದೆ ಪಂಚ ಮಹಾಪಾತಕ. ಮನ ಭವಿಯ ಹಸ್ತದಿಂದೆ ಅಘೋರ ನರಕ. ॥ಸಾಕ್ಷಿ॥ ದುರ್ಮುಖಶ್ಚ ದುರಾಚಾರೀ ಮೂರ್ಖಶ್ಚಗುರುನಿಂದಕಃ। ಭವೀನಾಂ ಪಾಪದೃಷ್ಟಾನಾಂ। ಪಶ್ಚಿನ್ನಂ ಪಟವೃತ್ತ್ವಮಂ॥ ಎಂದುದಾಗಿ ಎಂಬುದ ನರಿದು, ಇಂತಪ್ಪ ಭವಿಯನೊಳಗಿಟ್ಟುಕೊಂಡು ಎನಗೆ ಭವಿ ಮಿಶ್ರವಿಲ್ಲ ವೆಂಬ ಲಜ್ಜೆಗೆಟ್ಟ ದುರಾಚಾರಿಗಳ ನಮ್ಮ ಸಜ್ಜನ ಸದ್ಭಕ್ತರು ಮೆಚ್ಚು ವರೆ? ಮೆಚ್ಚರಯ್ಯ ಕೂಡಲ ಚನ್ನಸಂಗಮದೇವಾ.

೩. ಸದ್ಭಕ್ತರ ಬಸಿರಲ್ಲಿ ಹುಟ್ಟಿದ ಮಕ್ಕಳು ಭವಿಯನಾಚರಿಸಿದೊಡೆ ಪಂಚಮಹಾಪಾತಕವೆಂಬುದು ಗುರುವಚನ. ಸಾಕ್ಷಿ॥ ತಿಲಕೋಟಿಕ ಭಾಗೇನ। ತೃಣಾಗ್ರ ಬಿಂದು ಮುಚ್ಯತೆ। ಅಣುಮಾತ್ರ ಪ್ರಮಾಣೇನ ರೌರವಂ ನರಕಂ ವ್ರಜೆತ್॥ ಎಂದುದಾಗಿ, ಇದು ಕಾರಣ ಕೂಡಲಚನ್ನಸಂಗಯ್ಯ ನಿಮ್ಮ ಶರಣನಿಗೆ ಸಂತಾನವಿಲ್ಲದೆ ಹೋಗಲಿ.

೪. ಉಂಬಲ್ಲಿ ಉಡುವಲ್ಲಿ ಕ್ರಿಯೆಯುಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು. ಇವರಿಗೆ ನಾನೇನೆಂಬೆನಯ್ಯಾ? ವಚ್ಚೋಚ್ಚಿ ಭಕ್ತರು ವಚ್ಚೋಚ್ಚಿ ಭವಿಗಳು. ಇದು ಕಾರಣವಾಗಿ ಕೂಡಲಚನ್ನಸಂಗಯ್ಯ ಇವರಿಗೆ ಭಕ್ತಕಾಯ ಮಮಕಾಯವೆಂತೆನ್ನಬಹುದೆ?

೫. ಕರ್ಮಜಾತವ ಕಳೆದು ಶ್ರೀಗುರುಲಿಂಗವ ಕೊಟ್ಟು ಶಿವ ಜಾತನೆ ಮಾಡಿದ ಬಳಿಕ, ಆತಂಗೆ ಶಿವಕುಲವಲ್ಲದೆ, ಬೇರೆ ಮತ್ತೊಂದು ಕುಲ ಉಂಟೆ ಅಯ್ಯಾ? ಸಾಕ್ಷಿ॥ ಶಿವಜಾತಕುಲಿ ಧರ್ಮಂ। ಪುನರ್ಜನ್ಮವಿವರ್ಜಿತಂ। ಉಮಾ ಮಾತಾ ಪಿತಾ ರುದ್ರಾ। ಈಶ್ವರಂ ಕುಲಮೇವ ಚ। ಎಂದುದಾಗಿ, ಕೂಡಲಚನ್ನಸಂಗಯ್ಯ ನಿಮ್ಮ ಭಕ್ತರ ಮಹೇಶ್ವರರ ಕುಲಕ್ಕೆ ಪ್ರತಿಗಾಣೆನು.

೬. ಅಯ್ಯ ಗುರುಕರುಣವ ಪಡೆದ ಬಳಿಕ, ಕಡು ಭವಿಯ ಬಿಡಬೇಕು. ಲಿಂಗಸಂಗಿಯಾದ ಬಳಿಕ, ಭವಿಸಂಗ ದುಸ್ಸಂಗವೆಂದುದು.

ಅರ್ಪಿತವಿಲ್ಲದೆ ಮುಟ್ಟೆನೆಂದೊಡೆ, ತಟ್ಟುವ ಮುಟ್ಟುವ ಮಾರ್ಗವನರಿಯಬೇಕು. ಲಿಂಗಜಂಗಮದ ಪ್ರಸಾದವಲ್ಲದೆ, ಬಾಯ್ದೆರೆಯನೆಂದೊಡೆ, ಜಿಹ್ವೆಯ ಕೊನೆಯಲ್ಲಿ ರುಚಿಯನರಿಯದಂತಿರಬೇಕು. ಕೂಡಲಚನ್ನಸಂಗಮದೇವಾ ಸರ್ವಾಚಾರ ಸಂಪನ್ನರಲ್ಲದವರ ಮನೆಯ ಪಾಕ ಸೂಕರ ಮಾಂಸಕ್ಕೆ ಸರಿ ಎಂಬೆನಯ್ಯಾ.

೭. ಶಿವಭಕ್ತನಾದ ಬಳಿಕ ಭವಿಮಿಶ್ರವ ನಡೆಯಲಾಗದು. ಅನ್ಯದೈವದ ಭಜನೆಯ ಮಾಡಲಾಗದು. ॥ಸಾಕ್ಷಿ॥ ಮಾತರಂ ಪಿತರಶ್ಚೈವ। ಭರ್ತಾರೋ ಬಾಂಧವ ಸ್ಥಿತಃ। ಶಿವ ಸಂಸ್ಕಾರ ದೇಹಸ್ಯ। ಪಾಕಂ ಗೋಮಾಂಸಭಕ್ಷಣಂ॥ ಎಂದುದಾಗಿ ಕೂಡಲಚನ್ನಸಂಗಯ್ಯ ನಿಮ್ಮ ಲಿಂಗಸಂಗಿಗಳಂಗವಿಸರು.

೮. ಗುರುವಿನಲ್ಲಿ ಸದಾಚಾರ, ಲಿಂಗದಲ್ಲಿ ಶಿವಾಚಾರ, ಜಂಗಮದಲ್ಲಿ ಸಮಯಾಚಾರ, ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ ತನ್ನ ಶೀಲಕ್ಕೆ ಶೀಲ ಸಮವಾಗದವರ ಮನೆಯಲ್ಲಿ ಅನುಸರಣೆಯ ಮಾಡಿ ಸಮ್ಮಿಶ್ರವ ಮಾಡಿದೊಡೆ ನಮ್ಮ ಕೂಡಲಚನ್ನಸಂಗನ ಶರಣ ಪೂರ್ವಾಚಾರಿಯಾದ ಸಂಗನಬಸವಣ್ಣ ಮೆಚ್ಚನಯ್ಯಾ.

೯. ಗುರು ಸ್ವಾಮಿ ಶಿಷ್ಯನ ಅನುಗ್ರಹವ ಮಾಡುವ ಪರಿ ಎಂತೆಂದೊಡೆ, ಅರಿವು ಆಚಾರ ಸಹಿತವಾಗಿ ಶಿಕ್ಷೆ ದೀಕ್ಷೆಯ ಮುಖದಿಂದೆ ಗುರುಸ್ಥಲ ಲಿಂಗಸ್ಥಲ, ಜಂಗಮಸ್ಥಲ ಪ್ರಸಾದಿ ಸ್ಥಲವೆಂದು ವಿವರವ ಮಾಡಿ ಕರುಣಿಸುವುದೆ ಗುರುತತ್ವ. ಈ ಕ್ರಮವನರಿದು ಮಹಾಪ್ರಸಾದವೆಂದು ಕೈಕೊಂಬುವುದೆ ಶಿಷ್ಯತ್ವ. ಇಂತಪ್ಪ ಗುರುಮಾರ್ಗಾಚಾರವನು ಮಹಾಪ್ರಸಾದವೆಂದು ಕೈಕೊಂಡ ಬಳಿಕ ಪರಪಾಕಂಗಳ ಬಿಡಬೇಕು. ॥ಸಾಕ್ಷಿ॥ ಪರಪಾಕಂ। ನ ಕರ್ತವ್ಯಂ। ಲಿಂಗ ನೈವೇದ್ಯ ಕಿಲ್ಬಿಷಂ। ಸ್ವಯಂಪಾಕಂ ಪವಿತ್ರಾಣಾಂ। ಲಿಂಗನೈವೇದ್ಯ ಮುತ್ತಮಂ। ಎಂದುದಾಗಿ ಒಡಲ ಕಕ್ಕುಲಿತೆಗೆ ಭಕ್ತನ ದಾಕ್ಷಿಣ್ಯಕ್ಕೆ ಅನ್ಯಭಜನೆ ಭವಿಮಿಶ್ರದವರ ಮನೆಯಲ್ಲಿ ನೇಮಸ್ತರುಗಳು ಹೊಕ್ಕು ಲಿಂಗಾರ್ಚನೆಯ ಮಾಡಿದಡೆ ಅನ್ನ ಪಾಕಾದಿಗಳ ಕೊಂಡಡೆ ನಾಯಡಿಗ ನರಮಾಂಸವು ತಪ್ಪದಯ್ಯಾ ಕೂಡಲಚನ್ನಸಂಗಮದೇವಾ.

೧೦. ದೇವಂಗಾಗಲಿ, ಭಕ್ತಂಗಾಗಲಿ, ಲಿಂಗಕ್ಕಾಗಲಿ, ಜಂಗಮಕ್ಕಾಗಲಿ, ಸದಾಚಾರ ಬೇಕಲ್ಲದೆ, ಆ ಸದಾಚಾರವುಳ್ಳವರಿಗೆ, ಅನಾಚಾರ

ಹೊದ್ದಲಾಗದು. ಅನಾಚಾರವೆಂದೊಡೆ ಅನಾಯತ, ಅನಾಯತವೆಂದೊಡೆ ಅನುಸರಣೆ, ಅನುಸರಣೆ ಎಂಬುದೆ ಅಂಗದಿಚ್ಛೆ, ಅಂಗದಿಚ್ಛೆ ಎಂಬುದೆ ಅನಾಚಾರ, ಅನಾಚಾರವೆಂಬುದೆ, ಪಂಚಮಹಾಪಾತಕ. ಇದು ಕಾರಣವಾಗಿ, ಕೂಡಲಚೆನ್ನಸಂಗಯ್ಯನಲ್ಲಿ ಆಚಾರವಂತರೆನ್ನಿಸಿಕೊಂಡ ಬಳಿಕ, ಅನಾಚಾರಕ್ಕೆ ಅನುಸರಣೆಯ ಮಾಡಿದರೆ, ಆಚಾರಭ್ರಷ್ಟರಿಗೆ ಅನುಸರಿಸಿ ನಡೆದೊಡೆ, ಅಘೋರ ನರಕ ತಪ್ಪದು ನೋಡಿರೆ.

೧೧. ನೊಸಲ ಕಣ್ಣುಳ್ಳವನಾದಡೂ ಆಗಲಿ, ಅವನ ಮುಖವ ನೋಡಲಾಗದು. ಆ ಭಕ್ತನ ಅಂಗದ ಮೇಲೆ ಶಿವಲಿಂಗವಿಲ್ಲದಿರ್ದೊಡೆ ಅವನ ಮನೆಯಲ್ಲಿ ಮಾಡಿದ ಪಾಕಗೋಮಾಂಸ ಅದಾಗಿ ಬಲ್ಲವರೊಲ್ಲರು. ಶಿವಭಕ್ತನಲ್ಲದವನ ಮನೆಯಲ್ಲಿ ತಿಂಬುವಂಗೆ ಜನ್ಮಜನ್ಮಾಂತರ ಶ್ವಾನ ಯೋನಿಯಲ್ಲಿ ಬಪ್ಪುದು ತಪ್ಪದಯ್ಯಾ. ಕೂಡಲಚೆನ್ನಸಂಗಮದೇವಾ.

೧೨. ಬೀದಿಯ ಬಸವಂಗೆ ದೇಗುಲದ ಪಶುವಿಂಗೆ ಹುಟ್ಟಿದ ಕರುವುಗಳು ಬಸವಿ ಬಸವಗಳಪ್ಪವೆ, ಲಿಂಗಮುದ್ರೆಯನೊತ್ತದನ್ನಕ್ಕರ? ಭಕ್ತಂಗೆಯು ಭಕ್ತೆಗೆಯು ಹುಟ್ಟಿದ ಮಕ್ಕಳೆಂದನುಸರಣೆಯ ಮಾಡಿದಡೆ; ಅಘೋರ ನರಕವೆಂದುದು ನಮ್ಮ ಕೂಡಲಚೆನ್ನಸಂಗಯ್ಯನ ವಚನ.

೧೩. ಶಿವಭಕ್ತರಲ್ಲಿ ಗರ್ಭೋತ್ಪತ್ತ್ಯವಾದ ಶಿಶುವಿಂಗೆ ಪಾದೋದಕದಿಂದೆ ಜಳಕವ ಮಾಡಿಸುವುದು. ವಿಭೂತಿಯ ಪಟ್ಟವಂ ಕಟ್ಟಿ ಕೊರಳಲ್ಲಿ ಲಿಂಗಸಾಹಿತ್ಯವಂ ಮಾಡಿ, ಪ್ರಸಾದದ ಎಣ್ಣೆ ಬೆಣ್ಣೆ ಹಾಲು ತುಪ್ಪವನೆರೆದು ಸಲಹುವುದೆ ಆಚಾರ ಅದಕ್ಕೆ. ಇರುಳುಗೂಳಿ ಭೂತ ಸೋಂಕಿತೆಂದು ಕಾಣಿಕೆಯ ಬೆಸಗೊಂಡು,' ಲೌಕಿಕಾಚಾರವ ಮಾಡುವ ಭ[illegible] ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪಾದೋದಕವಿಲ್ಲ ಪ್ರಸಾದ[illegible] ಪ್ರಸಾದವಿಲ್ಲದವಂಗೆ ಮುಕ್ತಿ ಇಲ್ಲ. ಇದನರಿದು ಅಷ್ಟಾವರಣ ಪಂಚಾ[illegible]ಚಾರದಲ್ಲಿ ನಚ್ಚುಮೆಚ್ಚು ಅಚ್ಚೊತ್ತಿದಂತಿಲ್ಲದವರ ಮೆಚ್ಚುವರೆ ನಮ್ಮ ಕೂಡಲಚೆನ್ನಸಂಗಯ್ಯನ ಶರಣರು?

ಮಹೇಶ್ವರನ ಗುರುಲಿಂಗಸ್ಥಲ. ಅಂತಪ್ಪ ಆಚಾರದಲ್ಲಿ ಷಣ್ಮುರಸ ವನೆಯ್ದಿರ್ಪ ಗುರುಲಿಂಗಸ್ಥಲ. ಆ ಸ್ಥಲದನುಭಾವದ ವಚನ.

ಆ ಶ್ರೀಗುರು ಶಿಷ್ಯಂಗೆ ಅನುಗ್ರಹವ ಮಾಡುವ ಪರಿ ಎಂತೆಂದೊಡೆ,

## ಮಹೇಶ್ವರನ ಗುರುಲಿಂಗಸ್ಥಲ.

೧. ಲಿಂಗಜಂಗಮದ ಪಾದೋದಕ ಪ್ರಸಾದ ಈ ಚತುರ್ವಿಧವು ಘನವೆಂದು ನಂಬಿ ಈ ಚತುರ್ವಿಧ ಸಾರಾಯ ಲಂಪಟನಾಗಯ್ಯಾ ಮಗನೆ ಎಂದು ಹೇಳಿ ಕೊಟ್ಟ ಬಳಿಕ ಅಂತಪ್ಪ ಪರಶಿವಲಿಂಗವ ತನ್ನಂತರಂಗ ದಲ್ಲಿ ಸಾಹಿತ್ಯವ ಮಾಡಿಕೊಂಡು ಹುಸಿ ಕಳವು ವಿಷಯ ಪರದಾರ ಪರದ್ರವ್ಯ ಪರನಿಂದೆ ಪರಹಿಂಸೆ ಇಂತೀ ಸಮಸ್ತ ಗುಣ ವಿರಹಿತನಾಗಿ ಅನ್ಯದೈವ ಭವಿಮಿಶ್ರವ ಬಿಟ್ಟು ಲಿಂಗಕ್ಕೆ ಮಜ್ಜನಕ್ಕೆರೆವುದೆ ಶಿವಾಚಾ ರವು. ಇದೇ ಆಚಾರದ ಗೊತ್ತು ಕಂಡಯ್ಯಾ ಮಗನೇ ಎಂದು ಹೇಳಿ ಕೊಟ್ಟು ಉಪದೇಶವನೆ ಕೇಳಿಕೊಂಡು ನಡೆಯಬಲ್ಲಡೆ, ಆತನೆ ನಿತ್ಯ ಮುಕ್ತನು. ಆ ಗುರುಶಿಷ್ಯರಿಬ್ಬರು ನಿಮ್ಮೊಳಗೇಕವಾಗಿರ್ದುದು ಉಪಮಿ ಸಬಾರದ ಘನವು. ಇಂತಲ್ಲದೆ ಕೊಡು ಕೊಂಬ ಗುರುಶಿಷ್ಯರಿಬ್ಬರಿಗೆಯು ಯಮದಂಡನೆ ತಪ್ಪದಯ್ಯಾ ಕೂಡಲ ಚನ್ನಸಂಗಮದೇವಾ.

೨. ಗುರು ಲಿಂಗ ಜಂಗಮವೇಕವಾದುದೆ ಗುರುವಲ್ಲದೆ ಪಿತ ಮಾತೆ ಸತಿ ಸುತ ಅತ್ತೆ ಮಾವ ಇದಲ್ಲದೆ, ಯೋಗಿ ಜೋಗಿ ಶ್ರವಣ ಸನ್ಯಾಸಿ ಕಾಳಾಮುಖಿ ಪಾಶುಪತಿ ಎಂಬ ಷಡುದರ್ಶನದ ಶೈವ ಕರ್ಮಿ ಗಳು ಗುರುವು ಗುರುವೆಂಬದಕ್ಕೆ ನಾಚದವರನೇನೆಂಬೆನಯ್ಯಾ? ಆ ಮಹಾ ಘನ ಗುರುಲಿಂಗ ಇಂತಿವನೆಲ್ಲರ ಸರಿಗಂಡಡೆ ಒಂದೆ ಎಂದು ನುಡಿದಡೆ [illegible]ೋರ ನರಕ ತಪ್ಪದಯ್ಯಾ ಕೂಡಲಚನ್ನಸಂಗಮದೇವಾ.

೩. ತನ್ನ ಪುತ್ರಂಗೆ ತಾನೆ ಗುರುವಾದೆನೆಂಬ ಗುರುದ್ರೋಹಿಯ ಮಾತು ಕೇಳಲಾಗದು. ಎನಗೆ ಎನ್ನ ತಂದೆಯೇ ಗುರುವೆನ್ನುವ ದ್ರೋ ಹಿಯ ಮುಖವ ನೋಡಲಾಗದು. ಅವರಿಬ್ಬರೊಳಗೆ ಗುರು ಶಿಷ್ಯ ಸಂ ಬಂಧವನಾಚರಿಸಿದೊಡೆ, ಅವರಿಬ್ಬರ ತರ್ಕಿಸಿ ಕಟ್ಟಿ ಹೊತ್ತಿಸಿ ನೊಂದಿಸಿ, ಸುಡುವ ನಮ್ಮ ಕೂಡಲಚನ್ನಸಂಗಮದೇವಾ.

ಇನ್ನು ಮಹೇಶ್ವರನ ಶಿವಲಿಂಗಸ್ಥಲ. ಇಂತಪ್ಪ ಗುರು ಲಿಂಗದ ಸೃಷ್ಟಿಯೊಳಪ್ಪ ಮಹೇಶ್ವರನ ಶಿವಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಮಹೇಶ್ವರನ ಶಿವಲಿಂಗಸ್ಥಲ.

೧. ಸಾಕ್ಷಿ॥ ಏಕೋ ದೇವ ನ ದ್ವಿತೀಯನೆಂಬ ಶೃತಿಯನರಿದು ಮತ್ತೆ ದೈವ ಉಂಟೆಂಬ ನೀಚ ಪರವಾದಿಗಳು ನೀವು ಕೇಳಿರೋ ಭೋ. ಶೃತಿ॥ ಓಂ ನಿಧಾನಾಯನಮಃ। ನಿಧಾನ ಪತಂತಿ ಕಾಯ ನಮಃ। ಊರ್ಧ್ವಾಯ ನಮಃ। ಊರ್ಧ್ವ ಲಿಂಗಾಯ ನಮಃ। ಹಿರಣ್ಯಾಯ ನಮಃ। ಹಿರಣ್ಯಲಿಂಗಾಯ ನಮಃ। ಸುವರ್ಣಾಯ ನಮಃ। ಸುವರ್ಣ ಲಿಂಗಾಯನಮಃ। ಶಿವಾಯನಮಃ। ಶಿವಲಿಂಗಾಯನಮಃ॥ ದಿವ್ಯಾಯನಮಃ। ದಿವ್ಯಲಿಂಗಾಯನಮಃ। ಭವಾಯ ನಮಃ। ಭಾವಲಿಂಗಾಯ ನಮಃ। ಸರ್ವಾಯ ನಮಃ। ಸರ್ವಲಿಂಗಾಯ ನಮಃ। ಜ್ಯೇಷ್ಠಾಯ ನಮಃ। ಜ್ಯೇಷ್ಠ ಲಿಂಗಾಯ ನಮಃ। ಶ್ರೇಷ್ಠಾಯ ನಮಃ। ಶ್ರೇಷ್ಠಲಿಂಗಾಯ ನಮಃ। ಜ್ವಾಲಾಯ ನಮಃ। ಜ್ವಾಲಲಿಂಗಾಯ ನಮಃ ವ್ಯಾಲಾಯ ನಮಃ। ವ್ಯಾಲಲಿಂಗಾಯ ನಮಃ। ವ್ಯೋಮಾಯ ನಮಃ। ವ್ಯೋಮಲಿಂಗಾಯ ನಮಃ। ಆತ್ಮಾಯ ನಮಃ। ಆತ್ಮಲಿಂಗಾಯ ನಮಃ। ಓಂ ಯಥಾ ಸೋಮ ಸೂರ್ಯಸ್ಯ। ಸರ್ವಲಿಂಗ ಸ್ಥಾಪಯೇತ್॥ ಇತಿ ಪಾಣಿ ಮಂತ್ರ ಪವಿತ್ರ ಎಂದುದಾಗಿ ಇವನರಿದರಿದು ಮತ್ತೆ ದೈವವೆಂಬ ಭ್ರಷ್ಟ ದ್ವಿಜರೆಲ್ಲರು ಪಾಪ್ಗಭ್ರಮಿತರಯ್ಯಾ ಕೂಡಲ ಚನ್ನಸಂಗಮದೇವಾ.

೨. ಓಂ ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ ಶಿವಸ್ಯ ಹೃದಯಂ ವಿಷ್ಣು, ವಿಷ್ಣೋಸ್ಯ ಹೃದಯಂ ಶಿವಂ ಯಥಾ ಶಿವ ಮಯಂ ವಿಷ್ಣುಃ ಏವಂ ವಿಷ್ಣುಮಯಂ ಶಿವಃ। ಇಂತೆಂಬ ಅಪಸ್ಮಾರಿ ನಪಃ ತೊತ್ತಗಳು ನೀವು ಕೇಳಿರೊ. ॥ಶೃತಿ॥ ಓಂ ಭುವಂ ಓಂ ಭುವಃ। ಓಂಸ್ವಃ। ಓಂಮಹಃ। ಓಂಜನಃ। ಓಂಸತ್ಯಂ। ಓಂನಿತ್ಯಂ। ಓಂತತ್ಸ ವಿತುರ್ವರೇಣ್ಯಂ। ಭರ್ಗೊ ದೇವಸ್ಯಧೀಮಹಿ। ಧಿಯೋ ಯೋನಃ। ಪ್ರಚೋದಯಾತ್। ಇಂತೆಂಬ ಶೃತಿಯೊಳಗೆ ಆ ಶಬ್ದ ಉಳ್ಳೊಡೆ ತೋರಿ ರೋ ತೊತ್ತುಗಳಿರಾ. ಹೀಗೆಂತೆಂದರಿಯರಿ. ಇನ್ನು ಮುಂದೆ ಆಚರಿಸಲ ರಿಯಿರಿ. ಇಂತಪ್ಪ ದ್ವಿಜರಿಗೆ ಶ್ವಾನರೆಂಬೆ. ಅಂತ್ಯಜರನೇನೆಂಬೆನಯ್ಯಾ ಕೂಡಲ ಚನ್ನಸಂಗಮದೇವಾ?

೩. ಓಂ ಪಂಚಾಕ್ಷರದ ಪ್ರಣವಂಗಳು ಆದಿಯನಾದಿ ಇಲ್ಲ ದಂದು ಉತ್ಪತ್ತಿಸ್ಥಿತಿಲಯಂಗಳಿಲ್ಲದಂದು, ಭಕ್ತಿಯ ಮಗನು ಭವಿಯ ಬಸಿರೊಳಗಿರ್ದು, ಆ ಸತ್ಯಜ್ಞಾನವೆಂಬ ಬಸಿರೊಳಗೆ ಸತ್ಯಜ್ಞಾನಗಳೆಂಬ ಶಾಸ್ತ್ರಂಗಳು ಪುಟ್ಟಿದವು. ಆ ಶಾಸ್ತ್ರದೊಳಗಡಗಿದವು ವೇದ. ಪೌರಾಣಾ ಗಮಂಗಳು ಆ ಆಗಮಂಗಳೊಳಡಗಿದವು. ಐವತ್ತೆರಡಕ್ಷರಂಗಳು ಆ ಐವತ್ತೆರಡಕ್ಷರಂಗಳೊಳಡಗಿದವು. ಇಪ್ಪತ್ತೇಳು ನಕ್ಷತ್ರಂಗಳು ಆ ಇಪ್ಪ ತ್ತೇಳು ನಕ್ಷತ್ರಂಗಳೊಳಗಡಗಿದವು. ಈರೇಳು ಲೋಕದ ಗಳಿಗಿ ಜಾವ ದಿನ ಮಾಸ ಸಂವತ್ಸರಂಗಳು ಇಂತಿವೆಲ್ಲವನೊಳಗಿಟ್ಟುಕೊಂಡು, ಓಂ ನಮಃ ಶಿವಾಯ ಎಂಬಾತನು ಮಹಾಲಿಂಗವು ಕಾಣಿರೆ. ಹೊರಗಿಪ್ಪಾ ತನು ಓಂ ನಮಃ ಶಿವಾಯ ಎಂಬಾತ ಕಾಣಿರೆ. ಉಳಿದವರು ಮಂತ್ರ ಭ್ರಷ್ಟರು. ಮತ್ತಿರ್ದ ಯೋಗಿಜಂಗಮರೆಲ್ಲರು ಈ ಭೂಸುರರೆಲ್ಲರೂ ಶಾಪಹತ ರಾಗಿ ಹೋದರು ಕೇಳಿರೋ. ಇದು ಕಾರಣವಾಗಿ ಓಂ ನಮಃ ಶಿವಾಯ ಎಂಬಾತ ಇಷ್ಟ ಬ್ರಹ್ಮವೆಂಬ ಮಹಾ ಲಿಂಗವು. ಆ ಪಂಚಾಕ್ಷರವೇ ಪರಮೇಶ್ವರನು. ಆ ಪಂಚಾಕ್ಷರವೇ ಪರತತ್ವವು. ಆ ಪಂಚಾಕ್ಷರವೇ ಪರಮ ಯೋಗ. ಆ ಪಂಚಾಕ್ಷರವೇ ಪರಂಜ್ಯೋತಿಯು. ಆ ಪಂಚಾ ಕ್ಷರವೇ ಪರಮಾತ್ಮನು. ನಾ ಎಂಬಕ್ಷರವೇ ದೇವರ ಚರಣ. ಮಾ ಎಂಬ ಕ್ಷರವೇ ದೇವರ ಒಡಲು. ಶೀ ಎಂಬಕ್ಷರವೇ ದೇವರ ಹಸ್ತ. ವಾ ಎಂಬ ಕ್ಷರವೇ ದೇವರ ನೇತ್ರ. ಮತ್ತೆ ನಾ ಎಂಬಕ್ಷರವೇ ದೇವರ ದಮೆ. ಮಾ ಎಂಬಕ್ಷರವೇ ದೇವರ ಶಾಂತಿ. ಶೀ ಎಂಬಕ್ಷರವೇ ದೇವರ ಕ್ರೋಧ. ವಾ ಎಂಬಕ್ಷರವೇ ದೇವರ ಮನ. ಯಾ ಎಂಬಕ್ಷರವೇ ದೇವರ ಶಬ್ದ. ಮತ್ತೆ ನಾ ಎಂಬಕ್ಷರವೇ ಪೃಥ್ವಿ. ಮಾ ಎಂಬಕ್ಷರವೇ ಅಪ್ಪು. ಶೀ ಎಂಬಕ್ಷರವೇ ಅಗ್ನಿ. ವಾ ಎಂಬಕ್ಷರವೇ ವಾಯು. ಯಾ ಎಂಬಕ್ಷರವೇ ಆಕಾಶ. ಮತ್ತೆ ನಾ ಎಂಬಕ್ಷರವೇ ಬ್ರಹ್ಮ. ಮಾ ಎಂಬಕ್ಷರವೇ ವಿಷ್ಣು. ಶೀ ಎಂಬಕ್ಷರವೇ ರುದ್ರ. ವಾ ಎಂಬಕ್ಷರವೇ ಶಕ್ತಿ. ಯಾ ಎಂಬಕ್ಷ ರವೇ ಲಿಂಗ. ಇಂತೀ ಪಂಚಾಕ್ಷರದೊಳಗಳಿವ ಅಕ್ಷರ ನಾಲ್ಕು ಉಳಿ ದಕ್ಷರ ಒಂದು. ಈ ಪಂಚಾಕ್ಷರವೆಂಬವು ಏಕಾಕ್ಷರವ ಮಾಡಿದ ಬಳಿಕ, ದೇವನೊಬ್ಬನೆ ಎಂದರಿದು ಬ್ರಹ್ಮ ದೈವವೆಂಬ ಬ್ರಹ್ಮೇತಿಕಾರರನೇನೆಂಬೆ ನಯ್ಯಾ? ವಿಷ್ಣು ದೈವವೆಂಬ ವಿಚಾರ ಹೀನರನೇನೆಂಬೆನಯ್ಯಾ? ಅಶ್ವಿ ನೀ ಭರಣಿ ಕೃತ್ತಿಕಾ ಮೊದಲಾದ ಇಪ್ಪತ್ತೇಳು ನಕ್ಷತ್ರಂಗಳೊಳಗೆ ಮೂಲಾ

ನಕ್ಷತ್ರದಲ್ಲಿ ಹುಟ್ಟಿದನಾಗಿ ಮೂಲನೆಂಬ ಪೆಸರಾಯಿತ್ತು. ದೇವರ ಸೇವ್ಯ ಕ್ಕಾರ್ಯಕ್ಕೆ ಅಪ್ರಶಸ್ತನೆಂದು ವೇದಂಗಳು ಬಿನ್ನೈಸಲು ಜ್ಯೋತಿಷ್ಯ ಜ್ಞಾನ ಶಾಸ್ತ್ರಂಗಳು ಹುಸಿಯಾದವೆಂದು ನಿಮ್ಮ ಹರಿಯು ಅಡವಿಯಲ್ಲಿ ಬಿಸಾಡಲು, ಅಲ್ಲಿ ಅಳುತಿರ್ದ ಮಗನ ಭೂದೇವತೆ ಸಲಹಲು, ಭೂಕಾಂತನೆಂಬ ಪೆಸರಾಯಿತ್ತು. ಆ ಭೂಚಕ್ರ ತನ್ನ ತೋರಿಸಿ, ನೋಡಿಸಿ ಶಿವಧರ್ಮಾಗಮಪ್ರಜೆಯಲ್ಲಿ ಯುಕ್ತನ ಮಾಡಿದ ಬಳಿಕ, ಮತ್ತೆ ನಮ್ಮ ದೇವರ ಶ್ರೀಚರಣದಲ್ಲಿರುತ್ತಿರಲು ದೇವರು ಪೌರಾಣಂಗಳಂ ಕರೆದು ಈ ವಿಷ್ಣುವಿನ ಪಾಪ ಏನು ತೋರು ಎಂದನು. ಆ ಪೌರಾಣಂಗಳಿಂತೆಂದವು ॥ಶ್ರುತಿ॥ ಮೂಲ ನಕ್ಷತ್ರ ಬಹುಪಾತಕಂ। ವಿನರಿಜನರ್ನಿಕರಣ ಪಾಪಂ ಪರ್ವತ ಸ್ಥೂಲಂ। ಸ್ವೈರಿಣಾಂ ಶಿವೇ ದಾಸೋಹಂ ಶಿವೇ ದೇಶಾ ವೀಶ್ವರಾಯ ಪಾಪಂ ಸಂಹರತ್॥ ಎಂದು ಪುರಾಣಂಗಳು ಹೇಳಲಾಗಿ ವಿಷ್ಣು ಕೇಳಿ, ಆ ಪುರಾಣದ ಕೈಯ್ಯಲ್ಲಿ ದೀಕ್ಷಿತನಾಗಿ ಪುರಾಣ ಪುರುಷೋತ್ತಮನೆಂಬ ಹೆಸರಂ ಪಡೆದ ಬಳಿಕ, ಮತ್ತೆ ನಮ್ಮ ದೇವರ ಪಾದರಕ್ಷೆಯಂ ತಲೆಯ ಮೇಲೆ ಹೊತ್ತುಕೊಂಡು ಭೂತಂಗಳಿಗಂಜಿ ಶಂಖವಂ ಪಿಡಿದುಕೊಂಡು, ದುರಿತಂಗಳಿಗಂಜಿ, ನಾಮವನಿಟ್ಟುಕೊಂಡು, ಪ್ರಳಯಕ್ಕಂಜಿ, ವೇಷವ ಧರಿಸಿಕೊಂಡು, ರಾಕ್ಷಸರಿಗಂಜಿ, ಚಕ್ರವ ಪಿಡಿದುಕೊಂಡು, ಅದಲ್ಲದೆ ಇತ್ತ ಶಿವನ ದಾಸನೆಂದು ದಾಸೋಹಧಾರಿಯಾಗಿ, ಕಸಪೊರಿಕೆಯಂ ಪಿಡಿದು, ಅಂಗಳಂಗೂಡಿಸಿ, ಬಾಗಿಲಿಯಂ ಕಾಯ್ದು ನೀರಂ ಹೊತ್ತು ಮುಕುಳಿಯಂ ತೊಳೆದು, ಲಕ್ಷ ವರುಷ ಶಿವಭಕ್ತಿಯಂ ಮಾಡಿ, ಮತ್ತೆ ಪಡೆದನು ಗರುಡವಾಹನವನು ಸತೀ ಮಹಾಲಕ್ಷ್ಮಿಯನು ಕ್ಷೀರವಾರ್ಧಿಯನು. ಇಂತೀ, ಜಯವುಂ ಪಡೆದು, ದೇವರ ಎಡದ ಗರ್ದುಗೆಯನೋಲೈಸಿರ್ಪವನ ದೇವರು ದೇವರೆಂದು, ನೀವವೆಂತೆಂಬಿರಣ್ಣಾ? ವಚನ ಶುದ್ಧ ಭಾವಶುದ್ಧದಲ್ಲಿ ಭಕ್ತಿಯುಳ್ಳವರಾಗಿ ನೀವು ಹೊತ್ತಿರ್ದ ವೇದದಲ್ಲಿ ಓದಿ ತಿಳಿದು ನೋಡಿರಿ. ತಂದೆ ತಾಯಿ ಇಂದ್ರಿಯದಲ್ಲಿ ಬಂದವರು ದೇವರೇ? ಸಂದೇಹದ ಭ್ರಮೆಯಲ್ಲಿ ಸಿಲ್ಕಿದವರು ದೇವರೆ? ಶುಕ್ಲ ಶೋಣಿತದಲ್ಲಿ ಬೆಳೆದವರು ದೇವರೇ? ಆತಂಗೆ ತಂದೆ ತಾಯಿ ಎಂದು, ಹುಟ್ಟಿಸಿದವ ಬಲ್ಲಡೆ ಹೇಳಿರೋ. ಅರಿಯದಿರ್ದಡೆ ಕೇಳಿರೋ. ಹಿಂದೆ ಸಂದ ಯುಗಂಗಳು ಶತ ಕೋಟಿ ಸಂಖ್ಯೆಯ ಮೇ[illegible] ಏಳು ಲಕ್ಷದ ಸಾವಿರದ ಏಳುನೂರೆಪ್ಪತ್ತು ಯುಗಂಗಳು ಇದಕ್ಕೆ

ವೃಷ್ಟ. ನವಕೋಟಿ ನಾರಾಯಣರಿರ್ದರೆಂದು ಶತಕೋಟಿ ಬ್ರಹ್ಮರಿಂದ್ರರೂ ಉಳಿದವರ ಪ್ರಳಯವ ಹೊಗಲಿನ್ನಾರಸವು. ಇಂತಿವನೆಲ್ಲವನಳಿದು, ಉಳಿದಿಪ್ಪಾತನೊಬ್ಬನೆ. ಆತಂಗೆ ಜನನ ಮರಣ ಕಾಲ ಕಲ್ಪಿತವೆಂಬ ಪ್ರಳಯಂಗಳುಂಟಾದೊಡೆ, ಹೇಳಿರೋ ಅಧಮ ಚಾಂಡಾಲರಾದ ವಿಪ್ರ ಪಶುವಾದಿಗಳಿರಾ. ಇದು ಕಾರಣವಾಗಿ, ಆ ನಿಜನಿತ್ಯಂಗೆ ನಮೋ ನಮೋ ಎಂಬೆನಯ್ಯಾ ಕೂಡಲಚನ್ನಸಂಗಮದೇವಾ.

೪. ನಿಮ ನಿಮಗೆ ನೀವು ಎಲ್ಲ ಬಲ್ಲೆವೆಂಬಿರಿ. ಹರಿ ಹತ್ತು ಭವಕ್ಕೆ ಬಂದಲ್ಲಿ ಅಜನ ಶಿರವರಿದಲ್ಲಿ ಅಂದೆಲ್ಲಿಗೆ ಹೋದವೋ ನಿಮ್ಮ ವೇದಂಗಳು? ಮತ್ತೆ ಕೇಳಿರೋ ನಿಮ್ಮ ಶಾಸ್ತ್ರ ಪುರಾಣಂಗಳೆಲ್ಲ ನಮ್ಮ ಚನ್ನಯ್ಯನ ಕೈಯ್ಯಲ್ಲಿ ಹಾಗವನೊಯ್ದುಕೊಡೆ, ಕಂಕಣದ ಕೈಯ್ಯ ಕಂಡು ಧನ್ಯರಾಗಲಿಲ್ಲವೆ? ನಿಮ್ಮ ಮಾತಂಗಿಯ ಮಕ್ಕಳೆಂದು ಗಗನದಲ್ಲಿ ಸ್ನಾನವ ಮಾಡಿ, ಆಕಾಶದಲ್ಲಿ ಘೋತ್ರವ ಹರಹಿ ಹೋಗುವಾಗ ನಮ್ಮ ಶ್ವಪಚಯ್ಯಗಳು ಒಕ್ಕುದ ಕೊಂಡು ಧನ್ಯರಾಗರೇ ಸಾಮವೇದಿಗಳು? ನಿಮ್ಮ ನಾಲ್ಕು ವೇದವನೋದಿದ ವಿಪ್ರರ ಕೂಡಿಸಿಕೊಂಡು ವಾದದಿ ನಮ್ಮ ಭಕ್ತರ ಮನೆಯ ಕಾಳುಗನು. ಇದು ಕಾರಣ ಕೂಡಲ ಚನ್ನಸಂಗಯ್ಯ ನಮ್ಮ ಶರಣರ ಮುಂದೆ ಈ ಒಡ್ಡುಗಳ ಒಡ್ಡು ಪ್ರತಿ ಮಾಡಿ ತೋರಲಿಲ್ಲವಯ್ಯಾ.

೫. ವೇದವನೋದಿದ ಹೊಲೆಯನಲ್ಲಿ ಹೋದ ದ್ವಿಜರು ಕೆಟ್ಟ ಕೇಡಿಂಗೆ ಕಡೆ ಮೊದಲಿಲ್ಲ. ಅದು ಹೇಗೆಂದೊಡೆ, ಹೇಮದಾಸೆಗೆ ಒಕ್ಕಲಿಗಂಗೆ ಸತ್ತ ಪುತ್ರನಾಗೆಂದು ಹೇಳಿತ್ತೆ ನಿಮ್ಮ ವೇದ? ಬಡಿಗಿ ಮಾಚಲದೇವಿಯ ಕುಲಜೆಯ ಮಾಡಿದೆವೆಂದು ಹೊನ್ನ ಕಪಿಲೆಯ ಕೊಂದು ನರಕಕ್ಕೆಳಿಯ ಪೇಳಿತ್ತೆ ನಿಮ್ಮ ವೇದ? ಅಹಿಂಸೋ ಪರಮೋ ಧರ್ಮವೆಂಪೋದಿ ಅಸುರ ಭೋಗಕ್ಕೆ ಅಂಗವಿಸಿ ಕರ್ಮವ ಮಾಡಿ ಹೋತಿನ ಕೊಂದು ತಿಂಬುವುದು ಪಾತಕವಲ್ಲವೇ? ॥ಸಾಕ್ಷಿ॥ ಪರಮೋ ಧರ್ಮ ಹಿರಣ್ಯಗರ್ಭೋ ಎಂದು ಹೊನ್ನ ಕಪಿಲೆಯ ಮಾಡಿಸಿ ಕಡಿಕಡಿದು ಹಂಚಿಕೊಂಬುವುದು ಚಾಂಡಾಲವಲ್ಲದೆ ಹೊಲೆಯರೆಂತೆ ಹುಲ್ಲು ಹೆಣನಂ ಸುಟ್ಟು ಹೊರಸಿನ ಮೇಲೆ ಹಿತವಾದ ಕರುಳು ಹತ್ತಿದ ಪಶುವಿನ ವಿಶ್ರಾಂತಿಯ ವನವಲ್ಲಿ ಕೂಳ ಭೋಜನವೆಂದುಂಡು ಲೋಕೋಪಚಾರಕ್ಕೆ ಒಳಗಾಗಿ ಇಂತಹ ಪಾತಕ ಕರ್ಮವ ಮಾಡಿ ಸಲ್ಲದೆ ಹೋದ

ಶಿವಂಗೆ. ಇದು ಕಾರಣ ಕೂಡಲ ಚನ್ನಸಂಗಮದೇವಾ ನೀವು ನಿಮ್ಮ ಭಕ್ತರಿಗೊಲಿದ ಕಾರಣ ಕಂಚೀಪುರವ ಕೈಲಾಸಕ್ಕೊಯ್ದೆ.

೬. ಅಷ್ಟತನುಮೂರ್ತಿ ಎಂಬ ಮಾತಿನ ಪಾತಕವ ಕೇಳಲಾಗದು. ಅದೆಂತೆಂದೊಡೆ ಪೃಥ್ವಿಯಂತೆ ಕಠಿಣ ಉಳ್ಳಾತನೇ? ಅಪ್ಪುವಿನಂತೆ ರಸ ಭರಿತ ಉಳ್ಳಾತನೇ? ತೇಜದಂತೆ ತೃಣಕಾಷ್ಠವಿಲ್ಲದಿದ್ದೊಡೆ ನಂದುವಾತನೇ? ವಾಯುವಿನಂತೆ ಚಲನೆಯುಳ್ಳಾತನೇ? ಆಕಾಶದಂತೆ ಬಟ್ಟ ಬಯಲಾದಾತನೇ? ಚಂದ್ರ ಸೂರ್ಯರಂತೆ ದಿವಾರಾತ್ರಿಯ ನಡಿಸುವ ಕೃತ್ಯದಾತನೇ? ಜೀವಾತ್ಮನಂತೆ ಜನನ ಮರಣಕ್ಕೊಳಗಹನೇ? ಇದು ಕಾರಣವಾಗಿ ಕೂಡಲ ಚನ್ನಸಂಗಮದೇವಾ ನೀವು ನಿಮ್ಮಂತೆ ಉಳಿವವೆಲ್ಲವು ನೀವಿರಸಿದಂತೆ.

೭. ಸರ್ವವು ಶಿವನಿಂದುದ್ಭವಿಸಿದವೆಂದೊಡೆ ಹುಟ್ಟಿದವೆಲ್ಲವು ಶಿವನೇ? ಸಕಲ ಬೀಜವ ಬಿತ್ತುವ ಒಕ್ಕಲಿಗನೆಂದೊಡೆ, ಆ ಬೆಳೆಯೆಲ್ಲ ಒಕ್ಕಲಿಗನೆ? ಮಡಕೆಯ ಮಾಡುವವ ಕುಂಬರನೆಂದೊಡೆ ಆ ಮಡಕೆ ಎಲ್ಲವು ಕುಂಬರನೇ? ಕಬ್ಬಿಣವು ಕಂಬರ ಮಾಡುವನೆಂದೊಡೆ, ಆ ಕಬ್ಬಿಣವು ಕಂಬರನೆ? ಈ ಪರಿಯಲ್ಲಿ ಸಕಲ ಸಚರಾಚರ ಪ್ರಾಣಿಗಳೆಲ್ಲವನು ಶಿವ ತನ್ನ ವಿನೋದಕ್ಕೆ ಸೇವಕರಿಂದೆ ಸೃಷ್ಟಿಸಿದೊಡೆ ಆ ಸಚರಾಚರದ ಪ್ರಾಣಿಗಳೆಲ್ಲವು ಶಿವನೇ? ಹಾಗಾದೊಡೆ, ಅಷ್ಟಾದಶವರ್ಣಂಗಳೇಕಾದವು? ಭವಿ ಭಕ್ತರೆಂಬುಭಯವೇಕಾದವು? ಆಚಾರ ಅನಾಚಾರವೇಕಾದವು? ಇದು ಕಾರಣವಾಗಿ ಸದಾಚಾರ ಸದ್ಭಕ್ತಿಯಲ್ಲಿಪ್ಪುದು. ಅಲ್ಲಿಪ್ಪನಲ್ಲದೆ ಎಲ್ಲ ಒಂದೆ ಎಂದು ಬೊಗಳುವ ಚಾಂಡಾಲರಿಗೆ ಅಘೋರ ನರಕ ತಪ್ಪದಯ್ಯಾ ಕೂಡಲ ಚನ್ನಸಂಗಮದೇವಾ.

ಮಹೇಶ್ವರನ ಜಂಗಮಲಿಂಗಸ್ಥಲ. ಇಂತೀ ಶಿವಲಿಂಗ ನಿಷ್ಠೆಯೊಳಿಪ್ಪ ಮಹೇಶ್ವರನ ಜಂಗಮಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಮಹೇಶ್ವರನ ಜಂಗಮಲಿಂಗಸ್ಥಲ

೧. ಕೃತಯುಗ ಚೌತೀಸ ಲಕ್ಷ ಐವತ್ತಾರುಸಾವಿರ ವರುಷದಲ್ಲಿ ಕೇತಾರೇಶ್ವರ ದೇವರು ಪೃಥ್ವಿಗೆ ಮೂಲಸ್ಥಾನ. ತ್ರೇತಾಯುಗ ಹದಿನೇಳುಲಕ್ಷ ಇಪ್ಪತ್ತೆಂಟು ಸಾವಿರ ವರುಷದಲ್ಲಿ ಸ್ವೇತುಬಂಧರಾಮೇಶ್ವರದೇವರು ಪೃಥ್ವಿಗೆ ಮೂಲಸ್ಥಾನ. ದ್ವಾಪರಯುಗ ಎಂಟುಲಕ್ಷ ಅರವತ್ತು ನಾಲ್ಕು ಸಾವಿರ ವರುಷದಲ್ಲಿ ಸೌರಾಷ್ಟ್ರ ಸೋಮೇಶ್ವರ ಪೃಥ್ವಿಗೆ ಮೂಲಸ್ಥಾನ. ಕಲಿಯುಗ ನಾಲ್ಕುಲಕ್ಷ ಮೂವತ್ತೆರಡು ಸಾವಿರ ವರುಷದಲ್ಲಿ ಶ್ರೀಗಿರಿ ಚನ್ನಮಲ್ಲಿಕಾರ್ಜುನ ದೇವರು ಪೃಥ್ವಿಗೆ ಮೂಲಸ್ಥಾನ. ಇದು ಕಾರಣ ಕೂಡಲಚನ್ನಸಂಗಮದೇವಾ ನಿಮ್ಮ ಭಕ್ತರಿಗೆ ಜಂಗಮವೆ ಮೂಲಸ್ಥಾನ ಅಂದು ಮೊದಲು ಇಂದು ಕಡೆಯಾಗಿ.

೨. ಎಂಟು ಲಕ್ಷ ಒಂದು ಸಾವಿರದ ಇನ್ನೂರು ದೇವರಿಗೆ ಮಾಡಿದ ಬೋನವು ಒಬ್ಬ ಜಂಗಮ ಆರೋಗಣೆಯ ಮಾಡುವ. ಒಂದು ಲಕ್ಷ ಅರುವತ್ತು ಸಾವಿರದ ಇನ್ನೂರು ದೇವರು ಕೂಡಿ ಒಬ್ಬ ಜಂಗಮಕ್ಕೆ ಮಾಡಿದ ಬೋನವನಾರೋಗಿಸಲರಿಯವು. ಅದು ಕಾರಣವಾಗಿ ಅಂತಪ್ಪ ದೇವರಿಗಿಂತಲು ಜಂಗಮವೆ ಘನವು ನೋಡಿರೆ. ಕೃತಯುಗದಲ್ಲಿ ಸುವರ್ಣದ ಲಿಂಗವಾದಲ್ಲಿ ನಿನ್ನ ಹೆಸರೇನು? ತ್ರೇತಾಯುಗದಲ್ಲಿ ಬೆಳ್ಳಿಯ ಲಿಂಗವಾದಲ್ಲಿ ನಿನ್ನ ಹೆಸರೇನು? ದ್ವಾಪರ ಯುಗದಲ್ಲಿ ತಾಮ್ರದ ಲಿಂಗವಾದಲ್ಲಿ ನಿನ್ನ ಹೆಸರೇನು? ಹದಿನೆಂಟು ಜಾತಿ ನೂರಾ ಒಂದು ಕುಲದ ಕೈಯ್ಯಲ್ಲಿ ಕಿಲುಬು ಹೋಯಿತ್ತು. ಕಲಿಯುಗದಲ್ಲಿ ಕಲ್ಲು ಲಿಂಗವಾದಲ್ಲಿ ಇಕ್ಕಿದ ಬೋನವನುಣ್ಣದೇಕೊ? ಹಿಂದೆ ನಾಲ್ಕು ಯುಗದಲ್ಲಿ ಅಳಿದು ಹೋದುದನರಿಯಿರೆ. ಇನ್ನೇಕೆ ದೇವರೆಂದು ಆಚರಿಸುವಿರೊ? ಸಾಕ್ಷಿ॥ ಸ್ಥಾವರಂ ಜಂಗಮಶ್ಚೈವ । ದ್ವಿವಿಧಂಲಿಂಗಮುಚ್ಯತೆ ಜಂಗಮಶ್ಚೈವ ಮಾನೇನ ಸ್ಥಾವರಂ ನಿಷ್ಫಲಂ ಭವೇತ್ । ಸ್ಥಾವರಾರ್ಪಿತ ನೈವೇದ್ಯಂ ನ ತೃಪ್ತಿಲಿಂಗಮೇವ ಚ । ಜಂಗಮಾರ್ಪಿತ ನೈವೇದ್ಯಂ । ಮಮತೃಪ್ತಿಂ ತು ಪಾರ್ವತಿ ॥ ಇದು ಕಾರಣವಾಗಿ, ಕೂಡಲಚನ್ನಸಂಗಮದೇವಯ್ಯ

ತಪ್ಪದೆ ನಾಲ್ಕು ಯುಗದಲ್ಲಿ ಜಂಗಮವೆ ಪ್ರಾಣಲಿಂಗವಾದ ಕಾರಣ, ಸ್ಥಾವರವು ಜಂಗಮ ಪ್ರಸಾದಕ್ಕೆ ಯೋಗ್ಯವಾಯಿತ್ತು.

೩. ತನು ಮನ ಧನ ತ್ರಿಸ್ಥಾನ ಸಂಗವಾಯಿತ್ತು. ಆಗಿ ಭಕ್ತಿಯು ಮಪವೇರಿತ್ತು. ಸದ್ಭಕ್ತಿ ಸಂಭಾಷಣೆ ಕ್ರಿಯೆ ಕ್ರಿಯೆಯುರತು ತೂರ್ಯಾ ತೂರ್ಯಗೊಂಡಿತ್ತಾಗಿ, ಲಿಂಗದಲ್ಲಿ ಅರಿವು ಜಂಗಮದಲ್ಲಿ ಮರವು ಕೂಡಲ ಚನ್ನಸಂಗ ತಾನು ತಾನಾಗಿ.

೪. ಪೂರ್ವಿಕ ಪೂಜಕ ಅಪೂರ್ವಿಕ ಭಕ್ತ ಕರ್ಮ ಪೂಜಕ ಲಿಂಗ ಪೂಜಕ ಜಂಗಮ ಭಕ್ತನ ಪೂರ್ವ ಸೂತಕ ವಿರಹಿತ ನಮ್ಮ ಕೂಡಲ ಚನ್ನಸಂಗಮದೇವರಲ್ಲಿ ಅಚ್ಚ ಶರಣ.

೫. ಸುಖ ಶೀಲ ಲಿಂಗಧ್ಯಾನ ಸಮಶೀಲ ಜಂಗಮ ಪ್ರೇಮಿ. ಮಹಾಶೀಲ ಅವರಂದಂತೆ ಎಂಬುವುದು. ಈ ತ್ರಿವಿಧವ ಸರಿದೊಡೆ ಆತನೆ ನಮ್ಮ ಕೂಡಲ ಚನ್ನಸಂಗಮದೇವನೆಂಬೆ.

೬. ಎನ್ನ ತನುವೆಂಬವಂಗೆ ಬ್ರಹ್ಮನಿಕ್ಕಿದ ಕೋಳವಾಯಿತ್ತಯ್ಯಾ. ಎನ್ನ ಸ್ತ್ರೀ ಎಂಬುವಂಗೆ ವಿಷ್ಣುವಿಕ್ಕಿದ ಸಂಕೋಲೆಯಾಯಿತ್ತಯ್ಯಾ. ಎನ್ನ ಧನವೆಂಬುವಂಗೆ ರುದ್ರನಿಕ್ಕಿದ ಆಶೆ ರೋಷವೆಂಬ ಜಂಜುರಿ ಬೀಗಿತ್ತಯ್ಯಾ. ಎನ್ನ ಕುಲವೆಂಬುವಂಗೆ ರುದ್ರನಿಕ್ಕಿದ ಸೆರೆ ಸಂಕೋಲೆಯ ಬಂದಿಖಾನೆ ಯೊಳು ಬಿದ್ದನು ನೋಡಾ. ಇಂತೀ ಕೊರಳುದ್ದಕ್ಕೆ ಹೂಳಿಸಿಕೊಂಡು, ಮುಗಿಲುದ್ದಕ್ಕೆ ಹಾರೆನೆಂಬುವರು ನಾನು ಭಕ್ತ ನಾನು ಮಹೇಶ್ವರನೆಂಬ ನುಡಿಗೆ ನಾಚರು ನೋಡಾ. ಆ ಭಕ್ತನ ಮಠಕ್ಕೆ ಜಂಗಮ ನಿರಂತರ ಬರುತ್ತಿರಲು ಬ್ರಹ್ಮನಿಕ್ಕಿದ ಕೋಳ ಕಡಿಯಿತ್ತು. ಆ ಭಕ್ತನ ಸ್ತ್ರೀಯಳು ನಿರಂತರ ಜಂಗಮದಾಸೋಹವ ಮಾಡುತ್ತಿರಲು, ರುದ್ರ ವಿಷ್ಣುವಿಕ್ಕಿದ ಸಂಕೋಲೆಯು ಕಡಿಯಿತ್ತಯ್ಯಾ. ಆ ಭಕ್ತನ ಧನವು ನಿರಂತರ ಜಂಗಮಕ್ಕೆ ಸವಿಸುತ್ತಿರಲು ರುದ್ರನಿಕ್ಕಿದ ಆಶೆ ರೋಷದ ಜಂಜುರಿ ಬಿಟ್ಟಿತ್ತಯ್ಯ. ಆ ಭಕ್ತನು ತನ್ನ ಜಾತಿಸೂತಕವ ಕಳೆದು ಶಿವಭಕ್ತರ ಕುಲವ ವಿಚಾರಿಸದೆ ಜಾತಿ ಶಿವಜಾತಿ ಕುಲ ಶಿವಕುಲವೆಂದರಿದು ನಿರಂತರ ಬೆರಸಿಕೊಂಡಿರುತ್ತಿರಲು ಈಶ್ವರನಿಕ್ಕಿದ ಸೆರೆ ಸಂಕೋಲೆಯ ಬಂದೀಖಾನೆ ಯಿಂದ ಹೊರಹೊರಟ ನೋಡಯ್ಯ. ಇಂತು ಇದಲ್ಲದೆ ಸಹಜರಾದ ಸದ್ಭಕ್ತರ ಶ್ರೀಪಾದವನೆನಗೆ ತೋರಿಸಿ ಬದುಕಿಸಯ್ಯಾ ಕೂಡಲ ಚನ್ನಸಂಗಮದೇವಾ.

ಮಹೇಶ್ವರನ ಪ್ರಸಾದಲಿಂಗಸ್ಥಲ. ಇಂತು ಜಂಗಮಲಿಂಗದಲ್ಲಿ ಸೃಷ್ಟಿಯಾಗಿರ್ಪ ಮಹೇಶ್ವರನ ಪ್ರಸಾದಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಮಹೇಶ್ವರನ ಪ್ರಸಾದಲಿಂಗಸ್ಥಲ.

೧. ಗುರುದ್ರೋಹಿಯಾದವನ ಮುಖವ ನೋಡಲಾಗದು. ಮತ್ತೆ ನೋಡಬಹುದು. ಅದೆಂತೆಂದೊಡೆ ಮುಂದೆ ಲಿಂಗ ಉಂಟಾದ ಕಾರಣ. ಲಿಂಗದ್ರೋಹವ ಮಾಡಿದವನ ಮುಖವ ನೋಡಲಾಗದು. ಮತ್ತೆ ನೋಡಬಹುದು. ಅದೇನು ಕಾರಣವೆಂದೊಡೆ, ಮುಂದೆ ಜಂಗಮ ಉಂಟಾದ ಕಾರಣ. ಜಂಗಮ ದ್ರೋಹವ ಮಾಡಿದವನ ಮುಖವ ನೋಡಲಾಗದು. ಮತ್ತೆ ನೋಡಬಹುದು. ಅದೇನು ಕಾರಣವೆಂದಡೆ, ಮುಂದೆ ಪಾದತೀರ್ಥ ಇಹುದಾಗಿ. ಪಾದತೀರ್ಥ ದ್ರೋಹಿಯಾದವನ ಮುಖವ ನೋಡಲಾಗದು. ಮತ್ತೆ ನೋಡಬಹುದು. ಅದೆಂತೆಂದಡೆ, ಮುಂದೆ ಪ್ರಸಾದವಿಹುದಾಗಿ. ಪ್ರಸಾದ ದ್ರೋಹವ ಮಾಡಿದವನ ಮುಖವ ನೋಡಲಾಗದು. ಮತ್ತೆ ನೋಡಬಹುದು. ಅದೇನು ಕಾರಣವೆಂದೊಡೆ, ನಮ್ಮ ಕೂಡಲ ಚನ್ನಸಂಗಯ್ಯನ ಪ್ರಸಾದ ವಿರಹಿತವಾದೊಡೆ ಮುಂದೆ, ಪ್ರಸಾದ ಬಿಟ್ಟು ಪರವಿಲ್ಲವಾದ ಕಾರಣ.

೨. ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗವೆಂಬ ನಾಲ್ಕು ಯುಗಂಗಳಿಗೆ ಸತ್ಯಲೋಕ, ತಪೋಲೋಕ, ಜನಲೋಕ, ಸ್ವರ್ಗಲೋಕಕ್ಕೆ ಅತಿಶಯುವೆನಿಪ ಕಲ್ಯಾಣವಂ ಮಾಡಿ, ಮಹವಪ್ಪ ಭಕ್ತಿಯುಂ ಪುಟ್ಟಿಸಿ, ಬಸವರಾಜದೇವರು ಮೊದಲಾದ, ಮಹಾಗಣಂಗಳ ದಿವ್ಯ ಶ್ರೀಪಾದ ಪದ್ಮಾರಾಧಕನಾಗಿ, ಆನು ಬಲ್ಲೆನು, ಬಲ್ಲೆನು ಎಂಬ ಗರ್ವವಿಲ್ಲದೆ, ನೀವು ಕೊಟ್ಟನುಗ್ರಹದ ಬಿನ್ನಪವನವಧರಿಸುದು. ಭಕ್ತಿ ಸೂಕ್ಷ್ಮ ಭಕ್ತಿ ಕ್ರಮ ಶರಣ ಸತಿ ಲಿಂಗಪತಿಯಾದ ಸಂಬಂಧ ಪಾದೋದಕ ಪ್ರಸಾದ ನಿರ್ಣಯ. ಇಂತೀ ಕ್ರಿಯಾಜ್ಞಾನದ ಅದ್ವೈತಮುಂ ಆನು ಬಲ್ಲಷ್ಟು ಬಾಲ ತೊದಲ್ನುಡಿಯಿಂದೆ ವಿಸ್ತರಿಸಿ ಪೇಳ್ವೆನು. ಮಹಾ ಮಹಿಮರು ಕೇಳಿರಯ್ಯಾ. ಶೈವ ಶೈವರಿಗಾದ ಪಾಶುಪತ ಮತವನರಿಯ. ಕಾಳಾಮುಖ ಕಂಗೆಟ್ಟ. ಮಹಾ ವ್ರತಿ ಮದವೇರಿದ. ಸನ್ಯಾಸಿ ಪಾಷಂಡಿಯಾದ. ಜೋಗಿ ಧೀರ ತಿರುಗುತಿರ್ದ. ಈ ಆರು ಭಕ್ತಿಯ ಪಥಕ್ಕೆ ಸಲ್ಲವು ಕೇಳಿರಣ್ಣಾ. ಏಳೇಳು ಜನ್ಮಾಂ

ತರದಲ್ಲಿ ಭವಿಯಾಗಿ, ಶ್ರೀಗುರು ಕಾಂಕ್ಷೆ ಸಾಂಕ್ಷೆ ಸಿಷ್ಯೆಯಿಂದವೆ ಪ್ರಾಣ ಮೇಲೆ ಇಷ್ಟವ ಪ್ರತಿಷ್ಠೆಯಂ ಮಾಡಿಕೊಂಡು, ಅದರಿಂದ ವೀರ ಸ್ಥಲವಿಟ್ಟು ನಡೆದು, ವೀರ ಮಾಹೇಶ್ವರತ್ವಮಂ ಪಡೆದು, ಮರಳಿ ತ ಕುಲವೆಂದು ಹೇಸಿದೊಡೆ, ಒಡೆನೆ ಮಡಿಕೆ ಬಿಡದಂತಿಹನು ಕೇಳಿರಣ್ಣ ತನ್ನ ಕುಲವೆಂದು ಪ್ರಾಣ ಸ್ನೇಹವನು ಮಾಯಾಮೋಹವನು ಕಿಂಚಿ ಬೆರಸಿದನಾದೊಡೆ ಅವನು ಪಂಚಮಹಾಪಾತಕನು. ಅವನು ಭಕ್ತನೆಂ ನೋಡಿದೊಡೆ, ನುಡಿದೊಡೆ, ಅವನ ಸಮವಾಗಿ ಕುಳಿತು ಸಂಭಾಷಣೆ ಮಾಡಿದೊಡೆ, ಅವನ ಕೈಯೊಡ್ಡಿ ಬೇಡಿದೊಡೆ, ಅವಂಗೆ ಕುಂಭೀಪಾ ತಕ ನಾಯಕ ನರಕ ತಪ್ಪದು ಕಾಣಿರಣ್ಣ. ಶುದ್ಧ ಸಿದ್ಧ ಪ್ರಸಿದ್ಧ ಮಾರ್ಗದ ಭೇದವ ಸೂಕ್ಷ್ಮಾಕೃತಿ ಸೂಕ್ಷ್ಮನಾಗಿ ಪೇಳುವೆನು. ಆ ಪರಮ ಸದ್ಭಕ್ತನು ಲಿಂಗಪೂಜೆಯ ಮಾಡಿ, ಆ ಲಿಂಗಾರ್ಚನೆಯಾದ ಮೇಲೆ, ಲಿಂಗಾರ್ಪಿತವ ಮಾಡುತ್ತಿರಲು, ಆ ಸದ್ಭಕ್ತನಲ್ಲಿ ಪದಾರ್ಥ ಹೆಚ್ಚಿರಲು, ಅಲ್ಲಿ ಸಹಜ ಮುಗಿವುತ್ತಿರಲು, ಆ ಸಮಯದಲ್ಲಿ ನೀಡಿ ಮಾಡುವಲ್ಲಿ ದಿರಲು, ಅಲ್ಲಿ ಪದಾರ್ಥವೆ ಇಲ್ಲದಿರಲು, ಆ ಸಮಯದಲ್ಲಿ ಒಡೆಯರು ಬಿಜಯಂಗೈಯ್ಯಲು, ಆ ಭಕ್ತನು ಆ ವಿವರವನರಿದು, ತಾ ಕೊಂಡುದೆ ಪ್ರಸಾದ, ನಿಂದುದೆ ಪದಾರ್ಥವಾಗಿ ನೀಡಬಹುದಯ್ಯ. ಇದಲ್ಲದೆ ತನಗೆ ಘನವಾಗಿದ್ದೊಡೆಯು ಫಲಗ್ರಾಹಕದಿಂದ ಮುಗಿಯಲಾಗದು. ಲಿಂಗದೇ ಹಿಗಳಿಗುಣಿಸಿ, ದ್ರವಪಾರಿಸಿಕೊಂಬುವುದು. ಇದಲ್ಲದೆ ಸಹಜವಾದಡೆಯು ಆಗಲಿ. ಹೀಗಿಷ್ಟು ಪ್ರಕಾರದ ಯೋಚನೆಯನುಂಟು ಮಾಡಿಕೊಂಡು, ಮುಂದೆ ಒಡೆಯರ ತೃಪ್ತಿಂಗಿಂತೆಂದು, ಆಲೋಚನೆಯ ಚಿಂತಿಸಿ ನೀಡ ಬಹುದು. ನೀಡಬಹುದೋ ನೀಡಬಾರದೋ ಎಂದು ಸಂದೇಹವ ತಾಳಲಾಗದು. ಈರ್ವರಿಂದ ಸಂದೇಹವ ತಾಳಿದೊಡೆ, ಲಿಂಗಕ್ಕೆ ದೂರ, ಜಂಗಮಕ್ಕೆ ದೂರ, ಪ್ರಸಾದಕ್ಕೆ ಸಲ್ಲರು. ಆವ ಸದ್ಭಕ್ತನಲ್ಲ. ಆವ ದೇವರಲ್ಲ. ಶುದ್ಧ ಸಿದ್ಧ ಪ್ರಸಿದ್ಧವನೊಡಗೂಡಿ, ಭಕ್ತಿ ಪದಾರ್ಥವಾಗಿ, ಸುಶಬ್ದ ಮುಖದಿಂದೆ ಬಂದು, ಪ್ರಸಿದ್ಧ ಮುಖಕ್ಕೆ ನೀಡಬಹುದಯ್ಯಾ. ಸಂದೇಹ ತಾಳಲಾಗದು. ಇದು ಭಕ್ತ ಮಹೇಶ್ವರರಿಗೊಂದೆ ನಿರ್ಣಯವು. ಅದೆಂತೆಂದೊಡೆ ಭಕ್ತಿರೂಪೆ ಗುರು ರೂಪು, ಗುರುರೂಪೆ ಭಕ್ತ ರೂಪೆಂಬುದಾಗಿ ಆ ಭಕ್ತಂಗೆ ಭವಿ ನೇಮಸ್ತರು ಸಲ್ಲರಯ್ಯಾ. ಭವಿ ಸ್ಪೃಷ್ಟ್ಯಾದೃಷ್ಟ ಸಮಗಾರ ಇವರಿಬ್ಬರು ಸತಿ ಸುತ ಮಿತ್ರರೆಂದು ಮಠವು ಹೊಗಿಸಿಕೊಂಡೊಡೆ, ಅನ್ನಪಾನಾದಿಗಳಂ ನೀಡಿದೊಡೆ, ಸುರೆಯ ಮಡಿ

ಕೆಯಂ ತೊಳೆದು, ಕ್ಷೀರ ಘೃತಮಂ ತುಂಬಿ, ಶ್ವಾನನ ಕರೆದು ತಿನಿಸಿ, ಮಿಕ್ಕುದ ತಾ ತಿಂದಂತೆ ಕಾಣಾ! ಭಕ್ತ ಲಿಂಗಾರ್ಪಿತವ ಮಾಡಿದ ಪತ್ರ ಭಾಜನವಂ ಶ್ವಾನ ಸೂಕರ ಗಾರ್ದಭ ಕುಕ್ಕುಟ ಮಾ[illegible]ಲಂಗಳು ಮುಚ್ಚಿದೊಡೆ, ಅವರ ಕೂಡೆ ಸಹಭೋಜನವ[illegible] ಮಾಡಿದಂತೆ ಕಾಣಿರಣ್ಣಾ! ಮತ್ತೆ ಆ ಗುರುಲಿಂಗಜಂಗಮದಲ್ಲಿ ನಿರ್ಣಯವ ಕೇಳಿರಣ್ಣಾ! ಮಾರ್ಗಕ್ರಿಯೆಯಲ್ಲಿ ನಯ ನುಡಿ ನಮಸ್ಕಾರ ಭಯ ಭಕ್ತಿ ಕರುಣ ಕಿಂಕುರ್ವಾಣವು ಕರ್ತೃ ಭೃತ್ಯತ್ವದ ಅನು[illegible]ಭಾವವನರಿಯಿರೆ. ಆ ಜಂಗಮವು ಅರ್ಪಿತವ ಮಾಡಿದ ಬಳಿಕ ಒಕ್ಕು ಮಿಕ್ಕ ಪ್ರಸಾದವ ಭೋಗಿಸುವಲ್ಲಿ, ಪದಾರ್ಥವೆಂದು ಭಾವಿಸಿದೊಡೆ, ಪ್ರಸಾದ ದ್ರೋಹವಯ್ಯಾ. ಆ ಜಂಗಮದಲ್ಲಿ ಅಸ್ಥಿರ ಬುದ್ಧಿ, ಅಸ್ಮೃತ ವಾಕ್ಯ, ಪಂಕ್ತಿ ಭೇದ, ಉದಾಸೀನ, ನಿರ್ದಯ, ಈ ಐದು ಜಂಗಮ ದ್ರೋಹವಯ್ಯಾ! ಲಿಂಗದಲ್ಲಿ ಪ್ರೀತಿ ಪ್ರೇಮ ಸ್ನೇಹ ಮೋಹ ವಿಶ್ವಾಸವಿಲ್ಲದಿರ್ದೊಡೆ, ಪ್ರೇತ ಲಿಂಗ ಸಂಸ್ಕಾರಿ ಭೂತ ಪ್ರಾಣಿ ಎನಿಸುವುದು. ಈ ಐದು ಲಿಂಗದ್ರೋಹವಯ್ಯಾ! ಗುರುವಿನಲ್ಲಿ ಅಹಂಕಾರ, ಭಯವಿಲ್ಲದಿಹ, ಸಮಪಙ್ತಿಯಲ್ಲಿ ಕುಳ್ಳಿರುವ, ಸಂಭಾಷಣೆಯ ಮಾಡುವ, ಕೈಯೊಡ್ಡಿ ಬೇಡುವ ಈ ಐದು ಗುರುದ್ರೋಹವಯ್ಯ! ಇದು ಕಾರಣ ಗುರು ಲಿಂಗ ಜಂಗಮಕ್ಕೆ ಸಕಲ ಪದಾರ್ಥವ ಸಲ್ಲಿಸಿ ಪ್ರಸಾದವೆಂದು ಕೊಂಡು ಎಂಜಲೆಂದು ಕೈದೊಳೆದೊಡೆ, ಅಘೋರ ನರಕವಯ್ಯಾ ಕೂಡಲ ಚನ್ನಸಂಗಮದೇವಾ.

೩. ಅವಸರದಾರೋಗಣೆಯು ಅಪ್ಯಾಯನವಾದಲ್ಲಿ ಈ ತ್ರಿವಿಧ ಮುಖದಲ್ಲಿ ಅರ್ಪಿತವಾದೊಡೆ, ಆತ ಪ್ರಸಾದಿ ಎಂಬೆನು. ॥ಸಾಕ್ಷಿ॥ ಲಿಂಗಸ್ಯಾವಸರೆ ಯಸ್ತು ಅರ್ಚಂತಿ ಧ್ಯಾತು ಸಂಭವೆ। ಎಂದುದಾಗಿ, ಇದು ಕಾರಣ ಕೂಡಲ ಚನ್ನಸಂಗಯ್ಯ ನಿಮ್ಮ ಅವಸರವರಿತು ಅರ್ಪಿಸುವ ಅರ್ಪಣ ಸದ್ಭಾವಿಗಲ್ಲದೆ ದುಶ್ಚೇಷ್ಟೆಯ ದುರ್ಭಾವಿಗೆ ಸಲ್ಲದಯ್ಯಾ.

೪. ಭೃತ್ಯಾಚಾರಿಗಲ್ಲದೆ ಭಕ್ತ್ಯಾಚಾರವಳವಡದು. ವೇದಶಾಸ್ತ್ರ ಪುರಾಣಾಗಮವನರಿದ ಸಂಬಂಧಿಗಲ್ಲದೆ ಆಚಾರವಳವಡದು. ಅದೇನು ಕಾರಣವೆಂದೊಡೆ, ಅರಿದರಿದು ಭವಿಪಾಕವೆಂದು ಕಳೆದ ಬಳಿಕ ಜಂಗಮಕ್ಕೆ ನೀಡಿದಡೆ, ಅದೆ ಪಾತಕವಯ್ಯಾ. ಅದೆಂತೆಂದೊಡೆ, ತನ್ನ ಲಿಂಗಕ್ಕೆ ಸಲ್ಲದಾಗಿ, ಜಂಗಮಕ್ಕೆ ಸಲ್ಲದು. ॥ಸಾಕ್ಷಿ॥ ಲಿಂಗಭೋಗಸ್ಯ ಭೋಗಿನಾಂ। ಭೋಗಂ ಜಂಗಮ ವರ್ಜಿತಂ। ಅಂಗಹೀನಂ ಚ ಭುಕ್ತಾನಾಂ। ಶ್ವಾನ

ಯೋನಿಷು ಜಾಯತೆ। ಎಂದುದಾಗಿ ಇದುಕಾರಣ ಕೂಡಲ ಚೆನ್ನ ಸಂಗಯ್ಯಾ ಇಂತಪ್ಪ ದುರಾಚಾರಿಯ ಮುಖವನೆನಗೆ ತೋರದಿರಯ್ಯಾ.

೫. ತನ್ನ ಲಿಂಗಕ್ಕೆ ಬಾರದ ರುಚಿಯ ಜಂಗಮಕ್ಕೆ ಸಲ್ಲಿಸಿ ಕೈಯ್ಯೊಡ್ಡಿ ಪ್ರಸಾದವನಿಕ್ಕು ಎಂಬುವಂಗೆ ಅದು ಪ್ರಸಾದವಲ್ಲ. ಸಿಂಗಿ ಕಾಳ ಕೂಟ ವಿಷ ಕಾಣಿರಣ್ಣಾ. ಆ ಪ್ರಸಾದಕ್ಕೆ ವ್ರತಿಗಳೆಂಬುವರು ಅದು ವ್ರತವಲ್ಲ. ಬಿಡದ ಕರ್ಮ. ಅದು ಪ್ರಸಾದವಲ್ಲ. ಕಿಲ್ಬಿಷವಯ್ಯಾ ಕೂಡಲ ಚೆನ್ನಸಂಗಮದೇವಾ.

೬. ತನ್ನ ಲಿಂಗಕ್ಕೆ ಕೊಡಬಾರದ ಠಾವಿನಲ್ಲಿ, ಪ್ರಸಾದವ ಕೊಂಡು, ತುಡುಗುಣಿ ನಾಯಂತೆ ತಿಂಬುವರನೇನೆಂಬೆನಯ್ಯ? ಅದು ತನ್ನ ಒಡಲ ಹೊರೆವುದಲ್ಲದೆ, ಹಿಡಿದ ಕುಳಕ್ಕೆ ಸಲ್ಲದು ॥ಸಾಕ್ಷಿ॥ ದ್ರವ್ಯಂ ತು ಶುಭಂ ಭವೇತ್ ಎಂದುದಾಗಿ, ಇದು ಕಾರಣ ಕೂಡಲಚೆನ್ನ ಸಂಗಯ್ಯನಲ್ಲಿ ಅದು ತಾ ಬೇಸರವಾದ ವ್ರತಗೇಡಿ ಮೂಳರನೆನಗೆ ತೋರದಿರಯ್ಯಾ.

950-6779

೭. ತನ್ನ ಲಿಂಗದಲ್ಲಿ ಪದಾರ್ಥವ ಪೂರ್ವಾಶ್ರಯವ ಹೋಗದೆಂದು ಅನುಸರಿಸಿ ಜಂಗಮ ಒಕ್ಕುದ ಕೊಂಬೆನೆಂಬುವನೊಬ್ಬ ಟಕ್ಕಭವಿ. ಆ ಜಂಗಮವು ಹೋದ ಬಳಿಕ ತನ್ನ ಲಿಂಗಕ್ಕೆಯು ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿ, ಲಿಂಗ ಪ್ರಸಾದವಲ್ಲದೆ ಒಲ್ಲೆನೆಂಬವನೊಬ್ಬ ಟಕ್ಕಭವಿ. ತನಗೆ ಲಿಂಗವಿಲ್ಲ, ಲಿಂಗಕ್ಕೆ ತಾನಿಲ್ಲ. ಅವನಾಚಾರ ಭ್ರಷ್ಟ ಅಂತಪ್ಪ ಆಚಾರವನವಗ್ರಹಿಸಿ ಹಿಡಿದೊಡೆ, ಆ ಆಚಾರವೇ ಅಂಗ, ಅರಿವೇ ಪ್ರಾಣ. ಆ ಪ್ರಾಣವೆ ಇಷ್ಟವೆಂದರಿವು ಅಷ್ಟಾವರಣವೇ ಭೂಷಣವಾಗಿ ಇಷ್ಟಬ್ರಹ್ಮವೇ ಮುಖವಾಗಿರ್ದ ವೀರಶೈವಾಚಾರ ಸಂಪನ್ನರಾಗಿರ್ದ ಸದ್ಭಕ್ತ ವೀರ ಮಾಹೇಶ್ವರರ ಮೇಲೆ ಪ್ರೀತಿ ಪ್ರೇಮದ ರತಿ ಇಲ್ಲದೆ ವಿಶ್ವಾಸವೆಂಬ ಅಂತಃಕರಣ ಬಳಸದೇ ಇಲ್ಲ. ತನ್ನ ತಾ ತಿಳಿಯದಿರ್ದೊಡೆ ಮಾಣಲಿ. ಗುರುಮಾರ್ಗಾಚಾರವೆಂಬ ವಚನಾನುಭಾವದಿಂದ ಹೇಳಿದೊಡೆಯು ತಿಳಿಯದೇ? ಆ ಆಚಾರಕ್ಕೆ ವಿಘ್ನವಾಗಿ ಅಹಂ ನಾಸ್ತಿ ನಷ್ಟವೆಂದು ನನ್ನ ಮನೆ ನನ್ನ ಧನ ನನ್ನ ಕುಲ ಸನಗ್ಗಾರ ಹಂಗೆಂದು ಅಜ್ಞಾನದಿಂದೆ ಆಚಾರಕ್ಕೆ ಇದಿರ ಬಿದ್ದು ಮಲವ ಆ [illegible] ಭಂತಃ ಸಹಾಡಿ, [illegible]ಲಿಗಿಕ್ಕುವವ ಆಚಾರ ದ್ರೋಹಿ. ಆ ಆಚಾರ ದ್ರೋಹವ ಹೊತ್ತಲ್ಲಿ ಪಂಚ ದ್ರೋಹಂಗಳು ಬಂದು ಹೊಂದು

ಶಿವಬಸವ ನಗರ
ಬೆಳಗಾವಿ ೧೦

950
6779

ಪದೆಂದರಿಯದೆ ತರ್ಕಿಸಿ ಹೋರಿ ಕಟಿಕಟನೆ ಕಾದಿ ಛಿದ್ರಿಸಿ ಚಿಸಿಖಂಡವ
ಮಾಡಿ ಆಯಿದು ತಿಸ್ಸುತಿಹ ಕ್ರೂರ ಕರ್ಮಿಯನಿರಿದಿರಿದು ತರಿತರಿದು
ಕೊರೆಕೊರೆದು ಹೋಳಿಹೋಳಿ ಹೊತ್ತಿಸಿ ನೊಂದಿಸಿ ಸುಡುವನಲ್ಲದೆ,
ಜರಿದು ಮರೆದು ಬಿಡುವನಲ್ಲವಯ್ಯಾ ನಮ್ಮ ಕೂಡಲ ಚನ್ನಸಂಗಮದೇವಾ.

೮. ಉಭಯಲಿಂಗ ಉಭಯ ಪ್ರಸಾದ. ಈ ಉಭಯ ದುರ್ಭ
ಯುವ ಲಿಂಗಪ್ರಸಾದಿಗಳೆ ಬಲ್ಲರಲ್ಲದೆ, ನಾನೆತ್ತ ಬಲ್ಲೆನಯ್ಯಾ! ಕ್ರಿಯೆಯ
ಮೀರಿದ ಸಂಬಂಧವ ನಾನೆತ್ತ ಬಲ್ಲೆನಯ್ಯಾ! ವಿಧಿ ನಿಷೇಧವಾದ,
ಕ್ರಿಯೆ ಹೊರಗಾದುದ ನಾನೆತ್ತ ಬಲ್ಲೆನಯ್ಯಾ! ಶೃತಿ ಸ್ಮೃತಿ ಪ್ರಮಾ
ಣಿನೊಳಗಲ್ಲವಯ್ಯಾ ಕೂಡಲಚನ್ನಸಂಗಮದೇವಾ.

---

ಇಂತೀ ಮಹೇಶ್ವರನ ಪ್ರಸಾದಲಿಂಗಸ್ಥಲ. ಇಂತಪ್ಪ ಪ್ರಸಾದ
ದಲ್ಲಿ ನೈಷ್ಠಿಕನಾದ ಮಾಹೇಶ್ವರನ ಮಹಾಲಿಂಗಸ್ಥಲ. ಆ ಸ್ಥಲದನು
ಭಾವದ ವಚನ.

## ಮಹೇಶ್ವರನ ಮಹಾಲಿಂಗಸ್ಥಲ.

೧. ಜಗದಕರ್ತನು ಈ ಜಗದ ಸ್ಥಿತಿಗತಿಯ ನಡಿಸುವ ಪರಿಯನು
ಆತನ ಲೀಲೆಯನರಿಯಬಾರದು. ಅಕಟಕಟ, ದೇವ ದಾನವ ಮಾನವ
ರರಿಯದೆ, ಅಹಮ್ಮಿಂದು ಅಹಂಕರಿಸಿ, ಕೆಟ್ಟರು ನೋಡಿರೆ. ಆ ಮಹಾ
ಕರ್ತನು ತನ್ನ ಶಕ್ತಿಯ ವಿನೋದಕ್ಕೆ ರಚಿಸಿದ ರಚನೆಯ ನೋಡಿರೆ.
ಮೂವರು ಪ್ರಧಾನರು ಒಂಭತ್ತು ಪ್ರಜೆ ಪಸಾಯಿತರು ಹದಿನಾಲ್ಕು
ನಿಯೋಗಿಗಳು ಇಪ್ಪತ್ತೇಳು ಅನುಚರರು ತನ್ನಷ್ಟತನುವಿನಿಂದಾದ ಜಗದ
ಸ್ಥಿತಿಗತಿಯನಡಿಸುವನು. ಆ ಕರ್ತ ಕಟ್ಟಿದ ಕಟ್ಟಳೆಯನು ಆಯುಷ್ಯ
ಭವಿಷ್ಯವನು ನಿಮಿಷ ನಿಮಿಷಾರ್ಧವ ಹೆಚ್ಚಿಸಬಾರದು. ಅಣುವಣುವ
ರ್ಧವ ಕುಂದಿಸಬಾರದು ನೋಡಿರೇ. ಇದಾರಿಗೆಯು ಅರಿಯಬಾರದು.
ಇದ ಬಲ್ಲರೆ ಬಲ್ಲರು. ನಮ್ಮ ಶರಣ ಕೂಡಲ ಚನ್ನಸಂಗಮದೇವಾ
ನೀವು ಬಲ್ಲಿರಿ.

೨. ಭವಿ ಮಾಡಲಿಕ್ಕೆ ಪೃಥ್ವಿಯಾಯಿತ್ತು. ಭವಿ ಮಾಡಲಿಕ್ಕೆ
ಅಪ್ಪುವಾಯಿತ್ತು. ಭವಿ ಮಾಡಲಿಕ್ಕೆ ಅಗ್ನಿಯಾಯಿತ್ತು. ಭವಿ ಮಾಡ
ಲಿಕ್ಕೆ ವಾಯುವಾಯಿತ್ತು. ಭವಿ ಮಾಡಲಿಕ್ಕೆ ಆಕಾಶವಾಯಿತ್ತು. ಭವಿ

ಮಾಡಲಿಕ್ಕೆ ಸೂರ್ಯ ಚಂದ್ರರಾದರು. ಭವಿ ಮಾಡಲಿಕ್ಕೆ ಬ್ರಹ್ಮವಿಷ್ಣು ಗಳಾದರು. ಭವಿ ಮಾಡಲಿಕ್ಕೆ ರುದ್ರನಾದನು. ॥ಸಾಕ್ಷಿ॥ ಭವಿ ಬೀಜಂ ತಥಾ ಶಕ್ತಿ ಭಕ್ತಿ ಬೀಜಂ ತಥಾ ಶಿವಃ। ಶಿವಬೀಜಂ ತಥಾ ಜ್ಞಾನಂ। ಜ್ಞಾನಂ ತ್ರೈಲೋಕ ದುರ್ಲಭಂ। ಇದು ಕಾರಣ ಕೂಡಲ ಚನ್ನಸಂಗ ಮದೇವಾ, ಭವಿ ಮಾಡಲಾಯಿತ್ತು.

೩. ಸಕಲ ಜಗತ್ತಿನ ಸಚರಾಚರವೆಲ್ಲ ಭವಿಯಳಿಸಿ ಅಳಿವುದು. ಲೋಕವನು ಹೊದ್ದ. ಲೌಕಿಕವನು ಹೊದ್ದ. ಬೆರಸಿ ಬೆರಸಿ ಏಕಗ್ರಾಹಿಯಾದ ಶರಣ ಲಿಂಗವ ಪೂಜಿಸಿ ಅನ್ಯವನರಿಯ. ಅಚ್ಚ ಲಿಂಗೈಕ್ಯನಯ್ಯಾ ಕೂಡಲ ಚನ್ನಸಂಗ ನಿಮ್ಮ ಶರಣ.

೪. ಅಂಗದಿಂದೆ ಲಿಂಗಸುಖ ಲಿಂಗದಿಂದೆ ಅಂಗ ಸುಖ. ಆ ಅಂಗ ಲಿಂಗ ಸಂಗ ಸುಖದಿಂದೆ ಪರಮ ಸುಖ ದೊರೆಕೊಂಬುವುದು ನೋಡಾ. ಆ ಅಂಗ ಲಿಂಗ ಸಂಗ ಸಮರಸೈಕ್ಯವನು ಕೂಡಲ ಚನ್ನ ಸಂಗ ನಿಮ್ಮ ಶರಣನಾದ ಮಹಾಲಿಂಗೈಕ್ಯ ಬಲ್ಲನಲ್ಲದೆ ಉಳಿದವರೆತ್ತ ಬಲ್ಲರಯ್ಯಾ?

೫. ಲಿಂಗಮುಖವನರಿದವಂಗೆ ಅಂಗನೆಂಬುದಿಲ್ಲ. ಜಂಗಮ ಮುಖ ವನರಿದವಂಗೆ ಸಂಸಾರವೆಂಬುದಿಲ್ಲ. ಪ್ರಸಾದ ಮುಖವನರಿದವಂಗೆ ಇಹ ಪರವೆಂಬುದಿಲ್ಲ. ಈ ತ್ರಿವಿಧವು ಒಂದಾದವಂಗೆ ಮುಂದೇನು ಇಲ್ಲವಯ್ಯಾ. ಈ ತ್ರಿವಿಧದ ನೆಲೆಯ ಶೃತಿ ಸ್ಮೃತಿ ಪುರಾಣಾಗಮ ಇತಿಹಾಸಂಗಳ ರಿಯವಯ್ಯಾ ಎಲೆಲೆ ಕೂಡಲ ಚನ್ನಸಂಗಯ್ಯ ನಿಮ್ಮ ಶರಣರೆ ಬಲ್ಲರಯ್ಯಾ.

ಇಂತಿದು ಮಹೇಶ್ವರಸ್ಥಲ. ಈ ಮಹೇಶ್ವರಸ್ಥಲ ಒಂದರಲ್ಲಿ ಷಡ್ವಿಧಲಿಂಗವು ಸಮರಸವನೆಯ್ದಿದಲ್ಲಿ ಮುಂದೆ ಪ್ರಸಾದಿ ಸ್ಥಲವಾದುದು. ಇಂತೀ ಮಹೇಶ್ವರಸ್ಥಲವೆರಡಕ್ಕಂ ಸೇರಿಪ ವಚನ ೧೦೨ ಕ್ಕಂ ಗ್ರಂಥ ೧೪ ಕ್ಕಂ ಮಂಗಳ ಮಹಾಶ್ರೀ ಶ್ರೀ.

# ಪ್ರಸಾದಿಸ್ಥಲ

ಪ್ರಸಾದಿಯಸ್ಥಲ ಆ ಪ್ರಸಾದಿಯು ತಾಮಸನಿರಸನಸ್ಥಲ, ಆ ಸ್ಥಲ ದನುಭಾವದ ವಚನ.

## ಪ್ರಸಾದಿಯು ತಾಮಸನಿರಸನಸ್ಥಲ

೧. ಅಡಿಗಡಿಗೆ ಸಿರಿವಂತರೆಂದು ನೋಡಿಕೊಂಬುವುದು ಉಪಜೀವಿತ ಪ್ರಸಾದ. ಬಡವರೆಂದು ಓರೆ ಮುಗ್ಗಲಾಗಿ ಕೊಂಬುವುದು ತುಡುಗುಣಿ ಪ್ರಸಾದ. ನಚ್ಚು ಮಚ್ಚಿನಿಂದೆ ಎಳೆದು ಸೆಳೆದುಕೊಂಬುವುದು ದಳಾದುಳಿ ಪ್ರಸಾದ. ಇಕ್ಕದವರನಂಜಿಸಿಕೊಂಡು ಕೊಂಬುವುದು ಸೀಡೆಕಾರ ಕರ್ಮಪ್ರಸಾದ. ಇಕ್ಕುವಾತ ಮನದಲ್ಲಿ ಗುಡಿಗಟ್ಟಿಕೊಂಬುವುದು ಸಮಯಪ್ರಸಾದ. ವೇಷಧಾರಿ ಹುಸಿಹುಂಡರಲ್ಲಿ ಕೊಂಬುವುದು ಹುಸಿ ನುಸುಳು ದೆಸೆಗೇಡಿ ಪ್ರಸಾದ. ಅರಿವು ಆಚಾರ ಹೀನರಾದ ಸಂಕಲ್ಪರಲ್ಲಿ ಕೊಂಬುವುದು ಸಂದೇಹ ಕಂದಿನ ಪ್ರಸಾದ. ಇದು ಕಾರಣ ಕೂಡಲಚನ್ನಸಂಗಮದೇವಾ ನಿಮ್ಮ ಪ್ರಸಾದಿಗಳಪೂರ್ವವಯ್ಯಾ

೨. ಪ್ರಸಾದ ಪ್ರಸಾದವೆಂದು, ಹೆಸರಿಟ್ಟುಕೊಂಡು ನುಡಿವಿರಿ. ಪ್ರಸಾದವೆಲ್ಲರಿಗೆಲ್ಲಿಹದೊ? ತನುಮುಟ್ಟಿಕೊಂಬುವುದು ಪ್ರಸಾದವಲ್ಲ. ಮನ ಮುಟ್ಟಿಕೊಂಬುವುದು ಪ್ರಸಾದವಲ್ಲ. ಧನಮುಟ್ಟಿಕೊಂಬುವುದು ಪ್ರಸಾದವಲ್ಲ. ಈ ತ್ರಿವಿಧಸಾಹಿತ್ಯವ ಕೊಂಬುವುದು ಪ್ರಸಾದವಲ್ಲ. ಕೈಯೊಡ್ಡಿ ಕೊಂಬುವಾತ ಗುರುದ್ರೋಹಿ. ಕೈ ನೀಡಿಕ್ಕುವಾತ ಶಿವದ್ರೋಹಿ. ಇದು ಕಾರಣವಾಗಿ, ನಮ್ಮ ಕೂಡಲಚನ್ನಸಂಗನ ಪ್ರಸಾದದ ಮಹಿಮೆಯನೇ ನೆಂಬೆನಯ್ಯಾ?

೩. ಭಕ್ತರಾದೆವೆಂದು, ಭವಿಪಾಕವನೊಲ್ಲೆವೆಂಬಿರಿ. ಭವಿಪಾಕವೆಂಬುದೆಂತುಂಟೆಂದೊಡೆ ಕೇಳಿರೇ. ಅಂಗತ್ರಯದಿಂದೆ ನೋಡಿದಡದು ಭವಿಪಾಕ. ಲಿಂಗತ್ರಯ ನೋಟಕ್ಕದು ಸಲ್ಲದು. ಗುರುಕಾರುಣ್ಯಮುಂಟು ನಾವು ಸದ್ಭಕ್ತರೆಂಬುವರು ಅವರಿಗೆ ಅಂಗತ್ರಯದ ನೋಟವುಳ್ಳನ್ನಕ್ಕರ ಲಿಂಗತ್ರಯದ ನೋಟವಿನ್ನೆಲ್ಲಿಹದೊ? ಪಂಚಭೂತದ ಕಾಯವ ತಂದು ಸದ್ಭಕ್ತನೆಂದೊಡೆ ಪ್ರಸಾದ ನಾಸ್ತಿ ಎಂದುದು ನಮ್ಮ ಕೂಡಲಚನ್ನಸಂಗಮದೇವರ ವಚನ.

ಮಾಡಲಿಕ್ಕೆ ಸೂರ್ಯ ಚಂದ್ರರಾದರು. ಭವಿ ಮಾಡಲಿಕ್ಕೆ ಬ್ರಹ್ಮವಿಷ್ಣುಗಳಾದರು. ಭವಿ ಮಾಡಲಿಕ್ಕೆ ರುದ್ರನಾದನು. ॥ಸಾಕ್ಷಿ॥ ಭವಿ ಬೀಜಂ ತಥಾ ಶಕ್ತಿ ಭಕ್ತ ಬೀಜಂ ತಥಾ ಶಿವಃ। ಶಿವಬೀಜಂ ತಥಾ ಜ್ಞಾನಂ। ಜ್ಞಾನಂ ತ್ರೈಲೋಕ ದುರ್ಲಭಂ। ಇದು ಕಾರಣ ಕೂಡಲ ಚನ್ನಸಂಗಮದೇವಾ, ಭವಿ ಮಾಡಲಾಯಿತ್ತು.

೩. ಸಕಲ ಜಗತ್ತಿನ ಸಚರಾಚರವೆಲ್ಲ ಭವಿಯುಳಿಸಿ ಅಳಿವುದು. ಲೋಕವನು ಹೊದ್ದ. ಲೌಕಿಕವನು ಹೊದ್ದ. ಬೆರಸಿ ಬೆರಸಿ ಏಕಗ್ರಾಹಿಯಾದ ಶರಣ ಲಿಂಗವ ಪೂಜಿಸಿ ಅನ್ಯವನರಿಯ. ಅಚ್ಚ ಲಿಂಗೈಕ್ಯನಯ್ಯಾ ಕೂಡಲ ಚನ್ನಸಂಗ ನಿಮ್ಮ ಶರಣ.

೪. ಅಂಗದಿಂದೆ ಲಿಂಗಸುಖ ಲಿಂಗದಿಂದೆ ಅಂಗ ಸುಖ. ಆ ಅಂಗ ಲಿಂಗ ಸಂಗ ಸುಖದಿಂದೆ ಪರಮ ಸುಖ ದೊರೆಕೊಂಬುವುದು ನೋಡಾ. ಆ ಅಂಗ ಲಿಂಗ ಸಂಗ ಸಮರಸೈಕ್ಯವನು ಕೂಡಲ ಚನ್ನಸಂಗ ನಿಮ್ಮ ಶರಣನಾದ ಮಹಾಲಿಂಗೈಕ್ಯ ಬಲ್ಲನಲ್ಲದೆ ಉಳಿದವರೆತ್ತ ಬಲ್ಲರಯ್ಯಾ?

೫. ಲಿಂಗಮುಖವನರಿದವಂಗೆ ಅಂಗವೆಂಬುದಿಲ್ಲ. ಜಂಗಮ ಮುಖವನರಿದವಂಗೆ ಸಂಸಾರವೆಂಬುದಿಲ್ಲ. ಪ್ರಸಾದ ಮುಖವನರಿದವಂಗೆ ಇಹಪರವೆಂಬುದಿಲ್ಲ. ಈ ತ್ರಿವಿಧವು ಒಂದಾದವಂಗೆ ಮುಂದೇನು ಇಲ್ಲವಯ್ಯಾ. ಈ ತ್ರಿವಿಧದ ನೆಲೆಯ ಶೃತಿ ಸ್ಮೃತಿ ಪುರಾಣಾಗಮ ಇತಿಹಾಸಂಗಳರಿಯವಯ್ಯಾ ಎಲೆಲೆ ಕೂಡಲ ಚನ್ನಸಂಗಯ್ಯ ನಿಮ್ಮ ಶರಣರೆ ಬಲ್ಲರಯ್ಯಾ.

ಇಂತಿದು ಮಹೇಶ್ವರಸ್ಥಲ. ಈ ಮಹೇಶ್ವರಸ್ಥಲ ಒಂದರಲ್ಲಿ ಷಡ್ವಿಧಲಿಂಗವು ಸಮರಸವನೆಯ್ದಿದಲ್ಲಿ ಮುಂದೆ ಪ್ರಸಾದಿ ಸ್ಥಲವಾದುದು. ಇಂತೀ ಮಹೇಶ್ವರಸ್ಥಲವೆರಡಕ್ಕಂ ಸೇರಿದ ವಚನ ೧೦೨ ಕ್ಕಂ ಗ್ರಂಥ ೧೪ ಕ್ಕಂ ಮಂಗಳ ಮಹಾಶ್ರೀ ಶ್ರೀ.

# ಪ್ರಸಾದಿಸ್ಥಲ

ಪ್ರಸಾದಿಯಸ್ಥಲ ಆ ಪ್ರಸಾದಿಯು ತಾಮಸನಿರಸನಸ್ಥಲ, ಆ ಸ್ಥಲದನುಭಾವದ ವಚನ.

## ಪ್ರಸಾದಿಯು ತಾಮಸನಿರಸನಸ್ಥಲ

೧. ಅಡಿಗಡಿಗೆ ಸಿರಿವಂತರೆಂದು ನೋಡಿಕೊಂಬುವುದು ಉಪಜೀವಿತ ಪ್ರಸಾದ. ಬಡವರೆಂದು ಓರೆ ಮಗ್ಗಲಾಗಿ ಕೊಂಬುವುದು ತುಡುಗುಣಿ ಪ್ರಸಾದ. ನಚ್ಚು ಮಚ್ಚಿನಿಂದೆ ಎಳೆದು ಸೆಳೆದುಕೊಂಬುವುದು ದಳಾದುಳಿ ಪ್ರಸಾದ. ಇಕ್ಕದವರನಂಜಿಸಿಕೊಂಡು ಕೊಂಬುವುದು ಪೀಡೆಕಾರ ಕರ್ಮಪ್ರಸಾದ. ಇಕ್ಕುವಾತ ಮನದಲ್ಲಿ ಗುಡಿಗಟ್ಟಿಕೊಂಬುವುದು ಸಮಯಪ್ರಸಾದ. ವೇಷಧಾರಿ ಹುಸಿಹುಂಡರಲ್ಲಿ ಕೊಂಬುವುದು ಹುಸಿ ನುಸುಳು ದೆಸೆಗೇಡಿ ಪ್ರಸಾದ. ಅರಿವು ಆಚಾರ ಹೀನರಾದ ಸಂಕಲ್ಪರಲ್ಲಿ ಕೊಂಬುವುದು ಸಂದೇಹ ಕಂದಿನ ಪ್ರಸಾದ. ಇದು ಕಾರಣ ಕೂಡಲಚನ್ನಸಂಗಮದೇವಾ ನಿಮ್ಮ ಪ್ರಸಾದಿಗಳಪೂರ್ವವಯ್ಯಾ

೨. ಪ್ರಸಾದ ಪ್ರಸಾದವೆಂದು, ಹೆಸರಿಟ್ಟುಕೊಂಡು ನುಡಿವಿರಿ. ಪ್ರಸಾದವೆಲ್ಲರಿಗೆಲ್ಲಿಹದೊ? ತನುಮುಟ್ಟಿಕೊಂಬುವುದು ಪ್ರಸಾದವಲ್ಲ. ಮನಮುಟ್ಟಿಕೊಂಬುವುದು ಪ್ರಸಾದವಲ್ಲ. ಧನಮುಟ್ಟಿಕೊಂಬುವುದು ಪ್ರಸಾದವಲ್ಲ. ಈ ತ್ರಿವಿಧಸಾಹಿತ್ಯವ ಕೊಂಬುವುದು ಪ್ರಸಾದವಲ್ಲ. ಕೈಯೊಡ್ಡಿ ಕೊಂಬುವಾತ ಗುರುದ್ರೋಹಿ. ಕೈ ನೀಡಿಕ್ಕುವಾತ ಶಿವದ್ರೋಹಿ. ಇದು ಕಾರಣವಾಗಿ, ನಮ್ಮ ಕೂಡಲಚನ್ನಸಂಗನ ಪ್ರಸಾದದ ಮಹಿಮೆಯನೇನೆಂಬೆನಯ್ಯಾ?

೩. ಭಕ್ತರಾದೆವೆಂದು, ಭವಿಪಾಕವನೊಲ್ಲೆವೆಂಬಿರಿ. ಭವಿಪಾಕವೆಂಬುದೆಂತುಂಟೆಂದೊಡೆ ಕೇಳಿರೇ. ಅಂಗತ್ರಯದಿಂದೆ ನೋಡಿದಡದು ಭವಿಪಾಕ. ಲಿಂಗತ್ರಯ ನೋಟಕ್ಕದು ಸಲ್ಲದು. ಗುರುಕಾರುಣ್ಯಮುಂಟು ನಾವು ಸದ್ಭಕ್ತರೆಂಬುವರು ಅವರಿಗೆ ಅಂಗತ್ರಯದ ನೋಟವುಳ್ಳನ್ನಕ್ಕರ ಲಿಂಗತ್ರಯದ ನೋಟವಿನ್ನೆಲ್ಲಿಹದೊ? ಪಂಚಭೂತದ ಕಾಯವ ತಂದು ಸದ್ಭಕ್ತನೆಂದೊಡೆ ಪ್ರಸಾದ ನಾಸ್ತಿ ಎಂದುದು ನಮ್ಮ ಕೂಡಲಚನ್ನಸಂಗಮದೇವರ ವಚನ.

ಪ್ರಸಾದಿಯ ತಾಮಸ ನಿರಸನಸ್ಥಲ. ಇಂತೀ ತಾಮಸ ನಿರಸನವ ಮಾಡಿದ ಅವಧಾನಿಯಾದ ಪ್ರಸಾದಿಯ ಸ್ಥಲದ ನಿರ್ದೇಶ. ಆ ಸ್ಥಲದ ನುಭಾವದ ವಚನ.

## ಪ್ರಸಾದಿಸ್ಥಲ.

೧. ಬಯಸಿ ಬಂದುದು ಅಂಗಭೋಗ. ಬಯಸದೆ ಬಂದುದು ಲಿಂಗಭೋಗ. ಲಿಂಗಭೋಗವನರ್ಪಿತ. ಲಿಂಗಭೋಗ ಪ್ರಸಾದವಯ್ಯಾ. ಬೇಕೆಂಬುವುದು ಕಾಯದ ಗುಣ. ಬೇಡೆಂಬುವುದು ವೈರಾಗ್ಯ. ಬೇಕೆಂಬುವನಲ್ಲ. ಬೇಡೆಂಬುವನಲ್ಲ. ಈ ಉಭಯವನತಿಗಳೆದು ಭೋಗಿಸಬಲ್ಲಡೆ, ಕೂಡಲ ಚನ್ನಸಂಗ ,ನಿಮ್ಮ ಶರಣನೆಂಬೆನು.

೨. ಕ್ರಿಯೆಯಿಲ್ಲದ ನಿಃಕ್ರಿಯೆಯನೆಂತು ನಡೆಯಬಹುದಯ್ಯಾ? ಸೀಮೆ ಇಲ್ಲದೆ ನಿಸ್ಸೀಮನಾಗೆಂತಿರಬಹುದಯ್ಯಾ? ಮೊದಲಿಲ್ಲದ ಲಾಭವನೆಂತಿನ ಬಹುದಯ್ಯಾ? ಹರಿವ ಮನವ ನಲ್ಲಿಂದು ನಿಲಿಸಿ ಜಿಹ್ವೆ ಜುಂಜುಕತ್ವವ ಕಳೆದು ಲಿಂಗ ಭೋಗೋಪಭೋಗಿಯಾದಲ್ಲದೆ ಮೆಚ್ಚುವರೆ, ನಿಮ್ಮ ಶರಣ ಕೂಡಲ ಚನ್ನಸಂಗಮದೇವಾ?

೩. ಶ್ರೀಗುರು ಕಾರುಣ್ಯವಂ ಪಡೆದು ಪೂರ್ವಜನ್ಮವ ಕಳೆದು ಪುನರ್ಜಾತನ ಮಾಡಿದ ಬಳಿಕ ಆ ಶ್ರೀಗುರು ಪರಮಾರ್ಥವನರುಹಿ ತ್ರಿವಿಧವನೇಕೀಭವಿಸಿ ಲಿಂಗ ಪ್ರವೇಶಿಯ ಮಾಡಿ ಪ್ರಾಣಲಿಂಗ ಬಿಜಯಂಗೈಸಿಕೊಟ್ಟ ಬಳಿಕ, ಈ ಲಿಂಗವೇ ಪ್ರಾಣ ಪ್ರಾಣವೇ ಲಿಂಗವೆಂದರಿದು ಅಂಗಲಿಂಗ ಸಂಗ ಸಮರಸವಾದುದೆ ಭಕ್ತಕಾಯ. ಆ ಭಕ್ತ ಕಾಯವೇ ಮಮಕಾಯವೆಂದುದಾಗಿ ಅಂತಪ್ಪ ಅಂಗದ ಮೇಲೆ ಸ್ಥಾಪ್ಯವಾದ ಮಹಾ ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವಂ ಮಾಡಿ ಆ ಶ್ರೀಗುರುವಿನ ಆನುಜ್ಞೆಯನು ಮಹಾಪ್ರಸಾದವೆಂದು ಕೈಕೊಂಡು ಕ್ರಿಯಾ ಮಾರ್ಗವಲ್ಲಿ ವರ್ತಿಸಿ, ಸಕಲ ದ್ರವ್ಯಂಗಳನು ಜಿಹ್ವೆಯಲ್ಲಿ ರುಚಿಸಿ, ಪರಿಣಾಮಿಸಿ, ಷಡುವರ್ಣಾದಿ ಬಹು ವರ್ಣಂಗಳನು ಕಂಗಳಲಿ ನೋಡಿ, ಪರಿಣಾಮಿಸಿ ರುಚಿ, ಅರುಚಿ, ರೂಪು ಸ್ವರೂಪುಗಳ ಲಿಂಗಕ್ಕರ್ಪಿಸುವಾಗ ಸ್ವಯಭಾಜನವೋ, ಲಿಂಗಭಾಜನವೋ? ಆ ಕಾಲದಲ್ಲಿ ಸೂತಕವಿಲ್ಲ, ದೋಷವಿಲ್ಲ. ಹೀಗೆ, ರೂಪು ರುಚಿ ಲಿಂಗಾರ್ಪಿತವಾಯಿತ್ತು. ನಾದ

ಅನಾದ ಮಂತ್ರ, ಆ ಮಂತ್ರಂಗಳ ಕೇಳಿ, ಕುಶಬ್ದಂಗಳಂ ಕಳೆದು, ಸುಶಬ್ದಂಗಳಂ ಶ್ರೋತ್ರಮುಖದಲ್ಲಿ ಲಿಂಗಾರ್ಪಿತವಾಯಿತ್ತು. ಗಂಧ ದುರ್ಗಂಧಂಗಳು ತಟ್ಟಿವಲ್ಲಿ ದುರ್ಗಂಧಂಗಳಂ ಕಳೆದು, ಸುಗಂಧಂಗಳಂ ಘ್ರಾಣದ ಮುಖದಲ್ಲಿ ಲಿಂಗಾರ್ಪಿತವಾಗಲು, ಸ್ವಯಭಾಜನವೋ, ಲಿಂಗಭಾಜನವೋ? ಆ ಕಾಲದಲ್ಲಿ ಸೂತಕವಿಲ್ಲ ದೋಷವಿಲ್ಲ. ಈ ಹೀಗೆ ಲಿಂಗಾರ್ಪಿತವಾಯಿತ್ತು. ಮೃದುಕಠಿಣ ಶೀತೋಷ್ಣಾದಿಸ್ಪರ್ಶನಂಗಳ ಗುಣವನರಿದು, ಲಿಂಗಕ್ಕರ್ಪಿಸುವಲ್ಲಿ ಸ್ವಯಭಾಜನವೊ, ಲಿಂಗಭಾಜನವೋ? ಆ ಕಾಲದಲ್ಲಿ ಸೂತಕವಿಲ್ಲ ದೋಷವಿಲ್ಲ. ಈ ಪರಿಯಲ್ಲಿ ಸ್ಪರ್ಶನದ್ರವ್ಯಂಗಳ ಮೃದುಕಠಿಣ ಶೀತೋಷ್ಣಂಗಳ ಸಕೀಲವನರಿದು ತ್ವಕ್ಕಿನ ಕೊನೆಯಲ್ಲಿ ಲಿಂಗಾರ್ಪಿತವಾಯಿತ್ತು. ಷಡುರಸಾದಿ ರಸ ದ್ರವ್ಯಂಗಳೆಲ್ಲವನು ಮಧುರ, ಆಮ್ಲ, ಕಟು, ತಿಕ್ತ, ಕಷಾಯ, ಲವಣ, ಮೊದಲಾದ ದ್ರವ್ಯವನು ಜಿಹ್ವೆಯಿಂದರಿದು ಲಿಂಗಕ್ಕರ್ಪಿಸುವಲ್ಲಿ ಸ್ವಯಭಾಜನವೊ, ಲಿಂಗಭಾಜನವೋ? ಆ ಕಾಲವಲ್ಲಿ ಸೂತಕವಿಲ್ಲ ದೋಷವಿಲ್ಲ. ಈ ಪರಿಯಲ್ಲಿ ಜಿಹ್ವೆ ಎಂಬ ಮುಖದಲ್ಲಿ ಷಡುರಸ ಮೊದಲಾದ ರಸದ್ರವ್ಯಾರ್ಪಿತವಾಯಿತ್ತು. ಇಂತಿವೆಲ್ಲ ದ್ರವ್ಯಂಗಳನು ಆಯಾಯ ಮುಖವನರಿದರ್ಪಿಸುವದು. ಅದೆಂತೆನೆ, ಶಬ್ದ, ಸ್ಪರ್ಶ, ರೂಪು, ರಸ, ಗಂಧಂಗಳನು, ಶ್ರೋತ್ರ, ನೇತ್ರ, ಘ್ರಾಣ, ಜಿಹ್ವೆ, ತ್ವಕ್ಕುಗಳೆಂಬ ಮುಖದಿಂದೆ ಲಿಂಗಾರ್ಪಿತವಾಯಿತ್ತು. ಇನ್ನು ರೂಪು ದ್ರವ್ಯಂಗಳ ಕಂಗಳಿಂದರ್ಪಿಸುವಂತೆ, ಶ್ರೋತ್ರ, ನೇತ್ರ, ಘ್ರಾಣ, ಜಿಹ್ವೆ, ತ್ವಕ್ಕುಗಳೆಂಬ ನಾಲ್ಕು ಇಂದ್ರಿಯಂಗಳಲ್ಲಿ ಅರ್ಪಿಸಬಾರದು. ನಾನಾವರ್ಣವಾದ ರೂಪು ಸ್ವರೂಪವನು ಕಂಗಳ ಕೊನೆಯಲ್ಲಿಯೇ ಅರ್ಪಿಸಬೇಕು. ಶಬ್ದವನು ಶ್ರೋತ್ರದಿಂದರ್ಪಿಸುವಂತೆ, ನೇತ್ರ ಘ್ರಾಣ, ಜಿಹ್ವೆ, ತ್ವಕ್ಕೆಂಬ ನಾಲ್ಕು ಇಂದ್ರಿಯಂಗಳಲ್ಲಿ ಅರ್ಪಿಸಬಾರದು. ನಾನಾ ಶಬ್ದದೊಳಗಣ ಸುಶಬ್ದವನು ಶ್ರೋತ್ರದ ಕೊನೆಯಿಂದವೇ ಅರ್ಪಿಸಬೇಕು. ಸುಗಂಧವನು ಘ್ರಾಣದಿಂದರ್ಪಿಸುವಂತೆ, ಶ್ರೋತ್ರ, ನೇತ್ರ ಜಿಹ್ವೆ, ತ್ವಕ್ಕುಗಳೆಂಬ ನಾಲ್ಕು ಇಂದ್ರಿಯಂಗಳಲ್ಲಿ ಅರ್ಪಿಸಬಾರದು. ಆ ಸುಗಂಧವನು ಘ್ರಾಣದ ಕೊನೆಯಲ್ಲಿ ಅರ್ಪಿಸಬೇಕು. ಸ್ಪರ್ಶನವನು ತ್ವಕ್ಕಿನ ಕೊನೆಯಲ್ಲಿಯೇ ಅರ್ಪಿಸಬೇಕು. ರಸವನು ಜಿಹ್ವೆಯಿಂದರ್ಪಿಸುವಂತೆ, ಶ್ರೋತ್ರ, ನೇತ್ರ, ಘ್ರಾಣ, ತ್ವಕ್ಕು ಮೊದಲಾದ ನಾಲ್ಕು ಇಂದ್ರಿಯಂಗಳಲ್ಲಿ ಅರ್ಪಿಸಬಾರದು ಆ ಷಡುರಸ ಮೊದಲಾದ ಎಲ್ಲ

ರಸಂಗಳನು ಜಿಹ್ವೆಯ ಕೊನೆಯಿಂದರ್ಪಿಸಬೇಕು ಕೇಳಿರಣ್ಣಾ! ಈ ಕ್ರಮವನರಿದು ಅರ್ಪಿಸಿದ ಬಳಿಕ, ಆಗ ಸ್ವಯ ಭಾಜನವೋ ಲಿಂಗಭಾಜನವೋ? ಆ ಕಾಲದಲ್ಲಿ ಸೂತಕವಿಲ್ಲ ದೋಷವಿಲ್ಲ. ಈ ತೆರನನರಿಯದೆ ಸ್ವಯ ಭಾಜನವಾಗದೆಂದು, ಭಿನ್ನ ಭಾಜನವಾಗಬೇಕೆಂದು, ದೇವರಾರೋಗಣೆಯ ಮಾಡಿದ ಮೇಲೆ, ಮುಂದಿರ್ದ ಪರಿಯಾಣವಂ ತೆಗೆದು ಇನ್ನೊಂದು ಪರಿಯಾಣವಂ ತನ್ನಿ ಎಂಬ ಕಷ್ಟವ ನೋಡಾ! ಆ ಆಗಲನಾರಡಿಗೊಂಬ ಪಾಪಿಯ ನೋಡಾ! ಅಕಟಕಟಾ, ಈ ಪರಿಯ ಲಿಂಗಾರ್ಚನೆಯ ಮಾಡಿ, ಈ ಪರಿಯ ಲಿಂಗಾರ್ಪಿತವ ಮಾಡಿ ಪ್ರಸಾದವ ಪಡೆವುದೀ ಪರಿಯೆ? ಜ್ಞಾನವೀ ಪರಿಯೇ? ಇಂತಲ್ಲ ಕೇಳಿರಣ್ಣಾ! ಕರ್ತೃಭೃತ್ಯತ್ವದ ವಿವರವ ನೋಡಿರೆ. ದೇವರವರ ಪರಿಯಾಣದಲ್ಲಿ ದೇವರಿಗೆ ಬಂದ ಸಕಲ ದ್ರವ್ಯರಸಂಗಳನು ರೂಪು, ರುಚಿ, ತೃಪ್ತಿಯನು ಭಕ್ತ ದೇಹಿಕ ದೇವನಾದ ಕಾರಣ, ಆ ಮಹಾದೇವಂಗೆ ಸಕಲ ಪದಾರ್ಥವ ಸಮರ್ಪಿಸಬೇಕು. ॥ಸಾಕ್ಷಿ॥ ರೂಪು ಸಮಾಗತಿಂ ಶುದ್ಧಂ ರುಚಿನಾ ಸಿದ್ಧ ಸಂಜ್ಞಿಕಂ ತನು ವಿಶ್ರಾರ್ಪಣಾಂ ಭೋಗಂ। ಪ್ರಸಿದ್ಧಂ ತು ಪ್ರಸಾದಕಂ। ದರ್ಪಣಂಧೂಪದೀಪಂಚ ನಾನಾ ರುಚಿ ಸುಖಂ ಬಹುಃ ಪ್ರಸಾದಮೇವ ಭೋಕ್ತವ್ಯಂ। ಅನ್ಯದ್ಯೋಮಾಂಸ ತತ್ಸಮಂ॥ ರೂಪಂ ಸಮಾಗತಂ ದ್ರವ್ಯಂ। ರುಚಿನಾ ಸುಖಸಮರ್ಪಿತಂ ಉಭಯಾರ್ಪಣ ವಿಹೀನೋಪಿ, ಪ್ರಸಾದಂ ನಿಷ್ಫಲಂ ಭವೇತ್ ॥ ಘ್ರಾಣೇನಾಚಾರಲಿಂಗಸ್ಯ। ಗಂಧಘ್ರುಷ್ಣಾತಿಯೋತ್ಸದಾ। ಜಿಹ್ವಾಂ ಗುರುಲಿಂಗಂ ಚ। ರಸಂ ಘೃಷ್ಣಾತಿ ಯೋತ್ಸದಾ॥ ಚಕ್ಷುಶ್ಚ ಶಿವಲಿಂಗಂಚ। ರೂಪಂ ಘೃಷ್ಣಾತಿ ಯೋತ್ಸದಾ। ತ್ವಕ್ ಜಂಗಮಲಿಂಗಸ್ಯ ಸ್ಪರ್ಶನ ಮಾದಾಯ ಸಾದರಂ ಶ್ರೋತ್ರೇಣಂ ಶಬ್ದ ಘೃಷ್ಣಾತಿ। ಪ್ರಸಾದಂ ಲಿಂಗನೇವ ಚ। ಅನ್ಯೇಂದ್ರಿಯೋಪಭೋಕ್ತವ್ಯಂ। ಮನರ್ನಂಚ ಭೂಷಶ್ಚತಿ॥ ಇಂದ್ರಿಯಮುಖಾದಿಯಂ। ತದಿಂದ್ರಿಯ ಮುಖೇನಚ॥ ಅನ್ಯೇಂದ್ರಿಯೋಪಭೋಕ್ತವ್ಯಂ ಮನಸಾ ಭೂಷಣಾದಿವತ್॥ ಇಂದ್ರಿಯಾದಾಗತಂ ಕಿಂಚಿತ್। ಯತ್ಸುಖಂ ತತ್ಶಿವಾರ್ಪಣಾಂ। ತತ್ಪ್ರಸಾದಭೋಕ್ತವ್ಯಂ। ತದಿಂದ್ರಿಯ ಮುಖೇನ ಚ॥ ಅನ್ಯೇಂದ್ರಿಯೋಪಭುಕ್ತಂ ಚ ಪ್ರಸಾದಂ ನಿಷ್ಫಲಂಭವೇತ್। ಶಬ್ದ ಸ್ಪರ್ಶ ರೂಪಂ ಚ। ರಸ ಗಂಧ ಮಹಾ ರುಚಿಃ॥ ಅರ್ಪಿತಾನರ್ಪಿತಂ ಸ್ಥಾನಂ। ಇಂದ್ರಿಯೂಡಿಂದ್ರಿಯಾ ಯಥಾ। ಇಂದ್ರಿಯ ಶ್ವಾನ

ತತ್ಕರ್ಮಂ। ಸಮರ್ಪಿತ ಕ್ರಿಯಾರ್ಪಣಂ॥ ಉಭಯಾರ್ಪಣ ವಿಹೀನಸ್ಯ।
ತತ್ಪ್ರಸಾದಂ ನಿಷ್ಫಲಂ ಭವೇತ್। ಗರ್ಭಿಣೀಯೋಗ ಸರ್ವೇಶಂ। ಶಿಸು
ಜಾತಸ್ಯ ತೃಪ್ತಿನಾಂ॥ ಲಿಂಗಭೋಗಸ್ಯ ಲಿಂಗಿನಾಂ। ಪ್ರಸಾದಂ ತಸ್ಯ
ಸಂಭವೇತ್। ಯಥಾ ಗರ್ಭಿಣೀಯೋಗಂ ಚ। ಶಿಸುನಾ ತೃಪ್ತಿ ಸಂಭ
ವೇತ್॥ ತದಾ ಲಿಂಗಸ್ಯ ಭೋಗಂ ಚ। ಲಿಂಗತೃಪ್ತಿಮಾಪ್ನುಯೇತ್।
ಗರ್ಭೀಕೃತಂ ಚ ಪ್ರಾಣಸ್ಯ॥ ಗರ್ಭಿಣೀಭೋಗಮೇತ್ಕೃತಂ॥ ಲಿಂಗಭಕ್ತ
ಕೃತಂ ಲಿಂಗೀ। ಸರ್ವಭೋಗಂ ಚ ಮೇ ತಥಾ। ಭಕ್ತಕಾಯ ಮಹಾ
ದೇವಂ। ಭಕ್ತ್ಯಾತ್ಮಕ ಸದಾಶಿವಂ॥ ಸರ್ವಭೋಗೋಪ ಭೋಗಂಚ।
ಸಹಾ ಭೋಗಂ ವಿಧೀಯತೆ। ಲಿಂಗದೇಹೀ ಶಿವಾತ್ಮೀ ಚ। ಲಿಂಗಾಚಾ
ರೇಣ ಲೌಕಿಕಂ॥ ಸರ್ವಲಿಂಗಮಯಂ ರೂಪಂ। ಲಿಂಗಸ್ಯ ಸಹವ
ರ್ತತೆ। ದೃಶ್ಯಾದೃಶ್ಯ ಕೃತಂ ಕೃತಃ। ಘ್ರಾಣಂ ಘ್ರಾಣಸ್ಯ ಮೇವಚ॥
ಸ್ಪರ್ಶಂ ಸ್ಪರ್ಶರವಿಂದಾದು। ಗ್ಗೃಹಂಗ್ಗೃಹಸ್ಯಮೇವ ಚ। ಭಕ್ತ ತದ್ಭಕ್ತ
ಮುಖ್ಯಾತಂ। ತೃಪ್ತಾತೃಪ್ತಸ್ಯಮೇವಚ॥ ಏಕೈಕಂ ಪ್ರಣಮ ಖ್ಯಾತಂ।
ಇತ್ಯೇತೆ ಸಹವರ್ತಿನಾಂ। ಲಿಂಗದೃಷ್ಟಿ ನಿರೀಕ್ಷಸ್ಯ ಲಿಂಗಹಸ್ತೋಪಿ ಸ್ಪರ್ಶಚ॥
ಲಿಂಗಶ್ರೋತ್ರಂ ಚ ಶ್ರೋತ್ರನಾಂ। ಲಿಂಗ ಜಿಹ್ವೆ ರಸಂನವಾತ್ ಲಿಂಗ
ಪ್ರಾಣಂ ತು ಘ್ರಾಣಿನಾಂ। ಲಿಂಗಸ್ಯ ವದತೆ॥ ಲಿಂಗ ಮನೋಗವೋ
ನಾಪಿ। ಏತ್ತೈತೆ ಸಹಭಾಜನಂ। ಲೋಕಾಚಾರ ನಿಶ್ಯಬ್ದಾನಾಂ।
ಲೋಕ ಲೋಕ ವಿವರ್ಜಿತಃ॥ ಲೋಕಾಚಾರ ಪರಿತ್ಯಾಜ್ಯಂ। ಪ್ರಾಣ
ಲಿಂಗಂತು ಸಂಸ್ಕೃತಃ। ನ ಕಾಲಂ ಪ್ರಾಣಲಿಂಗಿನಾಂ। ನ ಕರ್ಮೋ
ಲಿಂಗ ಪ್ರಾಣಿನಾಂ॥ ಕಲ್ಪಿತಂಚ ದ್ವಯೋ ನಾಸ್ತಿ। ಶರಣಸ್ಯ ಪ್ರಸಾದತಾ॥
ಎಂದುದಾಗಿ ಲಿಂಗಾರ್ಚನೆಯ ಮಾಡುವ ಪರಿ. ಇದು ಕಾರಣ ಶ್ರೀಗುರು
ವಿನಾಜ್ಞೆಯ ಮೀರಿದವನು ಜ್ಞಾನಿಯಲ್ಲ ಭಕ್ತನಲ್ಲ ಕೇಳಿರೋ. ಆವ
ನಾನೊಬ್ಬ ಲಿಂಗ ಭೋಗೋಪಭೋಗಿಯಾದಾತನು ರಾಜಾಧಿರಾಜ ಮಹಾ
ರಾಜ ದೇವರ ದೇವ ಮಹಾದೇವಂಗೆ ಆರೋಗಣೆಯ ಮಾಡಿಸದೆ,
ಪರಿಯಾಣವ ತೆಗೆಯಲು ಮಹಾ ದ್ರೋಹವಯ್ಯಾ! ಇದನರಿದು ಶ್ರೀಗುರು
ವಿನಾಜ್ಞೆಯ ತಪ್ಪದೆ ಲಿಂಗಾರ್ಚನೆಯ ಮಾಡುವ ಕ್ರಿಯೆ ಕಟ್ಟಳೆಯು
ತಪ್ಪದೆ ದೇವರ ಪರಿಯಾಣದಲ್ಲಿ ಷಡುರಸ ದ್ರವ್ಯ ಮೊದಲಾದ ಸಕಲ
ಪದಾರ್ಥಂಗಳ ನೀಡಿ, ಆ ಶುದ್ಧ, ಸಿದ್ಧ ಪ್ರಸಿದ್ಧವಾಗಿ ಬಂದು ಅರ್ಪಿತವ
ಮಾಡುವುದು. ಪಂಚೇಂದ್ರಿಯಂಗಳೆಂಬ ಪಂಚಸ್ಥಾನದ ಮುಖವನರಿದು

ಶಬ್ದ ಸ್ಪರ್ಶ ರೂಪು ರಸ ಗಂಧಂಗಳನು, ಮನೋ ವಾಚಕ ಕಾಯಕ್ಕೆ ಸೊಗಸುವ ಭೋಗಂಗಳನೆಲ್ಲವನು ಪ್ರಸಾದವಮಂ ಪಡೆದುಕೊಂಡು ತನ್ನ ಲಿಂಗಕ್ಕರ್ಪಿಸುವಾತನೆ ಸದ್ಭಕ್ತನು. ಆತನೆ ಸದ್ಯೋನ್ಮುಕ್ತನೆನಿಸುವನು. ಇಂತಿದರನುವನರಿದು ಆತ ಮಹಾ ಪ್ರಸಾದಿಯಾದುದರಿಂದೆ ತಾನು ಪ್ರಸಾದಿಯಪ್ಪುವು ತಪ್ಪದಯ್ಯಾ ಪರಮ ನಿರಂಜನ ಪ್ರಭುವೆ ಗುರುವೆ ಕೂಡಲ ಚನ್ನಸಂಗಮದೇವಾ.

---

ಇದು ಪ್ರಸಾದಿಯ ಆಚಾರಲಿಂಗಸ್ಥಲ. ಇಂತಪ್ಪ ಪ್ರಸಾದಿಯು ಆಚಾರಲಿಂಗಸ್ಥಲವನಂಗಂಗೊಂಡಿರ್ಪ ಅವಧಾನಿಯು ಷಡ್ವಿಧ ಲಿಂಗ ಸಂಗವಾದ ವಿವರ. ಮುಂದೆ ಪ್ರಸಾದಿಯ ಆಚಾರಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಸಾದಿಯ ಆಚಾರಲಿಂಗಸ್ಥಲ.

೧. ಶೀಲ ಶೀಲವೆಂದು ಗರ್ವಿಸಿ ನುಡಿವುತಿಪ್ಪಿರಿ. ಶೀಲವಾವುದೆಂದರಿಯಿರಿ ಕೇಳಿರಣ್ಣಾ! ಇಪ್ಪುದ ವಂಚನೆ ಮಾಡದಿರ್ಪುದೇ ಶೀಲ. ಇಲ್ಲದುದಕ್ಕೆ ಕಡನ ಮಾಡದಿರ್ಪುದೇ ಶೀಲ ಪರಧನ ಪರಸ್ತ್ರೀಯರ ಮುಟ್ಟದಿರ್ಪುದೇ ಶೀಲ. ಪರದೈವ ಪರಸಮಯಕ್ಕೆ ಅಳುಪದಿರ್ಪುದೆ ಶೀಲ. ಗುರುನಿಂದೆ, ಹರನಿಂದೆ, ಚರನಿಂದೆಯುವ ಕೇಳದಿರ್ಪುದೆ ಶೀಲ. ನಮ್ಮ ಕೂಡಲ ಚನ್ನಸಂಗನ ಶರಣರ ಬರವಿಂಗೆ ಮೈಯ್ಯಾಂತುವೆ ಅಚ್ಚ ಶೀಲ.

೨. ಶೀಲ ಶೀಲ ಎಂದೊಡೇನೊ? ಮಾಡಿದ ಮನೆ, ಹೂಡಿದ ಒಲೆ ಅಟ್ಟುಂಬ ಮಡಕೆ, ಕಟ್ಟಿದ ಕೆರೆ, ಬಿತ್ತಿದ ಬೆಳೆ, ಇಂತಿವಕ್ಕೆ ಶೀಲವೆಲ್ಲಿಹದೋ? ತನ್ನ ಮನಕ್ಕೆ ಶೀಲವಲ್ಲದೆ, ಶೀಲವಂತರೆಂತಾದಿರೊ? ಶೀಲವಂತರೆಂತೆಂದೊಡೆ, ಕೇಳಿರೋ. ಲಿಂಗವು ಬಂದು ಮನವನಿಂಬುಗೊಂಡುದೆ ಶೀಲ. ಜಂಗಮವು ಬಂದು ಧನವನಿಂಬುಗೊಂಡುದೆ ಶೀಲ. ಪ್ರಸಾದವು ಬಂದು, ತನುವನಿಂಬುಗೊಂಡುದೆ ಶೀಲ. ಇಂತಪ್ಪ ಶೀಲಕ್ಕೆ ನಮೋ ನಮೋ ಎಂಬೆನಯ್ಯಾ. ಇಂತಿವನರಿಯದೆ ಉಳಿದ ದುಃಶ್ಶೀಲರನೆನಗೊಮ್ಮೆ ತೋರದಿರಯ್ಯಾ ಕೂಡಲಚನ್ನಸಂಗಮದೇವಾ.

೩. ಅನ್ಯದೈವವುಳ್ಳ ಭಕ್ತನ ಮನೆಯಾರೋಗಣೆಯು ಅನ್ಯಹಾರವಯ್ಯಾ! ನಂಬಿಗೆ ಇಲ್ಲದ ಭಕ್ತನ ಮನೆಯಾರೋಗಣೆ ಸಂದೇಹದ ಕೂಳು. ಕೊಟ್ಟು ಕೊಂಡು ನೀಡಿ ಮಾಡಿ ಹಮ್ಮು ನುಡಿವ ಭಕ್ತನ ಮನೆಯಾರೋಗಣೆ ಕಾರಿದ ಕೂಳು. ನಿಮ್ಮ ನಂಬಿದ ಸದ್ಭಕ್ತರ ಮನೆಯಾರೋಗಣೆ ಲಿಂಗಾರ್ಪಿತವಯ್ಯಾ. ಅದೆಂತೆಂದೊಡೆ, ಸದಾಚಾರ, ಶಿವಾಚಾರ, ಲಿಂಗಾಚಾರ, ಗಣಾಚಾರ, ಭೃತ್ಯಾಚಾರ, ಸತ್ಕಾಯಕದಿಂದೆ ಬಂದುದಾಗಿ, ಭಕ್ತಿ ಪದಾರ್ಥವಯ್ಯಾ ಕೂಡಲಚನ್ನಸಂಗಮದೇವಾ.

---

ಇದು ಪ್ರಸಾದಿಯ ಗುರುಲಿಂಗಸ್ಥಲ. ಇಂತೀ ಆಚಾರಲಿಂಗವಲ್ಲಿ ಅವಧಾನಿಯಾದ ಪ್ರಸಾದಿಯ ಗುರುಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಸಾದಿಯ ಗುರುಲಿಂಗಸ್ಥಲ.

೧. ತನ್ನ ಮನೆಯ ಹೊಗದ ಗುರುವಿನರಸಿಕೊಂಡು ಹೋಗುವವ ಶಿಷ್ಯನಲ್ಲವಯ್ಯಾ. ತಾ ಹೋಗದ ಮನೆಗೆ ಉಪದೇಶವ ಮಾಡುವಾತ ಗುರುವಲ್ಲವಯ್ಯಾ. ಅಂಗವ ಮಾರಿಕೊಂಡುಂಬ ಶಿಷ್ಯ ಗುರುದ್ರೋಹಿ. ಲಿಂಗವ ಮಾರಿಕೊಂಡುಂಬ ಗುರು ಶಿವದ್ರೋಹಿ. ॥ಸಾಕ್ಷಿ॥ ನಾಮಧಾರಕ ಶಿಷ್ಯಾಣಾಂ। ನಾಮಧಾರಕ ಗುರುಸ್ತಥಾ। ಅಂಧಕಂಧಕರಂ ಚೈವ ದ್ವಿವಿಧಂ ಪಾತಕಂ ಭವೇತ್॥ ಎಂದುದಾಗಿ ಈ ಗುರುಶಿಷ್ಯರಿಬ್ಬರಿಗೆಯು ದೇವ ಭಕ್ತರೆಂದೊಡೆ ನಾಯಕ ನರಕವಯ್ಯಾ ಕೂಡಲಚನ್ನಸಂಗಮದೇವಾ.

೨. ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ ತನ್ನ ಪ್ರಾಣಲಿಂಗವ ಕೊಟ್ಟು ಕರ್ಣದಲ್ಲಿ ಮಂತ್ರವ ನಿಕ್ಷೇಪಿಸಿ ಬಳಿಕ ಅವ ಬಂದು ಶಿಷ್ಯನ ಮನೆಯ ಹೊಗಲೊಲ್ಲದೆ ಅಕ್ಕಿ ಪಡಿಯ ತರಿಸಿಕೊಂಡು ಹೊಸ ಬಳಿಕೆ ಎಂದು ಮಾಡಿಸಿಕೊಂಡುಂಬವಂಗೇನೆಂಬೆನಯ್ಯಾ? ಅವನ ಧನಕ್ಕೆ ತಂದೆಯಾದನಲ್ಲದೆ ಅವನಿಗೆ ತಂದೆಯಾದುದಿಲ್ಲ. ಇದು ಕಾರಣವಾಗಿ ಕೂಡಲ ಚನ್ನಸಂಗಯ್ಯ ಲಿಂಗವ ಮಾರಿಕೊಂಡುಂಬ ಭಂಗಗಾರರ ಕಂಡು ನಾಚಿ ಬೆರಗಾದೆನಯ್ಯಾ.

೩. ಭೂತ ಪ್ರಾಣಿಯ ಕಳೆದು ಲಿಂಗಪ್ರಾಣಿಯ ಮಾಡಿದ ಬಳಿಕ ಆವನ ಶ್ರೋತ್ರದಲ್ಲಿ ಸಕಲ ಮೂರ್ತಿಯ ನಿಕ್ಷೇಪಿಸಿದ ಮೇಲೆ ಆ ಶಿಷ್ಯೋತ್ತಮನೆ ಜಂಗಮವಾಗಿ ಆ ಗುರುವಿನ ಮಠಕ್ಕೆ ನಡೆದು ಬಂದರೆ ತಾನು ಗುರುವೆಂಬ ಹಮ್ಮಿಲ್ಲದೆ ಪರಮ ಗುರುವೆಂದು ಭಾವಿಸಿ ಪಾದಾರ್ಚನೆಯ ಮಾಡುವುದೆ ಆಚಾರವಯ್ಯ. ನಾ ಗುರುವೆಂಬ ಹಮ್ಮಿನಿಂದೆ ಮಾಡದಿರ್ದೊಡೆ ನಾಯಕ ನರಕವಯ್ಯಾ. ಆ ಜಂಗಮ ಈತ ನನ್ನ ಗುರುವೆಂಬ ನಾಚಿಕೆಯನಳಿದು ಪಾದಾರ್ಚನೆಯ ಮಾಡಿಸಿಕೊಂಬುವುದೆ ಕರ್ತವ್ಯವಯ್ಯಾ. ಶಂಕೆಗೊಂಡೊಡೆ ಪಂಚ ಮಹಾಪಾತಕವಯ್ಯಾ. ಈ ಹೀಂಗೆ ನಿಯತಾಚಾರದ ನಿರ್ಣಯವಲ್ಲದೆ ನಾ ಗುರುವೆಂಬ ಹಮ್ಮಿನ ಬಿಮ್ಮಿನ ಬೀಗ ಉಳ್ಳನ್ನಕ್ಕರ ನಾ ಶಿಷ್ಯನೆಂಬ ಶಂಕೆಯಿಂದ ಡುಣಿಗಾಡುವನ್ನಕ್ಕರ ಆವರಿಬ್ಬರನು ರೌರವ ನರಕದಲ್ಲಿಕ್ಕುವ ನಮ್ಮ ಕೂಡಲ ಚನ್ನಸಂಗಮದೇವಾ.

೪. ಗುರುವೆಂಬಾತನು ಸಕಲಾಗಮದ ಹೃದಯವನರಿದು, ಕ್ರಿಯಾಜ್ಞಾನಯುಕ್ತನಾಗಿ ತನ್ನ ತಾನರಿದು, ಸರ್ವಾಚಾರ ಸಂಪನ್ನತೆ ನೆಲೆಗೊಂಡು, ನಿರ್ಣಯದ ಗೊತ್ತನರಿದು ಉಪದೇಶವಮಾಡಬಹುದು. ಉಪದೇಶವ ಮಾಡುವ ಪರಿ ಎಂತೆಂದೊಡೆ, ॥ಸಾಕ್ಷಿ॥ ಬ್ರಾಹ್ಮಣೋ ತ್ರಿಣಿ ಯಾಬ್ದಾನಾಂ । ಕ್ಷತ್ರಿಯೋ ಷಟ್ಕಮಾಬ್ದಯೋ । ವೈಶ್ಯರ ನವ ಅಬ್ದಾನಾಂ । ದ್ವಾದಶಾಬ್ದಸ್ಯ ಶೂದ್ರಯೋ॥ ಎಂದುದಾಗಿ, ಬ್ರಾಹ್ಮಣನ ಮೂರು ವರುಷ ನೋಡಬೇಕು. ಕ್ಷತ್ರಿಯನ ಆರು ವರುಷ ನೋಡಬೇಕು. ವೈಶ್ಯನ ಒಂಬತ್ತು ವರುಷ ನೋಡಬೇಕು. ಶೂದ್ರನ ಹನ್ನೆರಡು ವರುಷ ನೋಡಬೇಕು. ಈ ಹಿಂಗೆ ನೋಡಿದಲ್ಲದೆ, ದೀಕ್ಷೆಯ ಕೊಡಲಾಗದು. ಈ ಕ್ರಮವನರಿಯದೆ, ಉಪಾಧಿವಿಡಿದು, ಉಪದೇಶವ ಕೊಂಬಾತ ಶಿಷ್ಯನಲ್ಲ. ಇವರಿಬ್ಬರ ನಿಲವು ಒಂದೆ. ಟಿಕ್ಕನ ಮನೆಗೆ ಟಿಕ್ಕ ಬಂದಂತೆ, ಈ ಗುರುಶಿಷ್ಯರಿಬ್ಬರನು ರೌರವ ನರಕದಲ್ಲಿಕ್ಕುವ ನಮ್ಮ ಕೂಡಲಚನ್ನಸಂಗಮದೇವಾ.

೫. ಭವಿತನಕ್ಕೆ ಹೇಸಿ ಭಕ್ತನಾದೆನೆಂದೊಡೆ, ಆತನ ಪೂರ್ವಾಶ್ರಯವ ಕಳೆದು, ಭಕ್ತನ ಮಾಡುವ ಪರಿ ಎಂತೆಂದೊಡೆ, ಅವನ ಕಾಯವ ಶುದ್ಧವ ಮಾಡುವುದು, ಜೀವವ ಶುದ್ಧವ ಮಾಡುವುದು. ಆತ್ಮ ಗೂಡಿ ವಾಕ್ಕು ಪಾಣಿ ಪಾದ ಪಾಯು ಗುಹ್ಯವೆಂಬ ಕರ್ಮೇಂದ್ರಿಯಂಗಳ ಶುದ್ಧವ ಮಾಡುವುದು. ಆತನ ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕೆಂಬ

ಜ್ಞಾನೇಂದ್ರಿಯಂಗಳ ಶುದ್ಧವ ಮಾಡುವುದು. ಆತನ ಒಳಹೊರಗೆ ಸುತ್ತಿರ್ದ ಮಾಯಾ ಪಾಶದ ಪ್ರಪಂಚಮಂ ಬಿಡಿಸಿ, ಹಿಂದಣ ಭೂತ ಭಾವದಿಂದ ಜೀವೋ ಶಿವನೆಂಬ ಪರಿಯಾಯಮಂ ಕೆಡಿಸಿ, ಆ ಪರಶಿವನೆ ಇಷ್ಟಬ್ರಹ್ಮ, ಆ ಇಷ್ಟವೆ ನಿನ್ನ ಪ್ರಾಣ, ಆ ಪ್ರಾಣವೆ ಇಷ್ಟವೆಂದರುಹಿ, ಜೀವ ಶಿವನಲ್ಲಿ, ಆ ಶಿವನೆ ನಿನ್ನ ಜೀವವೆಂಬ ಪರಿಯಾಯಮಂ ತೋರಿಸಿ, ಆತನ ಜೀವ ಭಾವಮಂ ಕಳೆದು, ಶಿವಭಾವಿ ಎಂದೆನಿಸಿ, ಆತಂಗೆ ಪಂಚಭೂತಾದಿ ಅಧಿದೇವತೆಗಳ ತೋರಿಸಿ ಪಂಚವಕ್ತ್ರಂಗಳ ನೆಲೆಗೊಳಿಸಿ, ಪಂಚವರ್ಣಂಗಳನರುಹಿ, ಇದಕ್ಕೆ ಸಾಕ್ಷಿ, ಜೀವಾತ್ಮಂ ಪರಮಾತ್ಮಂ ಚ ಎಂಬ ಶೃತಿಯಿಂದೆ ಆತನ ಆತ್ಮ ಶುದ್ಧತೆಯಿಂ ಆತನ ಸರ್ವಾಂಗವ ಶುದ್ಧವ ಮಾಡಿ, ಆತನ ತಂದು ಗಣಪಙ್ತಿಯಲ್ಲಿ ಕುಳ್ಳಿರಿಸಿ, ಆ ದೀಕ್ಷಿತನ ಜಿಹ್ವೆಯಲ್ಲಿ, ಶೃತಿಯ ನೋದಿಸಿ, ॥ಸಾಕ್ಷಿ॥ ಓಂ ಕರ್ಮಾಣಾಂ। ಮನಸಾ ವಾಚಾ ಗುರೂಣಾಂ। ಭಕ್ತಿವತ್ಸಲಃ। ಶರೀರಾರ್ಥಂ ಪ್ರಾಣಂಚ। ಸದ್ಗುರುಭ್ಯೋ ನಿವೇದಯೇತ್ ॥ ಎಂದು ಮಾನಸೋಚ್ಚರಣೆಯಂ ಮಾಡಿಸಿ, ಆ ತಚ್ಛಿಷ್ಯನ ಭವವಂ ಛೇದಿಸಿ, ಆ ಮೇಲೆ ಅವನ ಎಬ್ಬಿಸಿ ಚೌಕ ಮಧ್ಯದಲ್ಲಿ ಕುಳ್ಳಿರಿಸಿ ॥ಶೃತಿ॥ ಓಂ ಮೇನಕಾ ಮೇನಕಾ ಎಂಬ ಮಂತ್ರದಿಂದೆ। ಅರ್ಘ್ಯೋದಕಮಂ ವಾಮ ಪ್ರದಕ್ಷಣವಾಗಿ ತಳಿದು, ಭಾಳದಲ್ಲಿ ವಿಭೂತಿಯ ಪಟ್ಟವಂ ಕಟ್ಟಿ, ಆತನ ಮಸ್ತಕದ ಮೇಲೆ ಹಸ್ತವನಿರಿಸಿ, ಶತಪತ್ರ ಕಮಲದೊಳಗಿರ್ದ ವಸ್ತುವನು ಮಾನಸೋಚ್ಚರಣೆಯಿಂದೆ ಪ್ರಾಣಲಿಂಗವೆಂದರುಹಿ, ಜ್ಞಾನದೃಷ್ಟಿಗೆ ತಂದು, ಅದೆ ವಸ್ತುವನೆ ಒಹಿಸ್ಫುರಿಸಿ ತಂದು, ಕುಮಾರ ಮೂರ್ತಿಯೊಳಗೆ ಪುದುಗಿಸಿ, ಅಷ್ಟುವೆಲ್ಲ ಒಂದು ಗೂಡಿದ ಮುದ್ದಿಯೇ ಇಷ್ಟಲಿಂಗವೆಂದು ತೋರಿಸಿ, ಕರಮನಭಾವದಲ್ಲಿ ನಿರ್ಧರಿಸೆಂದು ಹೇಳಿ, ಆತ್ಮವೆ ಲಿಂಗವೆಂಬುದು ಮಾಣಿಸಿ, ಶೈವ ಕರ್ಪುದಿಂದೆ ಮಾಡುವ ಸ್ಥಾವರ ಲಿಂಗದ ಪೂಜೆಯ ಮಾಣಿಸಿ, ಕರಕೆ ಕಂಕಣವ ಕಟ್ಟಿ, ನಿರ್ಧರದ ತಾಳಿಯಂ ಕಂಠದಲ್ಲಿ ಕಟ್ಟಿ, ಕಲಿಯಾಗು ಎಂದು ಎನ್ನ ಕೃತಾರ್ಥನ ಮಾಡಿದ ಶ್ರೀ ಗುರುವೆ, ಕೂಡಲ ಚನ್ನಸಂಗ ನಿಮ್ಮ ಶರಣ ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

ಮುಂದೆ ಪ್ರಸಾದಿಯ ಶಿವಲಿಂಗಸ್ಥಲ. ಇಂತಪ್ಪ ಗುರುಲಿಂಗದಲ್ಲಿ ಅವಧಾನಿಯಾಗಿರ್ಪ್ಪ ಪ್ರಸಾದಿಯ ಶಿವಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಸಾದಿಯ ಶಿವಲಿಂಗಸ್ಥಲ.

೧. ಪರುಷದ ಲಿಂಗವಿದ್ದು ಕಾಣಲರಿಯದೆ ಇಷ್ಟಲಿಂಗವಿದ್ದಿತ್ತೆಂದು ಅಂಗಕ್ಕೆ ಶಸ್ತ್ರವನಿಕ್ಕಿಕೊಂಡು ಸಾವರು. ಅರಿದರಿದು ಗುರುಶಿಷ್ಯ ಸಂಬಂಧವು ಅರುಹುಳ್ಳವರಿಗಲ್ಲದೆ ಮತ್ತಾರಿಗೆಯೂ ಆಗದಾಗಿ ಕುರುಹು ಘನವೋ ಅರುಹುಳ್ಳವರು ನೀವು ಹೇಳಿರೊ. ಮರಹು ಕವಿದಿತ್ತೆಂದು ಶ್ರೀಗುರುವು ಕುರುಹ ತೋರಿ ಕೊಟ್ಟನಲ್ಲದೆ ಅರುಹು ಮರೆದೊಡೆ ನಮ್ಮ ಕೂಡಲ ಚನ್ನಸಂಗಯ್ಯಂಗೆ ಅವರಂದೆ ದೂರ

೨. ಪ್ರತಿ ಇಲ್ಲದ ಲಿಂಗವು ಭಿನ್ನವಾಯಿತ್ತೆಂದು ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಡು ಆತ್ಮಘಾತಕವ ಮಾಡಿಕೊಂಬ ದ್ರೋಹಿಯ ಮುಖವ ನೋಡಲಾಗದು. ಅದೇಂತೆಂದೊಡೆ ಮಂತ್ರ ಭಿನ್ನವಿಲ್ಲವಾಗಿ ಪೂಜೆ ಭಿನ್ನವಿಲ್ಲ. ಮಹಾ ಬಯಲೊಳಗಣ ಪ್ರಸಾದ ಸಂಚವನರಿಯದೆ, ಆತ್ಮಘಾತಕವ ಮಾಡುವ ನರಕಿಗಳ ನೇನೆಂಬೆನೆಯ್ಯಾ ಕೂಡಲ ಚನ್ನಸಂಗಮದೇವಾ?

೩. ಗುರುಕಾರುಣ್ಯವುಳ್ಳ ಸದ್ಭಕ್ತನ ಲಿಂಗ ಓಸರಿಸಿದೊಡೆ ವ್ರತಗೇಡಿ ಎಂದು ಕಳೆಯಬಾರದು ಕೊಲ್ಲಬಾರದು. ಮುಂದೆ ಗುರುಕಾರುಣ್ಯಮುಂಟಾಗಿ ॥ಸಾಕ್ಷಿ॥ ಶುಭ್ರಂಸುಲಭಂ ಶುದ್ಧಂ। ಸಹಸ್ರಜಸ್ಸತ್ಯಪ್ರಾವನೆ। ಎಂದುದಾಗಿ ಮತ್ತೆ ॥ಸಾಕ್ಷಿ॥ ಅಲಿಂಗಿ ಲಿಂಗ ರೂಪೇಣ। ಯೋಲಿಂಗಿ ಉಪಜೀವಿತಃ। ನ ಪಶ್ಯತಿ ಮಹಾ ಘೋರೆ ನರಕೆ ಕಾಲಮಕ್ಷಯಂ ಎಂದುದಾಗಿ, ಶಸ್ತ್ರ ಸಮಾಧಿ, ಜಲ, ತಾಡನ, ದಿಗ್ಬಲಿ, ದಹನ, ಈ ಆರರಲ್ಲಿ ಸತ್ತಡೆ ಅಘೋರ ನರಕದಲ್ಲಿಕ್ಕುವ ನಮ್ಮ ಕೂಡಲಚನ್ನಸಂಗಮದೇವಾ.

೪. ಭಾಷೆಗಿರಿಸಿ ತನುವಿಂಗಲಗುಕೊಂಡಡೆ, ಲಿಂಗ ಓಸರಿಸಿತ್ತಯ್ಯಾ! ಆತನು ವೀರನೆನಿಸುವನು. ಲಿಂಗಕ್ಕೆ ದೂರ, ಜಂಗಮಕ್ಕೆ ದೂರ, ಪ್ರಸಾದಕ್ಕೆ ದೂರವಾಗಿ, ವ್ರತಗೇಡಿಯಹನು ಕಾಣಿರಣ್ಣಾ. ಇದು ಕಾರಣ ನಮ್ಮ ಕೂಡಲ ಚನ್ನಸಂಗಯ್ಯ ಬ್ರಹ್ಮೇತಿಕಾರನೆನಿಸುವನು.

೫. ಭಾಷೆಗೆ ತಪ್ಪಿ ತನುವಿಂಗೆ ಅಲಗ ಕಿತ್ತರೆ, ಲಿಂಗ ಓಸರಿಸಿತ್ತಯ್ಯಾ! ಮುಂದೆ ವೀರನಪ್ಪನು. ಇಂತಪ್ಪ ಭಾಷೆವಂತನು ಶರಣ ಅಲ್ಲ ಕಾಣಿರೋ. ಆತ ಕಲ್ಪಿತಾಕಾರನಲ್ಲ ಪೂರ್ವಾಶ್ರಯುವಿಲ್ಲ. ಉಭಯ ಕುಳ ರಹಿತ ಕೂಡಲ ಚನ್ನಸಂಗ ನಿಮ್ಮ ಶರಣ.

೬. ಅಂಗದ ಮೇಲಣ ಲಿಂಗ ಹಿಂಗಿತ್ತೆಂದು, ಆತ್ಮ ಘಾತಕವ ಮಾಡಿಕೊಳ್ಳಬೇಕೆಂಬ ಅಜ್ಞಾನಿಗಳು ನೀವು ಕೇಳಿರೊ. ಅಂಗವಾವುದು ಎಂದರಿಯಿರಿ. ಲಿಂಗವಾವುದು ಎಂದರಿಯಿರಿ. ಅಂಗವೆಂದೊಡೆ ಆತ್ಮನು, ಲಿಂಗವೆಂದೊಡೆ ಸಂಯುಕ್ತನು. ಈ ಎರಡರ ಸಂಬಂಧದ ಸಂಚವನರಿಯದೆ, ಅಂಗದ ಮೇಲಣ ಲಿಂಗ ಹಿಂಗಿತ್ತೆಂಬರಿಗೆ ಪ್ರಾಣಲಿಂಗ ನಾಸ್ತಿ. ಪ್ರಾಣಲಿಂಗವಿಲ್ಲದವರಿಗೆ ಪ್ರಸಾದವೆಲ್ಲಿಹದೋ? ಆ ಪ್ರಸಾದವಿಲ್ಲದವರಿಗೆ ಮುಕ್ತಿ ಎಲ್ಲಿಹದೋ ಕೂಡಲಚನ್ನಸಂಗಮದೇವಾ?

೭. ದೇವರು ಬದ್ದರು ದೇವರು ಬಿದ್ದರು ಎಂದು ಸಾಹಿತ್ಯದ ಕೂಡ ಸಾಯಬೇಕೆಂಬಿರಿ. ಅದಾವಾಗ ಬಿದ್ದಿತೆಂದರಿಯಿರಿ. ಅದಾವಾಗಿದ್ದಿತ್ತು, ಅದಾವಾಗ ಬಿದ್ದಿತ್ತೆಂಬುವುದ ನೀವು ಬಲ್ಲರೆ ಹೇಳಿರೆ. ॥ಸಾಕ್ಷಿ॥ ಅದೃಶ್ಯಂ ಭಾವನಾ ನಾಸ್ತಿ। ದೃಶ್ಯಮೇವ ವಿನಶ್ಯತಿ ಅವರ್ಣಮಕ್ಷರಂ ಬ್ರಹ್ಮ। ತಧ್ಯಾಯಂತಿ ವಿಯೋಗಿನಾಂ॥ ಇದು ಕಾರಣ ಕೂಡಲಚನ್ನಸಂಗಯ್ಯ ನಿಮ್ಮನರಿದಾಗಲಿದ್ದಿತ್ತು ಮರೆದಾಗ ಬಿದ್ದಿತ್ತು.

೮. ಉಭಯ ದಳವು ನಡೆದು ಬಂದು ಮುಂದೆ ನಿಂದಿರ್ದು, ಭಾಷೆಯಾಗಿ, ಬಿರಿದನುಚ್ಚರಿಸುತ್ತ ಹೊಯ್ದು ಕುಟ್ಟಾಡುವ ಕಾಳಗದೊಳಗೆ ಕೈದು ಬಿದ್ದೊಡೆ ಭಂಗವಲ್ಲದೆ ನಾಕಲಿವೆನೆಂದು ಅಭ್ಯಾಸ ಮಾಡುವ ಸಮಯದಲ್ಲಿ ಕೋಲು ಬಿದ್ದರೆ ಭಂಗವಲ್ಲ. ಮರಳಿ ಕೋಲು ಕೊಂಡಭ್ಯಾಸವ ಮಾಡುವುದುಚಿತವಲ್ಲದೆ ನಾ ನಿನ್ನಭ್ಯಾಸವ ಮಾಡಲಾಗದು. ಕೋಲುಬಿದ್ದಿತ್ತೆಂಬ ಗಾವಿಲರ ಮಾತು ಕೇಳಲಾಗದು. ದೃಷ್ಟವೇ ಕೋಲು ಅದೃಷ್ಟವೇ ಕಾವುದು. ಕಾಣಬಾರದ ಲಿಂಗವ ಕಾಂಬುದಕ್ಕೆ ತನ್ನ ಶಕ್ತಿ ಕಾಣಾ ಕೂಡಲ ಚನ್ನಸಂಗಮದೇವಾ.

೯. ಭಕ್ತಿಯುಂತುಟಲ್ಲ, ಯುಕ್ತಿಯುಂತುಟಲ್ಲ, ಮುಕ್ತಿಯುಂತುಟಲ್ಲ. ನಿಜ ಭಕ್ತಿಯ ಪರಿ ಬೇರೆ ಕೇಳಿರಣ್ಣಾ! ವೀರ ವೈರಾಗ್ಯದ ಭಾಷೆಯುಂತುಟಲ್ಲ. ಸಹಜದ ಪರಿ ಬೇರೆ ಕಾಣಿರಣ್ಣಾ! ಅಂಗ ಲಿಂಗ ಸಂಗ ಸಮರಸದ ಸಂಬಂಧವು ನಿಜ ಸಾರಾಯಂಗಲ್ಲದೆ ಪ್ರಸಾದದ ಗ್ರಾಹಕತ್ವವು ಪ್ರಾಣಲಿಂಗಿಗಲ್ಲದೆ ॥ಸಾಕ್ಷಿ॥ ಪರಿಣತಂ ಪ್ರಾಣಲಿಂಗಿನಾಂ। ಲಿಂಗ

ಪ್ರಾಣಂತು ಉತ್ತಮಂ । ಸಯಾತ್ಮ ವಂದನಂ ಕೃತ್ವಾ । ನರಕೆ ಕಾಲ ಮಾಕ್ಷಯಂ ॥ ಇದು ಕಾರಣ ಕೂಡಲಚನ್ನಸಂಗಯ್ಯ ನಿಮ್ಮ ಸಹಜ ಸಂಬಂಧದ ಸಾರಾಯದ ಮಸ್ರಸಾದದ ಪ್ರಾಣ ನಿಯತಾಚಾರವು ಪ್ರಾಣಲಿಂಗಿಗಲ್ಲದೆ, ಮತ್ತಾರಿಗೆಯೂ ಸಲ್ಲದಯ್ಯಾ.

೧೦. ಹರಿ, ಬ್ರಹ್ಮ, ಇಂದ್ರ, ಚಂದ್ರ, ರವಿ, ಕಾಲ, ಕಾಮ, ದಕ್ಷಾದಿಗಳು ಮೊದಲಾಗಿ, ಇವರೊಳಗಾದ ಸರ್ವ ಸಮಸ್ತರು ಲಿಂಗವನಾರಾಧಿಸಿ, ಧ್ಯಾನ ಮೌನ ನೇಮ ನಿತ್ಯ ತಪಸ್ಸಿನಿಂದೆ, ಅರ್ಚಿಸಿ ಪೂಜಿಸಿ, ಹಲವು ಪ್ರಕಾರದಿಂದೆ ಒಲಿಸಿ, ನಾನಾ ಫಲಪದಂಗಳ ಪಡೆದು ಭೋಗಿಸಿ ಸುಖಿಯಾಗಿಹುದಕ್ಕೆ ಸಂಶಯವೇಕೆ? ಸಂದೇಹವೇನು? ಶ್ರುತ ದೃಷ್ಟಾನುಮಾನದಿಂದೆ ತಿಳಿದು ನೋಡಿರೆ. ಎರಡಿಲ್ಲದೆ ಏಕವಾಗದೆ, ನಾ ನೀನೆಂಬ ಭಿನ್ನದೋರದೆ, ಶಿವನೆ ಅಂಗವಾದ ಸದ್ಭಕ್ತನಿರವು ಇಂತಲ್ಲ ಕೇಳಿರಣ್ಣಾ! ಅದೆಂತೆಂದೊಡೆ, ಜಪ ತಪ ಧ್ಯಾನ ಮೌನ ನಿಯಮ ಶೀಲ, ಕ್ರಿಯೆಗಳೆಂಬ ನಾನಾ ವ್ರತಂಗಳ ಕೈಕೊಂಡು, ಹಲವು ಪ್ರಕಾರದ ಅರ್ಚನೆ ಪೂಜೆಯಂ ಮಾಡಿ, ಒಲಿಸಿಕೊಂಡು, ಭಕ್ತಿ ಯುಕ್ತಿ ಶಕ್ತಿಯಿಂದ, ಚತುರ್ವಿಧ ಫಲಪದಂಗಳಂ ಪಡೆದು ಮೇಲೆ ಮುಕ್ತಿಯಾಗಬೇಕೆಂಬ ಅಲ್ಪಾಸೆವಿಡಿದು ಭ್ರಮೆಗೊಳಗಾದ ಭ್ರಾಂತು ಮರ್ಕಟರಂತಲ್ಲ ನೋಡಿರೆ. ಶಿವಶಿವಾ ಮಹಾದೇವ ಶಂಕರ ಸಾಂಬ ಎಂದು ಆ ಮಹಾವಸ್ತುವಿನಲ್ಲಿ ಬೆರಸಿದ ಅಭೇದ್ಯ ಶರಣಂಗೆ ಜಪ ತಪ ಧ್ಯಾನ ಮೌನವಲ್ಲಿಹದೊ? ಜಪ ಕೈಸಾರಿದಂಗೆ ಧ್ಯಾನ ಮೌನವೆಲ್ಲಿಹದೊ? ಧ್ಯಾನ ಧ್ಯೇಯುವಳವಟ್ಟು, ಅನುದಿಸಂಗೆ ತಪದ ತಗಹು ಇನ್ನೆಲ್ಲಿಹದೋ? ಇಹ ಪರವೆರಡು ದೆಸೆಗಟ್ಟವಂಗೆ ವ್ರತ ನೇಮದ ನೋಂಪಿಯು ಸೂತಕವಿನ್ನೆಲ್ಲಿಹದೋ? ಇಂತಿದನುದ್ಯಾಪನೆಯು ಮಾಡುವ ಸಂಪನ್ನ ಸತ್ಪುರುಷಮ್ಮಂ ಪಡೆದುಕೊಂಡು, ತೆರಹು ಮರಹಿಲ್ಲದೆ, ಪತಿಭಕ್ತಿಯಮಾಡುವ ಸಜ್ಜನ ಸತಿಗೆ ಭಜನೆ ಪೂಜಾಕ್ರಿಯುಗಳೆಂಬ ನೇಮದಿಂದರ್ಪಿಸಿ ಪೂಜಿಸಿ, ಧ್ಯಾನ ಮಾಡಬೇಕೆಂಬ ಸಂಭ್ರಮದ ದಂದುಗದ ಕೋಟಲೆ ಎಲ್ಲಿಹದೋ? ಅರ್ಥ ಪ್ರಾಣಾಭಿಮಾನ ಮೊದಲಾದ ಸಕಲ ಪದಾರ್ಥಂಗಳೆಲ್ಲವು ಮೊದಲೆ ಪುರಾತರವೆಂದರಿದು ಶಿವಯೋಗೀಶ್ವರರೆಂಬ ಪರಶಿವ ಶರಣರ್ಗೆ ಸಮರ್ಪಣೆಯು ಮಾಡುವ ಸದ್ಭಕ್ತಂಗೆ ಆವಾಗಲು ಶ್ರೀ ಗುರುಸೇವೆಯು ಮಾಡುವ ಕೈಯ್ಯಲ್ಲಿ ಮಣಿಗಳ ಹಿಡಿದು ತಿರುಹಬೇಕೆಂಬ ಧಾವತಿಗೊಳಗಾಗಲೇಕೋ? ಸದಾ

ಸನ್ನಿಹಿತನಾಗಿ ಅನುದಿನ ಶೃತಿಗೆಯ್ವ ಮನದ ನೆನಹ ಬಿಡಿಸಿ, ಎಣಿಕೆ
ಗಿಕ್ಕಿ ಸಂಚರಿಸುವ ಸಂದೇಹವದೇಕೋ? ಅನುಮಿಷನಾಗಿ ನೋಡುವ
ದೃಷ್ಟಿಗೆ ಎವೆಯ ಮರೆಯ ಮಾಡಿಕೊಂಡು ಕಣ್ಣ ಮುಚ್ಚುವದೇಕೋ?
ಕರ ಮನ ನೇತ್ರವೆಂಬ ತ್ರಿಸ್ಥಾನದಲ್ಲಿರಿಸಲರಿಯದೆ ಭೇದವ ಮಾಡಿ
ಅಗಲಿಸುವಂತಹ ಜಪ ತಪ ತಾನೇಕೋ? ಪರಿಪೂರ್ಣವಾದ ವಸ್ತು
ಕರಕಮಲದಲ್ಲಿರಲಿಕ್ಕಾಗಿ ಅಗಲಿಸಿ ದೂರಕಿಕ್ಕಿ ಎವೆವೆರಹ ಮಾಡಿ ಖಂಡಿಸಿ
ಕಂಡಿಹೆನೆಂಬ ಧ್ಯಾನ ಮೌನವೇಕೋ? ಸರ್ವ ಸಂಪದವನೀವಂತಹ
ಸ್ವತಂತ್ರ ಕರ್ತುವೆನಿಸುವ ಸಮರ್ಥಿಕೆಯುಳ್ಳ ವಸ್ತುವೆಂಬ ಪರಬ್ರಹ್ಮ
ದೊಳಗಿರ್ದು ಅಲ್ಪಪದವ ಸಾಧಿಸಿಹೆನೆಂದು ಕಾಯವ ದಂಡಿಸಿ ಆತ್ಮ
ನಿಗ್ರಹಂ ಮಾಡಿ, ಒಟ್ಟೆ ಗುತ್ತತನವಂ ಹಣ್ಣಿ ತಗಹಸಿಕ್ಕಿ ಕುಳ್ಳಿರ್ದು
ಬೇಡಿಕೊಂಬ ತಪವು ತಾನೇಕೋ? ಮುಟ್ಟಿತ್ತೆಲ್ಲವು ಪವಿತ್ರ ನೋಡಿ
ತ್ತೆಲ್ಲವು ಪಾವನ ನಿರ್ಮಳನೆಂಬ ನಿರ್ವಯಲಿಂಗ ಸದಾ ದಾಸೋಹದೊ
ಳಿರುತ್ತ ಸೂತಕ ಬಡದೆಂದು ಜಡ ಕ್ರಿಯೆದಿಂದೆ ಭಾಷೆಗೊಡಲ ಗುರಿ
ಮಾಡಿ ಮೀಸಲಾಗಿಹ ಪ್ರಾಣವನಿರಿದುಕೊಂಡು ಸಾವ ಸಂಕಲ್ಪ ವ್ರತ
ನೇಮಂಗಳವೇಕೋ? ಪೂಜೆ ಪೂಜಿಸುವನು ಪೂಜಿಸಿಕೊಂಬುವನು ತಾನೆ
ಎಂದು ತಿಳಿದು ಈ ತ್ರಿವಿಧ ಪೂಜೆಯ ಸೂತ್ರಾತ್ಮಕ ತಾನೆ ಎಂಬ ಹವ
ಣನರಿದು ಆ ಅರುಹಿಂಗೆ ತಾನೆ ಆಶ್ರಯವಾಗಿರಲು ಇದನರಿಯದೆ ನಾನಾ
ಪರಿಯಿಂದೆ ಒಲಿಸಿ ಮೆಚ್ಚಿಸಿ ಸ್ವರ್ಗದ ಭೋಗವೆಂಬ ಧರ್ಮಕರ್ಮಂಗ
ಳನುಂಬ ಕೈಕೂಲಿಕಾರನಂತೆ ಮಾಡುವ ಅರ್ಚನೆಯ ಪೂಜೆಯ ಆಯ
ಸವೇಕೋ? ಜಪ ತಪ ಜಾಡ್ಯದ ಜಂಜಡದವನಲ್ಲ. ಧ್ಯಾನ ಮೌನದಿಂದೆ
ಬಿಗಿದು ಬಿರ್ರನೆ ಬೆರತಿಹ ಬಂಧನದವನಲ್ಲ. ನೆವದಿಂದ ತದ್ದಿನವ ಮಾಡ
ಬೇಕೆಂಬ ಉದ್ದೇಶಿಯಲ್ಲ. ವರುಷಕ್ಕೊಂದು ತಿಥಿ ಎಂದು ಮಾಡುವ
ಕೀರ್ತಿ ವಾರ್ತೆಗೆ ಮುಯ್ಯಾನುವವನಲ್ಲ. ಮಿಕ್ಕ ಕಿರುಕುಳ
ಹಾದಿಯವನಲ್ಲ. ಸಹಜ ಸಂತೋಷದಿ ಹಾಲಸಾಗರದೊಳಗಿರ್ದ್ದ
ವಾಳಿ ಯಾವಿನಜೆನ್ನ ಹರಿವವನಲ್ಲ. ಸರ್ವಾಂಗದೊತ್ತನ್ಮಯವಾಗಿರಲು ಭಿನ್ನ
ವೇಕೋ? ಪರುಷದ ಗಿರಿ ಕೈಸಾರಿರ್ದು ನಾಡ ಮಣ್ಣ ಕೂಡ
ಲಿಕ್ಕಿ ತೊಳೆದು ಹಾಗವ ಸಾಧಿಸಬೇಕೆಂಬ ಧಾವತಿಯವನಲ್ಲ. ಅತ್ಯಂತ
ಸ್ನೇಹದಿಂದ ಮನಕ್ಕೆ ಬಂದು ನೆನಹಿನಿಂದೆ ನೆಲೆಗೊಂಡಿರಲು ಆಹಾ
ಎನ್ನ ಪುಣ್ಯವೇ ಆಹಾ ಎನ್ನ ಭಾಗ್ಯವೇ ಎಂದು ಕರ ಮುಖ ಭಾವ

ತುಂಬಿ ಕ್ರೀಡಿಸುವ ರತಿ ಸುಖವ ಬಿಟ್ಟು ಬರೆ ನೆನಹಿನ ಆಸೆ ಎಂಬ ಚಿಂತೆಯಿಂದೆ ತೊಳಲಿ ಬಳಲುವ ಮರಹಿನಲ್ಲಿಯು ತಂತ್ರಿಗಳಂತೆ ಭಿನ್ನವಿಟ್ಟು ಕಂಡಿಹೆನೆಂದು ಆಸೆ ಬಡುವವನಲ್ಲ. ಮತ್ತೆ ಕೆಲವು ಮತದವರಂತೆ ಕಂಡಿಹೆನೆಂದು ತೆರಹುಗೆಟ್ಟು ನುಡಿವವನಲ್ಲ. ಅರಸಲುಂಟೇ? ಬಯಸಲುಂಟೇ? ತಾನಲ್ಲದೆ ಅನ್ಯವಿಲ್ಲೆಂದು ಅಹಂಕರಿಸಿ ಬೆರೆವವನಲ್ಲ. ಮತ್ತೆ ಉಳಿದ ಕಾಕುಮತದ ಸೊಗಸಿಗೆಳಸಿ ಕಾಮುಕನಾಗಿ ಹೊಲಬುಗೆಡುವವನಲ್ಲ. ಅಹುದಾದುದ ಹುಸಿ ಮಾಡಿಮತ್ತುಂಟೆಂದು ಭೇದವ ಮಾಡುವ ದುಷ್ಟ ದುರ್ಮತಿಗಳ ಪರಿಯಲ್ಲ. ಭಿನ್ನವಿಟ್ಟು ಮಾಡಿಹೆನೆಂಬ ಸಂಸಾರ ದಂದುಗದವನಲ್ಲ. ಕೂಡಲೊಲ್ಲೆನೆಂಬ ವಿಕಳವಾವರಿಸಿದ ವೈರಾಗ್ಯದವನಲ್ಲ. ರತಿಯುಳ್ಳ ಸತಿಯೊಡನೆ ಸಂಯೋಗವ ಮಾಡುವಂತೆ ಕೂಡುವ ಶಿವಸುಖದಲ್ಲಿ, ಆ ಶಿವಸುಖವನಗಲಿಸುವ ಕಷ್ಟ ದುಃಖಕ್ಕೊಳಿವವನಲ್ಲ. ಋತುವರಿತ ಸತಿಯು ಕೂಟದಂತೆ ಅಗಲಿಕೆ ಇಲ್ಲದ ರತಿಯ ಸುಖ ಸಂಯೋಗದ ನೆಲೆಯನರಿದಾತಂಗೆ ಬೇರುಂಟೆ? ಇಲ್ಲವಾಗಿ, ಮಾಡುವಾತನು ತಾನೆ, ಮಾಡಿಸಿಕೊಂಬಾತನು ತಾನೆಯಾಗಿ, ಸೋಹ ದಾಸೋಹ ತಾನೆ ಎಂದು ಮಾಡುವ ಮಾಟವೆಲ್ಲವು ತಾನೆ ಬೇರೆಂದೆನ್ನದೆ, ಆದೆಂತೆಂದೊಡೆ ದಾತೃ ಭೋಕ್ತೃ ಶಿವನೊಬ್ಬನೆಯಲ್ಲದೆ ಬೇರೆ ತಮ ತಮಗೆ ಒಡೆತನ ಉಂಟೆ? ಇಲ್ಲವಾಗಿ. ಅನಾದಿ ಪರಶಿವ ತಾನೆ ಮಾಡುವ ಮಾಟವೆಲ್ಲವು ಸಟೆ ಇಲ್ಲದೆ ದಿಟ ಘಟಿಸಿ ಸ್ವಯವಾಗಿ ನಿಂದು ನಿರಾಶೆಯ ಕುಳದನುವನರಿದು, ನಿಜಗೊಂಡ ನಿಲವ ಪ್ರಮಾಣಿಸಿಕೊಂಡು, ಮಾಡಬೇಕೆಂದು ದ್ರವ್ಯವ ಕಲ್ಪಿಸಿ ಕೊಟ್ಟವರಾರೋ? ಮಾಡಬೇಕೆಂಬರಿವ ಕಣ್ದೆರದವರಾರೋ? ಮಾಡಬೇಕೆಂದು, ನೆನವ ಚೈತನ್ಯವಾದ ಪ್ರಾಣವ ತಂದಿರಿಸಿದವರಾರೋ? ಮಾಡಬೇಕೆಂಬ ಮಾಡಿಹೆನೆಂಬ ಮಾಡುವ ಇವನೆಲ್ಲವನು ಅಳವಡಿಸಿಕೊಂಡಿಹ ಕಾಯವ ರೂಪಿಸಿದವರಾರೋ? ಆದಿಯಿಂದ ನಡಿಸಿ ನುಡಿಸಿ ರೂಪಿಸಿ ಪ್ರಭಾವಿಸಿ, ವ್ಯಾಪಾರಕ್ಕೆ ತಂದವರಾರೋ? ಬೇರೆ ಹೊರವಳಿಯಿಂದೆ ನಾವುಪಿಡಿದು ಪ್ರತಿಜ್ಞೆಯ ಕೈಕೊಂಡು, ಇಲ್ಲದುದನುಂಟು ಮಾಡಿ ಪಡೆದು ಸಾಧಿಸಿಹೆನೆಂಬ ಬಯಲ ಸಂಭ್ರಮದಾಯಸವ ನೋಡಿರೆ. ಆ ಮಾಯಾಭ್ರಮೆಯು ತಲೆಗೇರಿ ಉಬ್ಬುಬ್ಬಿ ಹರಿದಾಡುವ ಅವಿಚಾರದ ಮನದ ಮರವೆಯ ಬಲೆಯ ವಿವರದ ಪರಿಯ ನೋಡಾ! ಪರಶಿವನು ತನ್ನ ಲೀಲಾವಿನೋದಕ್ಕೆ ಸಕಲವೆಲ್ಲವನು ರೂಪಿಸಿ ಆಗು ಮಾಡಿ ತೋರಲು ಎಲ್ಲವು ಎನ್ನಿಂ

ದಾಯಿತ್ತು, ನಾ ಮಾಡಿದೆನೆಂದುಲಿವ ದೇಹಿಯ ನೇನೆಂಬೆನಯ್ಯ? ಅವರಿಂದಾದೊಡವೆಯ ಅವರಿಗಿತ್ತು, ನಾ ಮಾಡಿದೆನೆಂಬ ಬಯ ಲುಪಚಾರವ ನೋಡಾ. ನದಿಯುದಕವ ನದಿಗಿತ್ತಂತೆ ಒಡೆಯರಿ ಗೊಡವೆಯನೊಪ್ಪಿಸಿ ತಾ ಶುದ್ಧನಾಗಿ, ನಡೆನುಡಿಯಲ್ಲಿ ಕವಲುದೋ ರದೆ ತನ್ನಲ್ಲಿ ಘನವೆಡೆಗೊಂಡ ಮಹಾನುಭಾವಿಗಳು ಎಲ್ಲವನು ಅಳವಡ ಸಿಕೊಂಡಿಹ ಕಾಯುವನೆ ಗುರುವೆಂದು ಧ್ಯಾನಿಸಿದರು. ನೆನೆವ ಚೇತ ನವಾದ ಪ್ರಾಣವೇ ಲಿಂಗವೆಂದು ಪೂಜಿಸಿದರು. ಮಹಾನುಭಾವದಿಂದ ರಿದ ಜ್ಞಾನವನೆ ಜಂಗಮವೆಂದು ಭಾವಿಸಿದರೈ ಕೂಡಲಚನ್ನಸಂಗಮ ದೇವಾ.

---

ಮುಂದೆ ಜಂಗಮಲಿಂಗಸ್ಥಲ. ಇಂತೀ ಶಿವಲಿಂಗದಲ್ಲಿ ಅನುಭಾವಿ ಯಾದ ಪ್ರಸಾದಿಯ ಜಂಗಮಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಸಾದಿಯ ಜಂಗಮಲಿಂಗಸ್ಥಲ.

೧. ಅನುಕೃತವ ಮಾಡಿಹೆನೆಂದು, ಉಪ್ಪರ ಗುಡಿಯನೆತ್ತಿ ಮಾ ಡುವ ಭಕ್ತನ ಮನೆಯು ಅಟ್ಟೆಕ್ಕುವ ಅಂದಣಗಿತ್ತಿಯ ಮನೆ. ಸರ್ವ ಜೀವ ದೊಳಗೆ ಚೇತನಾತ್ಮಕ ಶಿವನೆಂದು ಮಾಡುವದು ಭೂತದೈವಕ್ಕಿಕ್ಕು ವದು ಸುಯಿಧಾನದ ಕೇಡು. ಸೂಳೆಯ ಮಗ ಮಾಳವನಿಕ್ಕಿದೊಡೆ, ತಾಯ ಹೆಸರಾಯಿತ್ತಲ್ಲದೆ, ತಂದೆಯ ಹೆಸರಿಲ್ಲ. ನಿರ್ಧರ ನಿಷ್ಠೆಗಳಿಲ್ಲದೆ ಮಾಡುವ ಮಾಟವೆಂತಯ್ಯಾ ಕೂಡಲಚನ್ನಸಂಗಮದೇವಾ?

೨. ಮರ್ಮವಿಡಿದು ಮಾಡುವಂಗೆ ಕರ್ಮವಿಲ್ಲ, ಕವಲು ಇಲ್ಲ. ಒಬ್ಬರ ಕಂಡೊಬ್ಬರು ಹೆಮ್ಮೆಯ ಖ್ಯಾತಿಯ ಬಿಮ್ಮಿಲಿ ಮಾಡುವವನ ವಿಧಿಯ ನೋಡಾ. ಸಜ್ಜನ ಸದಾಚಾರ ಸತ್ಕ್ರಿಯವಿಡಿದು, ಮಾಡುವ ಭಕ್ತಿಯ ನಿಮಗೆ ಗೈಯಿದನರಿದು ಈ ಪರಿಯಲ್ಲಿ ಮಾಡುವನು ಕೂಡಲ ಚನ್ನಸಂಗಯ್ಯ ನಿಮ್ಮ ಶರಣ ಸಂಗನಬಸವಣ್ಣನು.

೩. ಮಾಡುವರಯ್ಯ ಮರುಳುಗೊಂಡಂತೆ. ಮಾಡುವರಯ್ಯಾ ಭವಿ ಸ್ಥಾವರ ದೀಕ್ಷೆ ಶೈವಕರ್ಮದೊಡಗೂಡಿ. ಮರ್ಮವನರಿಯದೆ ಮಾಡುವ ಮಾಟ ಕರ್ಮದ ಬೆಳಸು ಸುಯಿಧಾನದ ಕೇಡು. ಕೂಡಲಚನ್ನಸಂಗಯ್ಯ

ನಿಮ್ಮ ಶರಣರನುವರಿದು ಮಾಡುವ ಮಾಟ ಲಿಂಗ ಜಂಗಮದ ಕೂಟ ಭವ ಭಂಗದೋಟ. ಕೂಟವರಿಯದ ಮಾಟವದೇತಕಯ್ಯ?

೪. ಅನ್ನವನಿಕ್ಕಿದೊಡೇನು? ಪುಣ್ಯವಹುದು. ವಸ್ತ್ರವ ಕೊಟ್ಟಡೇನು? ಪುಣ್ಯವಹುದು. ಹಣವ ಕೊಟ್ಟಡೇನು? ಪುಣ್ಯವಹುದು. ಆಯಾಯ ಫಲಪದದ ಸಿರಿ ಸಂಪತ್ತು ಅಹುದಯ್ಯ ಕೂಡಲಚನ್ನಸಂಗಮದೇವಾ.

೫. ತ್ರಿಕರಣ ಶುದ್ಧವಾಗಿ ಆಚಾರ ಪೂರಿತವಾಗಿ ಅನುಭಾವ ಯುಕ್ತವಾಗಿ ನಿಮ್ಮ ನೆರೆ ನಂಬಿ ಮಾಡಿದೊಡೆ ನಿಜ ಮುಕ್ತಿಯಹುದು. ಅನುಭಾವ ಇಲ್ಲದ ಭಕ್ತಿ ಎಳತಟಗೊಳಿಸುವುದು. ಅತಿ ಚಪಳಿಗನಾದ ಜಂಗಮ ಸಂಸಾರಿಯಾದ ಭಕ್ತ ನಿಃಸಂಸಾರಿಯಾದ ವೈರಾಗ್ಯವು ಸಂಸಾರ ನಿಷ್ಠೆಯು ಒಂದಾದೊಡೆ ತೆರಹಿಲ್ಲದಿರ್ಪ ನಮ್ಮ ಕೂಡಲ ಚನ್ನಸಂಗಮ ದೇವಾ.

೬. ॥ಸಾಕ್ಷಿ॥ ಆಕಾಯಭಕ್ತಕಾಯಃ । ಮಮಕಾಯಸುಭಕ್ತಯೋಃ। ಎಂಬ ಶ್ರುತಿಯನೋದುವರಣ್ಣ ಭಕ್ತಂಗೆ. "ಮಹಂತೋ ಲಿಂಗರೂಪೇಣ ಮಹಂತೊ ಜಂಗಮಸ್ತಥಾ" ಎಂಬ ಶ್ರುತಿಯನೋದುವರಣ್ಣ ಜಂಗ ಮಕ್ಕೆ. ಇಂತೀಭಕ್ತ ಜಂಗಮವೆರಡು ಒಂದಾದೊಡೆ ನಮ್ಮ ಕೂಡಲ ಚನ್ನಸಂಗಯ್ಯ ತೆರಹಿಲ್ಲದಿರ್ಪನವರಲ್ಲಿ.

೭. ಅರ್ಥಪ್ರಾಣಾಭಿಮಾನ ಹೊಲ್ಲಹದೆಂಬುವರು ಭಕ್ತಂಗೆ ತಮ್ಮ ಹೊದ್ದಿದ ಮಲಿನವನರಿಯರು. ಕರುಳುಗೊಳ್ಳದ ಉದಾನ ಮರಳಿಯರ್ಪಿ ತವದೆಂತು ಕೊಳಬಹುದು? ಬೇಡುವಾತ ಜಂಗಮವಲ್ಲ, ಬೇಡಿಸಿ ಕೊಂಬಾತ ಭಕ್ತನಲ್ಲ. ಬೇಡದೆ ಆ ಭಕ್ತ ತಾನೆ ಮಾಡಿದ ಮಾಟವ ಪರಿಣಾಮಿಸಬಲ್ಲಡೆ ಜಂಗಮ. ಬೇಡಿಸಿಕೊಳ್ಳದ ಆ ಜಂಗಮದಿಂಗಿತವನ ರಿತು ಮಾಡಬಲ್ಲಡೆ ಆತನೆ ಸದ್ಭಕ್ತನು. ಆ ಭಕ್ತರ ಇಂಗಿತವರಿದು ಅವರ ಮನದಿಚ್ಛೆಯ ಸಲಿಸಬಲ್ಲಡೆ ಆತನೆ ಪರಮ ಜಂಗಮ. ಆ ಭಕ್ತ ನನ್ನದು ನಾನೆಂದು ನುಡಿದೊಡೆ ನಾಯ ಮಾಂಸ ಸತ್ತ ಹೆಣನ ಮಲವು ನಾಯಡಗು. ಇದನರಿಯದೆ ಓಟಲಾರದ ಮೃಗವು ಶ್ವಾನಂಗೆ ಮಾಂಸ ವನೀವಂತೆ. ಇದು ಕಾರಣವಾಗಿ, ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಬೇಡದೆ ಮಾಡುವ ಭಕ್ತನುಂಟಾದಡೆಯು ಬೇಡದೆ ಮಾಡಿಸಿಕೊಂಬ ಜಂಗಮವಪೂರ್ವವಯ್ಯಾ.

೮. ಮಾತು ಕಲಿತು ಮಂಡೆಯ ಬೋಳಿಸಿಕೊಂಡಡೇನು? ವೇಷ ಲಾಂಛನ ಉದರಪೋಷಕನಲ್ಲದೆ ಶಿವಾನುಭಾವದ ಸುವಿಚಾರದ ಸುಯಿಧಾನದ ಹೊಲಬನರಿಯರು. ಅರುಹು ಆಚಾರ ಏಕವಾದುದೆ ಇಷ್ಟ. ಆಚಾರ ಹೀನವಾದುದರಿಂದೆ ಅದು ಇಷ್ಟವಿಧಾರ್ಚನೆ ಷೋಡಶೋಪಚಾರದಿ ಭಜನೆ ಪೂಜಾ ಕ್ರಿಯೆಗಳಿಗೆ ಸಲ್ಲದ ಕಾರಣ ಅದು ಸೀಮೆಯ ಕಲ್ಲು. ಅನ್ಯರ ಬೋಧಿಸಿ ತಂದುದರವ ಹೊರೆವ ವೇಷಢಂಬಕ ಗುರು ಶಿಷ್ಯರ ಮೆಚ್ಚುವರೆ ವೀರಶೈವಸಂಪನ್ನರಾದ ನಿಜಶರಣರು? ಅವರ ಸ್ವಪ್ನದಲ್ಲಿ ಸುಳಿಯರು ನಮ್ಮ ಕೂಡಲ ಚನ್ನ ಸಂಗಮದೇವರು.

೯. ಬೇಡುವವ ಜಂಗಮವೆ? ಬೇಡಿಸಿಕೊಂಬುವವ ಸದ್ಭಕ್ತನೆ? ಈ ವರ್ಮವನರಿಯದ ಹಿರಿಯರು ನರಮಾಂಸ ಭಕ್ಷಕರಯ್ಯಾ. ತನುಪೆತ್ತಿ ಮನ ಉಬ್ಬಿ ಮಾಡಿದೊಡೆ ಲಿಂಗಾರ್ಪಿತವಾಯಿತ್ತಯ್ಯ. ಮಾಡಿ ಮನವಿಲ್ಲದಿರ್ದೊಡೆ ನೀಡಿ ನಿಜವಿಲ್ಲದಿರ್ದೊಡೆ ಕೊಟ್ಟು ಕುದಿಗೊಂಡೊಡೆ ಮಾಡಿ ನೀಡಿ ಕೊಟ್ಟು ಕೊಂಡುದು ಅನರ್ಪಿತವಾಯಿತ್ತು. ಮಾಡಿದಷ್ಟಿಷ್ಟೇನು ಇಲ್ಲದೆ ಅನರ್ಥವಾಗಿ ಹೋಗಿ ಮುಂದೆ ನರಕವಪ್ಪುದು ತಪ್ಪದಯ್ಯಾ. ಇದು ಕಾರಣ ಕೂಡಲ ಚನ್ನಸಂಗಮದೇವ ಲಕ್ಷಕ್ಕಾದಡೂ ಒಬ್ಬ ಭಕ್ತನುಂಟು. ಕೋಟಿಗಾದಡೆಯು ಒಬ್ಬ ಜಂಗಮವಿಲ್ಲ.

೧೦. ಕಲ್ಪಿತದಿಂದೆ ಮಾಡುವ ಭಕ್ತ ನಿರ್ಧನಿಕನಾದೊಡೆ, ತನ್ನ ಕೈಯ್ಯ ಹಣವ ವೆಚ್ಚಿಸಿ ಆ ಭಕ್ತನ ಕೂಡಿಕೊಂಡು, ಲಿಂಗಾರ್ಚನೆಯ ಮಾಡುವದಯ್ಯಾ! ಅವರ ದಾಸೋಹಕ್ಕೆ ನಿಲ್ಲಿಸಿ, ತಾ ಕರ್ತನಾಗಿ ನಿಂದು ಪರಿಣಾಮಿಸಬಲ್ಲಡೆ, ಆತ ಜಂಗಮವೆಂಬೆನಯ್ಯಾ! ಆತಂಗೆ ನಮೋ ನಮೋ ಎಂಬೆನಯ್ಯಾ! ಇಂತಲ್ಲದೆ ಮುನ್ನ ನಿಮ್ಮನಾರು ಮಾಡ ಹೇಳಿದರು, ಏನ ಮಾಡಿದಿರಿ, ಏನಿ ಭೋ ಎಂದು ಝಂಕಿಸಿ ಜರೆದು ಹೋಹವನ ಜಂಗಮವೆಂಬೆನೆ? ಎನ್ನೆನಯ್ಯ. ಅದೇನು ಕಾರಣವೆಂದೊಡೆ, ಆತ ಶೂನ್ಯಗಾರ ಆತ ದೋಷಾರ್ಥಿ, ಆತ ಭವಭಾರಿ. ಜಂಗಮ ದಾಸೋಹವ ಬಿಟ್ಟು, ಘನವಿಲ್ಲವಯ್ಯಾ ಕೂಡಲ ಚನ್ನಸಂಗಮದೇವಾ.

೧೧. ಗತಿ ಪಥ ಮುಕ್ತಿಯ ಬಯಸಿ ಮಾಡುವಾತ ಭಕ್ತನಲ್ಲ. ಗತಿ ಪಥ ಮುಕ್ತಿಗೆ ವಿರಹಿತ ಭಕ್ತ. ಹಮ್ಮು ಬಿಮ್ಮು ಗಮನ ನಿರ್ಗಮನ ಸೂತಕ ವಿರಹಿತ ಜಂಗಮ. ಮಾಡುವರೆ ಭಕ್ತ ಮಾಟದೊಳಗಿಲ್ಲದಿರಬೇಕು. ಮಾಡಿಸಿಕೊಂಬುವದರೊಳಗಿಲ್ಲದಿರಬೇಕು. ಜಂಗಮ ಪ್ರಾಣ

ವಿಲ್ಲದ ಭಕ್ತನ ಜಂಗಮದ ನುಡಿ ಗಡಣದ ಮೇಳಾಪವದೆಂತಿರಬೇಕಯ್ಯಾ ಎಂದೊಡೆ ಪ್ರಚ್ಛನ್ನವಾಗಿ ಲೋಕಕ್ಕೆ ತೋರಿ ಲೋಕಕ್ಕೆ ಅದೃಶ್ಯನಾಗಿರಬೇಕು. ಜಲಚರಾದಿಗಳ ಪಥವಂತೆ, ಶಿಸು ಕಂಡ ಕನಸಿನಂತೆ, ಮೊನೆಯುಂಡ ರುಚಿಯಂತೆ. ವೀರಶೈವಾಚಾರ ಸಂಪನ್ನನಾದ ಸಿದ್ಧಾಂತಿಗಿದು ಚಿಹ್ನವು. ಇಂತಲ್ಲದೆ ಹಗರಣದ ಓಗರ ಹಳಸಿದಂತೆ, ಕುಹಕನ ವಾದ್ಯದಂತೆ, ನಗೆಗೆಡೆಯಾಗುತ್ತೈದಾರೆ. ಹೇಮದೊರೆಯ ವೃತ್ತಿಕೆಯನೆತ್ತಿದಂತೆ ಭೇರುಂಡ ಬಾಯಿ ಒಡೆದಂತೆ, ಇಂತಪ್ಪವರ ಭಕ್ತನೆಂತೆಂಬೆ? ಜಂಗಮವೆಂತೆಂಬೆ? ಆ ಭಕ್ತ ಜಂಗಮದ ಘನವನುಪಮಿಸಬಾರದಯ್ಯ ಕೂಡಲ ಚನ್ನಸಂಗಮದೇವಾ.

೧೨. ಸುಳಿವ ಜಂಗಮವು ಕಾಲಿಲ್ಲದೆ ಸುಳಿಯಬೇಕು. ಮಾಡುವ ಭಕ್ತನು ಕೈಯ್ಯಿಲ್ಲದೆ ಮಾಡಬೇಕು. ಸುಳಿವ ಜಂಗಮಕ್ಕೆ ಕಾಲಿದ್ದರೇನಯ್ಯ? ಅನ್ಯ ಗೃಹಕ್ಕೆ ಗಮನಿಸದಿರ್ದೊಡೆ ಸಾಕು. ಮಾಡುವ ಭಕ್ತಂಗೆ ಕೈ ಇರ್ದಡೇನಯ್ಯಾ? ಗುರು ಲಿಂಗ ಜಂಗಮಕ್ಕಲ್ಲದೆ, ಮಾಡದಿರ್ದೊಡೆ ಸಾಕು. ಸಾಕ್ಷಿ॥ ಜಂಗಮಸ್ಯ ಗಮನಂ ನಾಸ್ತಿ । ಭಕ್ತಸ್ಯ ಗೃಹಮಾಚರೇತ್ । ಅನ್ಯಗ್ರಹಗಮಿಷ್ಯಂತಿ । ತದ್ಗೋಮಾಂಸ ಭಕ್ಷಣತ್॥ ಇದೀಗ ಜಂಗಮಸ್ಥಲದ ಲಕ್ಷಣವು. ಸತ್ಪಾತ್ರ ದಾತೃ ವಿತ್ತಸ್ಯ ತದ್ಧನಂ ಸಾಧನಂ ಸುಖಂ ಅಪಾತ್ರ ದಾತೃ ಭೋಕ್ತ್ರಸ್ಯ ತದ್ಧನಂ ಅಸುಖಂಭವೇತ್ ॥ ಇದೀಗ ಭಕ್ತಲಕ್ಷಣವು. ಈ ಸುಯಿಧಾನದ ಹೊಲಬನರಿಯರು. ಧರ್ಮವನಿವರೆತ್ತ ಬಲ್ಲರೋ? ಭಕ್ತ ಜಂಗಮದ ನಿಲವು ದಾನಧರ್ಮದ ಕೂಟವು, ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಏಕಾರ್ಥವು, ಇದೆ ಸರ್ವಸಮ್ಮತವಾದ ನಿರ್ಣಯವು.

೧೩. ಹೊರ ವೇಷದಲಿ ವಿಭೂತಿ ರುದ್ರಾಕ್ಷಿಯನಳವಡಿಸಿಕೊಂಡು ವೇದಶಾಸ್ತ್ರ ಪುರಾಣಾಗಮ ಮೊದಲಾಗಿ, ಪುರಾತರ ವಚನ ಬಹು ಪಾಠಕರು ಎನಿಸಿಕೊಂಡು, ಅನ್ನದಾನ, ವಸ್ತ್ರದಾನ, ಕನ್ಯಾದಾನ, ಸುವರ್ಣದಾನಂಗಳನೀವವರ ಬಾಗಿಲ ಕಾಯ್ದು ಬಣ್ಣದ ಪುತ್ಥಳಿಯಂತೆ ಹೋಗಿ ನಿಂದು, ಹೊಸ್ತಲಲ್ಲಿ ತುಳಿದಾಡಿಕೊಂಡಿಹ ನಿತ್ಯ ನೇಮದ ಹಿರಿಯರೆಲ್ಲರು ನೀವು ಕೇಳಿರೋ. ಸಾಕ್ಷಿ॥ ವಾಯುವೃದ್ಧ ತಪೋವೃದ್ಧ ವೇದವೃದ್ಧ ಬಹುಶ್ರುತಃ । ಸರ್ವ ಸಾಧನವೃದ್ಧಸ್ಯ ದ್ವಾರೆ ತಿಷ್ಠಂತಿ ಕಿಂಕರಾಃ ॥ ಎಂಬ ಶ್ರುತಿ ದಿಟವಾಯಿತ್ತು. ಇಂತಿವನೆಲ್ಲವನರಿದಂತಹ

ಹಿರಿಯರು ಲಕ್ಷ್ಮಿಯ ಮನೆಯ ದ್ವಾರಪಾಲಕರಾದರು. ಆ ಅರುಹಿಂಗೆ ಇದು ವಿಧಿಯೆ? ಎಲೆಲೆ ಕೂಡಲಚನ್ನಸಂಗಯ್ಯಾ ನೀ ಮಾಡಿದ ಮರಹು.

೧೪. ಸಕಲಪ್ರಾಣಿಗಳಿಗೆ ಲೇಸಾಗಲೆಂದು ಮಜ್ಜನಕ್ಕೆರೆವ ಲಾಂಛನಧಾರಿಗಳ ವೇಷಕ್ಕೆ ಶರಣೆಂಬೆನಯ್ಯಾ. ಆ ಲಾಂಛನದ ಹೆಚ್ಚು ಕುಂದನರಸದೆ ಸಕಲಪದಾರ್ಥವನು ಗುರು ಲಿಂಗ ಜಂಗಮಕ್ಕೆ ಒಪ್ಪಿಸಿ ಸಕಲ ಕೃತ್ಯಂಗಳಿಂದ ನಿಮಗೋಸುಗ ತಹೆನು. ದಯದಿಂದೆ ಮನೆಗೆ ಬಂದಂತೆ ಭಯಭಕ್ತಿಯಿಂದ ಪರಿಣಾಮಿಸಿ ಅವರಿಚ್ಛೆಯನೀವೆನು ಆತನಿರ್ದಲ್ಲಿಗೆ ಹೋಗಿ. ಕೂಡಲ ಚನ್ನಸಂಗಯ್ಯನಲ್ಲಿ ನಾನು ಇಲ್ಲ ನೀನು ಇಲ್ಲ. ನಾನಿಲ್ಲದ ಮುನ್ನ ನೀನಿರ್ದುದಿಲ್ಲವಯ್ಯಾ.

---

ಇಂತೀ ಪ್ರಸಾದಿಯ ಪ್ರಸಾದಲಿಂಗ ಸ್ಥಲ. ಇಂತು ಜಂಗಮ ಲಿಂಗದಲ್ಲಿ ಅವಧಾನಿಯಾದ ಪ್ರಸಾದಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಸಾದ ಲಿಂಗಸ್ಥಲ

೧. ಅಚ್ಚ ಪ್ರಸಾದಿ ನಿಚ್ಚಪ್ರಸಾದಿ ಎಂದು ತಮ್ಮಿಚ್ಚೆಗೆ ಬೊಗಳುವ ಕುನ್ನಿಗಳ ನೋಡಾ. ಬಾರದ ನಾಡಿಂದ ಬಂದ ಬಣಗುಗಳಂತೆ, ಮತ್ತಿಕ್ಕಿರೋ ಇಕ್ಕಿರೋ ಎಂದು ಒಟ್ಟಿಸಿಕೊಂಡು ತಿಂಬಷ್ಟು ತಿಂದು ಹೆಚ್ಚಾದೊಡೆ ಬಿಸಾಟುವ ಕುನ್ನಿಗಳ ಮೆಚ್ಚುವನೆ ನಮ್ಮ ಕೂಡಲ ಚನ್ನಸಂಗಮದೇವಾ?

೨. ರೂಹಿಲ್ಲದ ನೆಳಲಿಂಗೆ ಮಳಲ ಬೊಂಬೆಯ ಮಾಡಿ, ನಾದ ಬಿಂದುವಿನಲ್ಲಿ ಹುಟ್ಟಿಸಿ ಅರಿಗೆಯು ಸ್ವೈದೋರದೆ ಇದ್ದಿತ್ತು. ಶಿವನ ಮಾಯೆಯು ಕಾಯದ ಕಳವಳಕ್ಕೆ ಮುಂದೆ ರೂಪಾಗಿ ತೋರಿತ್ತಲ್ಲದೆ ಬೇರೆ ತೋರಲಿಲ್ಲ. ಅಂಗ ಭೋಗವನೆ ಕುಂದಿಸಿ ಪ್ರಸಾದವನೆ ರುಚಿಸಿಹೆನೆಂಬ ಲಿಂಗವಂತರುಗಳೆಲ್ಲ ಅರಿವೆಣಗಳಾಗಿ ಹೋದರು. ಅಂಗಭೋಗವೆ ಲಿಂಗ ಭೋಗ ಅಂಗಭೋಗವೆ ಅರ್ಪಿತವಾಗಿ ॥ಸಾಕ್ಷಿ॥ ಪ್ರಯಾಣಾಂ ಪಾಕ ಸಂಬಂಧಿ। ಭೋಗಂ ಜಂಗಮ ವರ್ಜಯೇತ್। ನಾಸ್ತಿ ಲಿಂಗಾರ್ಜನಂ ನೈವ। ಪ್ರಸಾದಂ ನಿಷ್ಫಲಂ ಭವೇತ್॥ ಎಂದುದಾಗಿ ಲಿಂಗಕ್ಕೆ ಬಂದ ರುಚಿ ಜಂಗಮಕ್ಕೆ ಬಾರದೇ? ಜಂಗಮಕ್ಕೆ ಬಂದ ರುಚಿ ಲಿಂಗಕ್ಕೆ ಬಾರದೆ? ಇದು ಕಾರಣ ಕೂಡಲ ಚನ್ನಸಂಗಯ್ಯ ಪಾಕಸಂಬಂಧಿಗೆ ಪ್ರಸಾದ ದೂರ.

೩. ತನು ಮುಟ್ಟದ ಮುನ್ನವೆ ಲಿಂಗಾರ್ಪಿತವ ಮಾಡಬೇಕು. ಮನ ಮುಟ್ಟದ ಮುನ್ನವೆ ಲಿಂಗಾರ್ಪಿತವ ಮಾಡಬೇಕು. ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕೆಂಬ ಪಂಚೇಂದ್ರಿಯಂಗಳು ಮುಟ್ಟದ ಮುನ್ನವೆ ಲಿಂಗಾರ್ಪಿತವ ಮಾಡಬೇಕು. ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಪ್ರಸಾದಿಯಾದೊಡೆ, ಇಂತಾಗಬೇಕಯ್ಯಾ. ಇಂತಲ್ಲದವರು ಬರುಕಾಯರೆನಿಸುವರಯ್ಯಾ.

೪. ಪದಾರ್ಥ ಪದಾರ್ಥವೆಂದೆಂಬಿರಿ. ಪದವಾವುದು, ಅರ್ಥವಾವುದು ಎಂದರಿಯಿರಿ. ಪದವೆ ಲಿಂಗ, ಅರ್ಥವೆ ಭಕ್ತ. ಇದನರಿದು ಪದಾರ್ಥವೆಂದು ತಂದು, ಅರ್ಪಿತವ ಮಾಡಬಲ್ಲಡೆ, ಕೂಡಿಪ್ಪನಯ್ಯಾ ನಮ್ಮ ಕೂಡಲ ಚನ್ನಸಂಗಮದೇವಾ.

೫. ಅಚ್ಚ ಪ್ರಸಾದಿಗಳೆಂದು, ಹುಸಿದು ತನ್ನ ಮನದ ಹವಣಿಂಗೆ ಗಡಣಿಸಿಕೊಂಬುವರು. ತನು ಮನ ಮುಟ್ಟಿದೋಗರ ಲಿಂಗಾರ್ಪಿತಕ್ಕೆ ಸಲ್ಲದು. ಅನರ್ಪಿತವನುಂಡು, ಅಚ್ಚ ಪ್ರಸಾದಿಗಳೆನಿಸುವರ ನೋಡಿ, ಮಹಾಲಿಂಗೈಕ್ಯರುಗಳು ಮೆಚ್ಚುವರೆ? ಬಂದ ಬಂದ ಪದಾರ್ಥವ ಆಯಾಯ ಮುಖವನರಿದು ನಮ್ಮ ಕೂಡಲಚನ್ನಸಂಗಯ್ಯನೆಂಬ ಮಹಾಲಿಂಗಕ್ಕೆ ಅರ್ಪಿಸಬಲ್ಲಡೆ, ಆತನೆ ಅರಿವು ಆಚಾರಸಂಪನ್ನನಾದ ಅಚ್ಚಪ್ರಸಾದಿ ಎಂಬೆನಯ್ಯಾ.

೬. ಪ್ರಕಟದಿಂದೆ ಕೊಂಬುದು ಪ್ರಸಾದವಲ್ಲ. ಗುಪ್ತದಲ್ಲಿ ಕೊಂಬುದು ಪ್ರಸಾದವಲ್ಲ. ಪ್ರಕಟದಂತುಟೆ ಪ್ರಸಾದ? ಗುಪ್ತದಂತುಟೆ ಪ್ರಸಾದ? ಪ್ರಸಾದದಂತುವನೇನೆಂದು ಹೇಳುವೆನಯ್ಯ ಈ ಲೋಕದ ಭವಭಾರಿಗಳೊಡನೆ? ಆ ಮಹಾಘನ ಪ್ರಸಾದದ ಮಹಿಮೆಯನೇನೆಂದುಸುರುವೆನಯ್ಯಾ? ಸಾಕ್ಷಿ॥ ಆರೂಢಂ ಚ ಪ್ರಸಾದೇನಾಂ। ಗುಪ್ತಂಚ ನಾಂಪ್ರಸಾದಿತಂ॥ ಗೋಪ್ಯಂ ರೂಢಮಯಂನಾಸ್ತಿ। ಮಹಾ ಪ್ರಸಾದಿ ಸಜ್ಜನಂ॥ ಎಂದುದಾಗಿ ಪ್ರಕಟ ಗುಪ್ತವ ಕಳೆದು ನೆಟ್ಟನೆ ಪ್ರಸಾದವ ಕೊಳಬಲ್ಲಡೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆತನೆ ನಿತ್ಯ ಪ್ರಸಾದಿ.

೭. ಕಾಯುವೇ ಲಿಂಗಾರ್ಪಿತ, ಅರ್ಪಿತವೆ ಪ್ರಸಾದ. ಅದೆ ಮತ್ತೆ ಮತ್ತೆ ಅರ್ಪಿತ ದರುಶನದಿಂದಲಾಯಿತ್ತು, ಸ್ಪರ್ಶನದಿಂದಲಾಯಿತ್ತು. ಅರ್ಪಿಸುವ ಸೋಂಕು ಸಂಬಂಧದ ಸುಖವನರ್ಪಿಸಲರಿಯದೆ, ಬರಿದೆ ವಾಗ

ದ್ವೈತವ ನುಡಿವ ಕುಶಬ್ದದವರು ವಾಗ್ಭ್ರಾಂತರುಗಳೆನಿಸುವರಯ್ಯಾ ಕೂಡಲ ಚನ್ನಸಂಗಮದೇವಾ.

೮. ಕ್ಷೀರವ ಸೋಂಕಿದ ಉದಕವ ಬೇರೆ ಮಾಡಬಹುದೆ ಅಯ್ಯಾ? ಪರಿಮಳವ ಸೋಂಕಿದ ವಾಯುವ ವಿವರಿಸಬಹುದೆ ಅಯ್ಯಾ? ॥ಸಾಕ್ಷಿ॥ ಉತ್ತಮಂ ಏಕ ವಾಕ್ಯಂ ಚ। ಮಧ್ಯಮಂ ಸ್ವಯ ನಿಕರಂ। ಕನಿಷ್ಠಾರ್ಪಿತಂ ಚೈವ। ಪ್ರಸಾದಂ ನಿಷ್ಪಲಂ ಭವೇತ್॥ ಎಂದುದಾಗಿ ರೂಪಿಂಗೆ ರೂಪಿನರ್ಪಣೆಯ ಮಾಡುವರು. ರುಚಿಯ ಪರಿಮಳದ ಭಾವದತ್ತಲು ಅವಧಾನಿಯಾಗಿರ್ಪ ಬೇರೆ ಮತ್ತೆ ಅವಧಾನವಿಲ್ಲದಂತಿರ್ಪರಯ್ಯಾ. ನಿಮ್ಮ ಶರಣ ಪರಮಪ್ರಸಾದಿಯಯ್ಯಾ ಕೂಡಲ ಚನ್ನಸಂಗಮದೇವಾ.

೯. ಸರ್ವ ದ್ರವ್ಯವನರ್ಪಿತವ ಮಾಡಬೇಕೆಂಬ, ಸರ್ವೇಂದ್ರಿಯವು ಸನ್ಮತವಹ ವಿವರವನರಿಯರು. ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕು ಸಾಹಿತ್ಯವಾಗಿ ಅರ್ಪಿತವ ಮಾಡಬೇಕು. ॥ಸಾಕ್ಷಿ॥ ಪ್ರಾಣಾಪಾನ ಕಾಲೇಸು। ಸರ್ವಭೋಗೋಪಭೋಗಿನಾಂ। ಅರ್ಪಿತಂಚಾವಧಾನೀ ಚ। ತಲ್ಲಿಂಗಂ ಪ್ರಾಣನಾಯಕಂ॥ ಎಂದುದಾಗಿ, ಕೂಡಲ ಚನ್ನಸಂಗಮದೇವಾ ನಿಮ್ಮ ನಿಜಾನಂದ ಪ್ರಸಾದಿಗೆ ನಮೋ ನಮೋ ಎಂಬೆನು.

೧೦. ತಟ್ಟುವ ಮುಟ್ಟುವ ಸೋಂಕುವ ಸುಖವ ಲಿಂಗಾರ್ಪಿತವ ಮಾಡಬೇಕೆಂದು ನುಡಿದು, ಮರಳಿ ಮರೆದು ಆ ಸೋಂಕಿನ ಸುಖವ ಲಿಂಗಾರ್ಪಿತವ ಮಾಡಲರಿಯದಿರ್ದೊಡೆ, ಅವನು ಪ್ರಸಾದಿಯಲ್ಲ. ॥ಸಾಕ್ಷಿ॥ ಸಂಯೋಗೇ ಚ ವಿಯೋಗೇ ಚ। ಅಣು ಮಾತ್ರ ಸುಖಾರ್ಪಿತಂ। ಯಃ ಕುರ್ಯಾದಿಷ್ಟಲಿಂಗೇಷು ಸಾವಧಾನೀ ನಿರಂತರಂ॥ ಇಂತೆಂದುದಾಗಿ ಕೂಡಲ ಚನ್ನಸಂಗಯ್ಯ ನಿಮ್ಮ ಸೇವಾನುಗ್ರಹಿಯಾದ ಮಹಿಮಂಗೆ ಶರಣು ಶರಣೆಂದು ಸಾಷ್ಟಾಂಗವೆರಗುವೆನು.

೧೧. ಅಂಗದ ಕೊನೆಯಲ್ಲಿ ಲಿಂಗ ಮುಂತಲ್ಲದೆ, ಸಂಗವ ಮಾಡನಾ ಶರಣ. ನಯನದ ಕೊನೆಯಲ್ಲಿ ಲಿಂಗ ಮುಂತಲ್ಲದೆ ಅನ್ಯವ ನೋಡನಾ ಶರಣ. ಶ್ರೋತ್ರದ ಕೊನೆಯಲ್ಲಿ ಲಿಂಗ ಮುಂತಲ್ಲದೆ ಅನ್ಯವ ಕೇಳನಾ ಶರಣ. ಘ್ರಾಣದ ಕೊನೆಯಲ್ಲಿ ಲಿಂಗಮುಂತಲ್ಲದೆ ಅನ್ಯವ ವಾಸಿಸನಾ ಶರಣ. ಜಿಹ್ವೆಯ ಕೊನೆಯಲ್ಲಿ ಲಿಂಗ ಮುಂತಲ್ಲದೆ, ಅನ್ಯವ ರುಚಿಸನಾ ಶರಣ. ಅದೇನು ಕಾರಣವೆಂದೊಡೆ, ಕೂಡಲ ಚನ್ನಸಂಗಯ್ಯ ನಿಮ್ಮ ಶರಣ ಸರ್ವಾಂಗ ಲಿಂಗಯಾದ ಕಾರಣ.

೧೨. ಆಯುತ ಸ್ವಾಯುತ ಸನ್ನಿಹಿತದ ಸಂಭ್ರಮದ ಅನಾಯುತಂಗಳು ಮುಟ್ಟಲ್ಲಮ್ಮವು ನೋಡಾ. ಆತ ವಿಪರೀತ ಚಾರಿತ್ರ. ಅದೆಂತೆಂದೊಡೆ, ಶ್ರೋತ್ರದ ಕೈಯ್ಯಲರ್ಪಿಸುವ, ನೇತ್ರದ ಕಯ್ಯಲರ್ಪಿಸುವ, ಘ್ರಾಣದ ಕೈಯ್ಯಲರ್ಪಿಸುವ, ಜಿಹ್ವೆಯ ಕೈಯ್ಯಲರ್ಪಿಸುವ, ತ್ವಕ್ಕಿನ ಕಯ್ಯಲರ್ಪಿಸುವ, ಮನದ ಕೈಯ್ಯಲರ್ಪಿಸುವ, ಅಲ್ಲಲ್ಲಿಗೆ ತಟ್ಟಿದ ಮುಟ್ಟಿದ ಸೋಂಕಿದ ಸುಖಂಗಳೆಲ್ಲವನು ಆ ಶರಣನು ವಿಚಾರದಿಂದಲ್ಲಲ್ಲಿಗೆ ಲಿಂಗಾರ್ಪಿತವ ಮಾಡುವ ಮರ್ಮವ ಬಲ್ಲನಾಗಿ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಆತನೆ ಮಹಾಪ್ರಸಾದಿಯಯ್ಯಾ.

೧೩. ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಪ್ರಾಣ ಪ್ರವೇಶವಾದುದಾಗಿ, ಲಿಂಗದೊಳಗೆ ಪ್ರಾಣ ಪ್ರಾಣದೊಳಗೆ ಲಿಂಗನೋಡಯ್ಯಾ. ಭಕ್ತನೊಳಗೆ ಪ್ರಸಾದ, ಪ್ರಸಾದದೊಳಗೆ ಭಕ್ತ ನೋಡಯ್ಯ. ಭಕ್ತಕಾಯ ಮಮಕಾಯವೆಂದುದಾಗಿ, ಆ ಭಕ್ತಕಾಯ ಪ್ರಸಾದಕಾಯ ನೋಡಯ್ಯಾ. ವಿಶ್ವತೋ ಚಕ್ಷುವಿನೊಳಗೆ, ಜ್ಞಾನಚಕ್ಷು ಒಂದೆ ನೋಡಯ್ಯ. ಆ ಜ್ಞಾನಚಕ್ಷುವಿನೊಳಗೆ ವಿಶ್ವತೋ ಚಕ್ಷು ನೋಡಯ್ಯಾ. ವಿಶ್ವತೋ ಮುಖದೊಳಗೆ ಸೂಸುವ ಜ್ಞಾನಮುಖ ಒಂದೆ ನೋಡಯ್ಯಾ. ವಿಶ್ವತೋ ಬಾಹುಗಳೊಳಗೆ, ನಮಸ್ಕಾರ ಬಾಹು ಒಂದೆ ನೋಡಯ್ಯ. ವಿಶ್ವತೋ ಪಾದದೊಳಗೆ ನಿಮ್ಮ ದಿವ್ಯ ಶ್ರೀಪಾದ ಒಂದೆ ನೋಡಯ್ಯಾ. ಈ ಹಿಂಗಿರ್ದಿತೆಂಬುದನರಿದು, ಲಿಂಗವ ಮನದಲ್ಲಿ ನೆನೆದು ಲಿಂಗಕ್ಕೆ ಮನವನಿತ್ತು ಜಂಗಮವ ಮನದಲ್ಲಿ ನೆನೆದು, ಜಂಗಮಕ್ಕೆ ಧನವನಿತ್ತು ಪ್ರಸಾದವ ಮನದಲ್ಲಿ ನೆನೆದು, ಪ್ರಸಾದಕ್ಕೆ ತನುವನಿತ್ತ ಮತ್ತೆ ಲಿಂಗವ ದೃಷ್ಟಿಯಲ್ಲಿ ನೋಡಿ, ಲಿಂಗಕ್ಕೆ ನೋಟವನಿತ್ತು, ಲಿಂಗಶ್ರೋತ್ರದಿಂದ ಕೇಳಿ, ಆ ಕೇಳಿಕೆಯ ಲಿಂಗಕ್ಕಿತ್ತು, ಲಿಂಗತ್ವಕ್ಕಿನಿಂದ ಸ್ಪರ್ಶಿಸಿ, ಲಿಂಗಕ್ಕೆ ಸ್ಪರ್ಶನವಿತ್ತು, ಲಿಂಗ ಜಿಹ್ವೆಯಿಂದೆ ರುಚಿಸಿ, ಲಿಂಗಕ್ಕೆ ರುಚಿಸಲಿತ್ತು, ಲಿಂಗಘ್ರಾಣದಿಂದ ಘ್ರಾಣಿಸಿ, ಲಿಂಗಕ್ಕೆ ಘ್ರಾಣಿಸಲಿತ್ತು, ಇಂತು ಸರ್ವದ್ರವ್ಯವನು ಲಿಂಗಕ್ಕಿತ್ತು, ಲಿಂಗಕಾಯದಿಂದೆ ಭೋಗಿಸಿ ಲಿಂಗಕ್ಕೆ ಭೋಗಿಸಲಿತ್ತು, ಆ ಪ್ರಸಾದವ ತಾ ನಿರ್ಧರಿಸಿ, ಪ್ರಸಾದ ಕಾಯದಿಂದೆ, ಸರ್ವ ಭೋಗೋಪಭೋಗದನುವನರಿತು, ಭೋಗಿಸುವನಯ್ಯಾ ನಿಮ್ಮ ಪ್ರಸಾದಿ. ಇದು ಕಾರಣವಾಗಿ ಭಕ್ತ ದೇಹಿಕ ದೇವ ನಮ್ಮ ಕೂಡಲಚನ್ನಸಂಗಯ್ಯನೆಂದರಿದು ಪ್ರಸಾದಿ ಪ್ರಸಾದಿಯಾದೆನಯ್ಯಾ.

ಇಂತೀಪ್ರಸಾದಲಿಂಗದಲ್ಲಿ ಸಾವಧಾನಿಯಾದ ಪ್ರಸಾದಿಯು ಮಹಾಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಸಾದಿಯ ಮಹಾಲಿಂಗಸ್ಥಲ.

೧. ನಡೆ ನುಡಿವ ಚೈತನ್ಯದ ಒಡಲಗುಣವುಳ್ಳನ್ನಕ್ಕರ ಅರಿಗೆಯು ಕಾಣಬಾರದು. ಕೇಳುವ ಶ್ರೋತ್ರ, ನೋಡುವ ನಯನ, ವಾಸಿಸುವ ಘ್ರಾಣ, ರುಚಿಸುವ ಜಿಹ್ವೆ, ಸೋಂಕುವ ತ್ವಕ್ಕು, ಇದಕ್ಕೆ ಸಂಶಯವನರಿದು, ನಾ ಕೇಳಿದೆ, ನಾ ನೋಡಿದೆ, ನಾ ವಾಸಿಸಿದೆ, ನಾ ರುಚಿಸಿದೆ, ನಾ ಮುಟ್ಟಿದೆನೆಂಬುದನಳಿದು ಕೇಳುತ್ತ, ನೋಡುತ್ತ, ವಾಸಿಸುತ್ತ, ರುಚಿಸುತ್ತ, ಸೋಂಕಿಸುತ್ತ ಲಿಂಗಾರ್ಪಿತವ ಮಾಡಿ ಲಿಂಗ ಭೋಗೋಪಭೋಗಿಯಾದ ಪರಮಪ್ರಸಾದಿಗೆ ಸರ್ವಾಂಗವು ಶುದ್ಧನಾಯಿತ್ತಯ್ಯಾ. ಕಾಯತ್ರಯಂಗಳ ಜೀವತ್ರಯಂಗಳ ಭಾವತ್ರಯಂಗಳೊಂದುಮಾಡಿ ಸುಖ ದುಃಖವ ಸಗುಣ ನಿರ್ಗುಣಂಗಳೆಂಬುಭಯ ಲಿಂಗದಲ್ಲೇಕವ ಮಾಡಿ, ಅಹುದಲ್ಲ ಬೇಕು ಬೇಡೆಂಬ ಸಂಶಯಮಂ ಕಳೆದು ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆದಿ ಪುರಾತರೊಳಗಾಗಿ ಈ ಲಿಂಗಾಂಗ ಸಂಗಸಮರಸವೆಂಬ ಸಕೀಲದೊಳೊಡಗೂಡಿದ ಮಹಾಪ್ರಸಾದಿಯ ಪಥವಿದು.

೨. ಲಿಂಗದ ಪೂರ್ವಾಶ್ರಯವ ಕಳೆಯಬಲ್ಲಾತನೆ ಭಕ್ತ. ಗುರುವಿನ ಪೂರ್ವಾಶ್ರಯವ ಕಳೆಯಬಲ್ಲಾತನೆ ಶಿಷ್ಯ. ಪ್ರಸಾದದ ಪೂರ್ವಾಶ್ರಯವ ಕಳೆಯಬಲ್ಲಾತನೇ ಶಿಷ್ಯ. ಪ್ರಸಾದದ ಪೂರ್ವಾಶ್ರಯವ ಕಳೆಯಬಲ್ಲಾತನೇ ಮಹಾ ಪ್ರಸಾದಿ. ಇಂತೀ ತ್ರಿವಿಧ ಪೂರ್ವಾಶ್ರಯವ ಕಳೆಯಬಲ್ಲಾತನೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆತನೆ ಅಚ್ಚಲಿಂಗೈಕ್ಯನು.

೩. ಲೋಹ ಪರುಷವ ಮುಟ್ಟುವದಲ್ಲದೆ ಪರುಷ ಪರುಷವ ಮುಟ್ಟುವದೆ ಅಯ್ಯಾ? ಅಂಗವಿಡಿದವಂಗೆ ಪ್ರಸಾದವಲ್ಲದೆ ಲಿಂಗವಿಡಿದವಂಗೆ ಪ್ರಸಾದಉಂಟೇ? ॥ಸಾಕ್ಷಿ॥ ಅಣೋರಣೀಯಾನ್ । ಮಹತೋ ಮಹೀಯಾನ್ । ಎಂದುದಾಗಿ ಕಿರಿದಿಂಗೆ ಕಿರಿದು ಹಿರಿದಿಂಗೆ ಹಿರಿದು ವಾಙ್ಮನಕ್ಕಗೋಚರ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಗುರು ಪ್ರಸಾದ ನಿರೂಪ ಲಿಂಗೈಕ್ಯವು.

೪. ಒಕ್ಕುದ ಮಿಕ್ಕುದ ಕೊಂಬೆವೆಂಬ ನಿಶ್ಚಲದ ಶರಣರಾರೋ? ಒಕ್ಕುದ ಮಿಕ್ಕುದ ಕೊಂಬೆವೆಂಬ ವಿವರ ಬಲ್ಲವರಾರೋ? ಇದ ಬಲ್ಲಡೆ

ಬಲ್ಲರು ಸಚ್ಚಿದಾನಂದ ನಿತ್ಯ ನಿರ್ಮಳವಾದ ನಿಜ ಶರಣರು. ಅದೆಂತೆಂದೊಡೆ ಒಕ್ಕುದೆಂಬುದೆ ಕಾಯು, ಮಿಕ್ಕುದೆಂಬುದೆ ಘ್ರಾಣ. ಈ ಉಭಯವೆ ತಕ್ಕುದೆಂದು ಕೊಳಬಲ್ಲಡೆ ಸಿಕ್ಕುವ ನಮ್ಮ ಕೂಡಲ ಚನ್ನಸಂಗಯ್ಯ.

೫. ಸೌಖ್ಯ ಬ್ರಹ್ಮವೇ ಶಂಕರ ಸದಾಶಿವ ಮಹಾದೇವ ಶಿವಬಸವ ಭಕ್ತರಲ್ಲಿ ಬಣ್ಣವನರಸುವಾತ ಆಚಾರ ದ್ರೋಹಿ, ಪಾದೋದಕದಲ್ಲಿ ಸೂತಕವ ಹಿಡಿವಾತ ಲಿಂಗದ್ರೋಹಿ, ಪ್ರಸಾದದಲ್ಲಿ ರುಚಿಯನರಸುವಾತ ಜಂಗಮ ದ್ರೋಹಿ, ಜಂಗಮದಲ್ಲಿ ಜಾತಿಯನರಸುವಾತ ಪ್ರಸಾದ ದ್ರೋಹಿ. ಈ ಚತುರ್ವಿಧದೊಳಗೆ ಸನ್ನಿಹಿತನಾದಾತನೇ ಭಕ್ತನೆನಿಸುವನು. ಇಂತೀ ಚತುರ್ವಿಧದೊಳಗೇಕವಾದಾತನೆ ಮಹೇಶ್ವರನೆನಿಸುವನು. ಈ ಚತುರ್ವಿಧದೊಳಗೆ ಲಯವಾದಾತನೆ ಪ್ರಸಾದಿ ಎನಿಸುವನು. ಈ ಚತುರ್ವಿಧದೊಳಗೆ ತದ್ಗತವಾದಾತನೆ ಪ್ರಾಣಲಿಂಗಿ ಎನಿಸುವನು. ಈ ಚತುರ್ವಿಧದೊಳಗೆ ಲವಲವಿಕೆಯುಳ್ಳಾತನೆ ಶರಣನೆನಿಸುವನು. ಈ ಚತುರ್ವಿಧವ ತನ್ನೊಳಡಗಿಸಿಕೊಂಡು ತಾನೆನಿಸುವನು. ಇಂತೀ ಷಟ್‌ಸ್ಥಲದೊಳಗೆ ಮಾರ್ಗಕ್ರಿಯೆ ಮೀರಿದ ಕ್ರಿಯೆಯೊಳಗಣ ಮಿಶ್ರ ಚತುರ್ವಿಧ ಸಾರಾಯವೆಂಬ ಸಾರವನು ಸಾಧ್ಯವ ಮಾಡಿಕೊಂಡಾತನೆ ಲಿಂಗದೇಹಿ. ಆತ ನಡೆದುದೆ ಬಟ್ಟೆ ಆತ ನುಡಿದುದೆ ಸಿದ್ಧಿ. ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆತ ಸರ್ವಾಂಗಲಿಂಗಿ. ಆತ ಲಿಂಗಶರಣ ಶರಣಲಿಂಗವೆನಿಸಿದ ಕಾರಣ ದೇಹವಿರ್ದು ನಿರ್ದೇಹಿಯಯ್ಯಾ.

ಇಂತೀ ಪ್ರಸಾದಿಸ್ಥಲ ಒಂದರಲ್ಲಿ ಷಡ್ವಿಧ ಲಿಂಗವು ಸಮರಸವನೆಯ್ದುತ್ತಿರಲು ಮುಂದೆ ಪ್ರಾಣಲಿಂಗಿಯ ಸ್ಥಲವಾದುದು. ಇಂತೀ ತೃತೀಯ ಸ್ಥಲಕ್ಕೆ ಸೇರಿದ ವಚನಂಗಳು. ೧೫೪, ಗ್ರಂಥ ೪೯ ಕ್ಕಂ ಮಂಗಳ ಮಹಾಶ್ರೀ.

## ಪ್ರಾಣಲಿಂಗಿಯಸ್ಥಲ.

ಆ ಪ್ರಾಣಲಿಂಗಿಯ ತಾಮಸನಿರಸನಸ್ಥಲ. ಆ ಸ್ಥಲದನುಭಾವದ ವಚನ.

### ಪ್ರಾಣಲಿಂಗಿಯ ತಾಮಸನಿರಸನಸ್ಥಲ

ತನು ಮುಟ್ಟಿ ಮನ ಮುಟ್ಟದೆ, ದೂರವಾದರಯ್ಯಾ ಬೆಲೆವೆಣ್ಣಿನಂತೆ. ಸೂಳೆ ತನು ಮುಟ್ಟಿ ಅಪ್ಪುವಳಲ್ಲದೆ ಮನ ಮುಟ್ಟಿ ಅಪ್ಪಳಯ್ಯಾ. ಹಾಗೆ ಅರಿವು ಆಚಾರವನರಿಯದ ಅರಿ ಮರುಳುಗಳು ಪರಮಾನಂದದ ಶಿವಸುಖವನೆತ್ತ ಬಲ್ಲರಯ್ಯಾ? ಕೋಟಿ ಸುಕೃತದ ಫಲವು ಒಂದು ವೇಳೆ ಕೈಸಾರಿದಂತಿರ್ದ ವೀರಶೈವಾಚಾರ ಸಂಪನ್ನರಾದ ಘನಮಹಿಮರೇ ಬಲ್ಲರಯ್ಯಾ ಕೂಡಲಚನ್ನಸಂಗಮದೇವಾ.

೨. ಉಲಿಗರ ಮಾತು ಉಲಿಗರ ತೋಟಿ ಎತ್ತ? ಲಿಂಗಾನುಭಾವದ ರಹಸ್ಯದ ವಾಕ್ಯವೆತ್ತ? ಸಂತೆಯೊಳಗೆ ಸಮಾಧಿಯುಂಟೆ ಮರುಳೆ? ಲಿಂಗಾನುಭಾವದ ಮಹಾನುಭಾವ ಸದ್ಭಕ್ತ ವಿರಕ್ತ ವೀರ ಮಾಹೇಶ್ವರರೆಂಬ ಶಿವಯುತರಿಗಲ್ಲದೆ, ಹೊರ ವೇಷದಲ್ಲಿ ನಾಮ ರೂಪು ಕ್ರಿಯೆವಿಡಿದು, ವಾಗ್ಬ್ರಹ್ಮಿಗಳೆನಿಸುವ ವಾಚಾಳಕರಿಗೆಲ್ಲಿಹದೊ? ಅದೆಂತೊ? ಅದೆತ್ತಣ ಸುದ್ದಿಯೊ ಕೂಡಲಚನ್ನಸಂಗಮದೇವಾ?

೩. ಭಕ್ತಿಗೆ ಅನುಭಾವವೇ ಬೀಜ ಕಾಣಿರೋ. ಭಕ್ತಿಗೆ ಅನುಭಾವವೇ ಆಚರಣೆ ಕಾಣಿರೋ. ಭಕ್ತಿಗೆ ಅನುಭಾವವೇ ಸಕಲೈಶ್ವರ್ಯದ ಶೃಂಗಾರ ಕಾಣಿರೋ. ವೀರಶೈವಾಚಾರ ಸಂಪನ್ನರೆನಿಸುವ ಪರಮ ಸದ್ಭಕ್ತರಿಗೆ ಅನುಭಾವವೆ ಅರಿವಿನ ಗೊತ್ತು ಕಾಣಿರೋ. ಅದು ಕಾರಣವಾಗಿ ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು. ಅನುಭಾವವನರಿಯದವ ಕಾಮುಕ ಕಾಣಿರೊ. ಆ ಮಹಾನುಭಾವವ ಮಾಡುವಲ್ಲಿ ಸಕಲ ಸಂಚಲವಳಿದು ವಿನಯದಿಂದೆ ಕೇಳದಿರ್ದೊಡೆ, ನಮ್ಮ ಕೂಡಲಚನ್ನಸಂಗಮದೇವರು ಅಘೋರ ನರಕದಲ್ಲಿಕ್ಕದೆ ಮಾಣ್ಬನೇ?

೪. ಅನುಭಾವ ಅನುಭಾವವೆಂದೆಂಬಿರಿ. ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೋ. ಅನುಭಾವವೆಂಬುದೇನು ರಚ್ಚೆಯ ಮಾತೆ? ಅನುಭಾವವೆಂಬುದೇನು ಸಂತೆಯ ಸುದ್ದಿಯೆ? ಅನುಭಾವವೆಂಬುದೇನು ಬೀದಿಯ ಪಸಾರವೆ? ಎನ ಹೇಳುವೆನಯ್ಯಾ

ಅನುಭಾವದ ಘನಪನು? ಆನೆಯು ಮಾನದೊಳಗಿಕ್ಕಿದೊಡೆ ಅಡಗು ವದೆ ದರ್ಪಣದೊಳಗಲ್ಲದೆ? ಆ ಹಾಗೆ ಕಂಡಕಂಡಲ್ಲಿ ಗೋಷ್ಠಿ ಗೋಷ್ಠಿ, ನಿಂದ ನಿಂದಲ್ಲಿ ಬಂದ ಬಂದಲ್ಲಿ ಅನುಭಾವವ ಮಾಡುವ ಪಾತಕರನೆನ ಗೊಮ್ಮೆ ತೋರದಿರಯ್ಯಾ ಕೂಡಲ ಚನ್ನಸಂಗಮದೇವಾ.

೫. ಮುನ್ನಿನ ಆದ್ಯರ ವಚನವ ನೋಡಿರೋ. ಲಿಂಗದ ನಡೆ, ಲಿಂಗದ ನುಡಿ, ಜಂಗಮದ ನಡೆ, ಜಂಗಮದ ನುಡಿ, ಪ್ರಸಾದದ ನಡೆ, ಪ್ರಸಾದದ ನುಡಿ, ಇದಕ್ಕೆ ಶೃತಿಯ ತೋರಿ ನುಡಿವರು. ಅದಲ್ಲದೆ ದೃಷ್ಟವ ತೋರಿ ನಡೆವರು. ವೇದವೆಂಬುದು ಓದಿ ಹೇಳುವ ಮಾತು. ಶೃತಿ ಪುರಾಣಾಗಮಂಗಳಾರಿಂದೊಡಾದವು ಇವ ಬಲ್ಲೆವೆಂದು ನಮ್ಮ ಪುರಾತರ ವಚನಕ್ಕೆ ಸರಿಯಾಗಿ ಅನುಭಾವವ ಮಾಡುವೆವೆಂಬ ಕರ್ಮ ಕಾಂಡಿಗಳಿಗೆ ನಾನೇನೆಂಬೆನಯ್ಯಾ? ಲಿಂಗ ಸಂಧಾನಿಗಳಾದ ಮಹಾ ನುಭಾವಿಗಳು ಊಚು, ಉಳಿದವರು ನೀಚು. ಹೊಂಬಿತ್ತಾಳಿಯು ಕೆಂಪಿ ಸಿದಂತೆ, ಸಿಂಹನ ನಡು ಸಣ್ಣದೆಂದೊಡೆ, ನಾಯ ನಡು ಸಣ್ಣದೆಂದೊಡೆ ಈ ಪಂಚಮಹಾಪಾತಕರ ನುಡಿಯ ಕೇಳಲಾಗದು. ಈ ಓಡುಗಳ ಮಾತಾಡಿಸಲಾಗದು. ಮಾತಾಡಿ ಗಾಸಿಯಾಗಲೇಕಯ್ಯಾ ಕೂಡಲಚ ನ್ನಸಂಗಮದೇವಾ?

೬. ವೃಕ್ಷಾಶ್ರಿತನಾಗಿರ್ದೊಡೇನು? ಭಿಕ್ಷಾಹಾರಿಯಾಗಿರ್ದೊಡೇನು? ಉಟ್ಟುದ ತೊರೆದು ಬತ್ತಲೆಯಾಗಿರ್ದೊಡೇನು? ಕಾಲ ವಿರಹಿತನಾದೊ ಡೇನು? ಕರ್ಮ ವಿರಹಿತನಾದೊಡೇನು? ನಮ್ಮ ಕೂಡಲ ಚನ್ನಸಂಗ ಯ್ಯನ ಅನುಭಾವವನರಿಯದವರು ಏಸು ಕಾಲವಿರ್ದೊಡೆಯು ವೃಥ ವೃಥಾ ಕಾಣಿರೋ.

೭. ಮಾತಿನ ಮಾಲೆಯ ಗೀತಂಗಳಿಂದ ಸುಜಾಣನಾಗಬಹುದು. ಸ್ತೋತ್ರದ ಸೊಗಸಿನ ಪ್ರಾಜ್ಞತೆಯಿಂದೆ ಜಾಣನೆನಿಸಬಹುದು. ಅಂತ ರಂಗ ಬಹಿರಂಗವನರಿಯಬಹುದು. ಆಗಮ ಪುರಾಣಂಗಳ ಗಣನೆಯ ಗಣಿತವ ತಿಳಿದು, ಶೃತಿ ಸ್ಮೃತಿಗಳಿಂದೆ ಶ್ರೇಷ್ಠನೆನಿಸಬಹುದು. ಭೂತ ವಿಕಾರದ ಪ್ರಕೃತಿಯ ಸ್ವಭಾವವ ತಿಳಿದು, ಅದರ ಭ್ರಾಂತಿಯನಳಿದಿರ ಬಹುದು. ಕಾಂತೆಯರ ರತಿ ಕ್ರೀಡೆಯ ಗುಣವ ವರ್ಜಿತನಾಗಿರಬ ಹುದು. ಕಾಶಿ, ಕೇದಾರ, ರಾಮೇಶ್ವರ, ಶ್ರೀಶೈಲ ಮೊದಲಾದನಂತ

ಕ್ಷೇತ್ರ ತೀರ್ಥಂಗಳಲ್ಲಿ ಗುಹ್ಯವಾಸಿಗಳಾಗಿರಬಹುದು. ನಮ್ಮ ಕೂಡಲ ಚನ್ನ ಸಂಗಯ್ಯನೆಂಬ ಮಹಾದಾನಿ ಲಿಂಗದ ಇಚ್ಛಾವಾಸಿಯಾಗಿರಬಾರದೆ? ಆ ಮಹಾಲಿಂಗದಲುಪ್ಪವಿಸಿದ ದಿವ್ಯ ಜ್ಞಾನಿಗಳಿಗಲ್ಲದೆ ಇತರರ್ಗೆ ಸಾಧ್ಯವೇ?

೮. ಸೀಮರ ಕಂಡೆ, ನಿಸ್ಸೀಮರ ಕಂಡೆ, ಭಾವರ ಕಂಡೆ, ನಿರ್ಭಾವರ ಕಂಡೆ, ಅನುಭಾವರ ಕಂಡೆ, ಮಹಾನುಭಾವರ ಕಂಡೆ, ಮಹಿಮರ ಕಂಡೆ. ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಸಾತ್ವಿಕರಾಗಿ ಮನಸ್ಸಮಾಧಿಯ ನೆಯ್ದಿದ ಚಿನ್ಮಯರಾರನು ಕಾಣೆನು.

೯. ಶೀಲವಂತರ ಲಕ್ಷಾಲಕ್ಷರ ಕಂಡೆ. ನೇಮಸ್ಥರ ಲಕ್ಷಾಲಕ್ಷರ ಕಂಡೆ. ಇದಂತಿರಲಿ. ಭಕ್ತಿ ಎಂಬ ಸಿತ್ತ ತಲೆಗೇರಿ ಹತ್ತಲಿಲ್ಲವು. ಕೈಲಾಸವೆಂಬುವದೊಂದು ಹುಲು ಮೊರಡಿಯ ಹಾಗೆ. ನಮ್ಮ ಗುರು ಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನವ ಒಪ್ಪಿಸಿದ ವೈರಾಗ್ಯರೊಬ್ಬರೊಬ್ಬರುಂಟು. ಎನ್ನೊಡೆಯ ಕೂಡಲ ಚನ್ನಸಂಗಯ್ಯನಲ್ಲಿ ಇವರೆಲ್ಲರು ಫಲದಾಸಕರಲ್ಲದೆ, ಸದಾಚಾರ ಸತ್ಕ್ರಿಯೆ ಸಂಪನ್ನರಾದ ಲಿಂಗ ಸದರ್ಥರ ಪೂರ್ವವಯ್ಯಾ.

೧೦. ಶಿವಭಕ್ತನೆ ಕುಲಜನೆಂಬರು ನೋಡಯ್ಯ. ಯುಕ್ತಿವಿಡಿದು ವಿಚಾರಿಸರು ನೋಡಾ! ವ್ಯಾಕುಳ ನಿರಾಕುಳವೆಂಬುವೆರಡು ಕುಳ ನೋಡಯ್ಯಾ! ವ್ಯಾಕುಳವೆ ಭವಿ ನಿರಾಕುಳವೆ ನಿರ್ಭವಿ. ವ್ಯಾಕುಳವೆ ಭವಿ, ನಿರಾಕುಳವೆ ಭಕ್ತ ॥ ಸಾಕ್ಷಿ॥ ಭವಿ ಬೀಜಂ ತಥಾ ಭಕ್ತಿ। ಭಕ್ತಿ ಬೀಜಂ ತಥಾ ಶಿವಃ। ಭವಿ ಬೀಜಂ ತಥಾ ಜ್ಞಾನಂ। ಜ್ಞಾನಂ ತ್ರಿಲೋಕ ದುರ್ಲಭಂ॥ ಎಂಬುದಾಗಿ, ಜ್ಞಾನಿಸಿಗೆ ಕತ್ತಲೆ ಇಲ್ಲ. ಅಜ್ಞಾತಂಗೆ ಹೊಲೆ ಇಲ್ಲ. ಆತನೆ ಕುಲಜ ನೋಡಯ್ಯಾ. ಕುಲದೀಪಕನಾರೆಂದೊಡೆ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಅರಿವು ಆಚಾರ ಸತ್ಕ್ರಿಯೆ ಸಂಪತ್ಸಮೃದ್ಧಿಯನುಳ್ಳ ಶಿವ ಸಂಧಾನಿಗಳ ಕಾಣಿರೋ

೧೧. ತನ್ನನಿಕ್ಕಿ ನಿಧಾನವ ಸಾಧಿಸಲರಿಯದ ಹಂವೆಗಳಿರ್ದು ಫಲವೇನು? ಹಂದಿ ನಾಯಿ ಮಾರ್ಜಾಲ ಕುಕ್ಕುಟ ಮೊದಲಾಗಿ ಹತ್ತೆಂಟು ಹಡೆದ ಫಲವೇನು? ಸಾವನ್ನು ಸತ್ತು ಇರುವಷ್ಟು ಇರ್ದು ಫಲವೇನು? ಆ ಪರಿಯಿಂದ ಕೂಡಿದ ಇಂದ್ರಿಯ ವಿಕಾರದ ನರವಿಂಡುಗಳು ಕೂಡಿರ್ದು ಫಲವೇನು? ತಮ್ಮ ತಮ್ಮ ಕತ್ತಲೆಯ ಕಳೆಯಲರಿ

ಯದೆ, ಇದಿರಿಗೆ ಬುದ್ಧಿಯ ಹೇಳುವ ಉದರ ಪೋಷಕರೆಲ್ಲರು ಹಿರಿಯರಪ್ಪಡೆ, ತನ್ನ ತಪ್ಪಿಸಿ ನಿಧಾನವ ಪಡೆವೆವೆಂಬುವರು ಲೋಗರ ಮಕ್ಕಳ ನಿಕ್ಕಿನಲೆಯ ನೋಡಿಹೆನೆಂಬವರಿಗೆ ಮಹಾಘನವದೆಂತು ಸಾಧ್ಯವಪ್ಪುದೋ ಕೂಡಲಚನ್ನಸಂಗಮದೇವಾ?

ಮುಂದೆ ಪ್ರಾಣಲಿಂಗಿಯ ನಿರ್ದೇಶ. ಇಂತೀ ತಾಮಸ ನಿರಸನವ ಮಾಡಿದ ಪ್ರಾಣಲಿಂಗಿಯ ನಿರ್ದೇಶಸ್ಥಲ. ಆ ಸ್ಥಲದನುಭಾವದ ವಚನ.

೧೨. ತರುಮರಾದಿಗಳಲ್ಲಿ ಹೋಗಿ ಅನಂತ ಕಾಲ ತಪವ ಮಾಡುವದನು ಒಂದು ದಿವಸ ಗುರುಚರಣದ ಸೇವೆಯ ಮಾಡಿದೊಡೆ ಸಾಲದೆ? ಅನಂತ ಕಾಲ ಗುರುಚರಣ ಸೇವೆಯ ಮಾಡುವದನು ಒಂದು ದಿವಸ ಲಿಂಗಪೂಜೆಯ ಮಾಡಿದೊಡೆ ಸಾಲದೆ? ಅನಂತ ಕಾಲ ಲಿಂಗಪೂಜೆಯ ಮಾಡುವದನು ಒಂದು ದಿವಸ ಜಂಗಮ ತೃಪ್ತಿಯ ಮಾಡಿದೊಡೆ ಸಾಲದೆ? ಅನಂತ ಕಾಲ ಜಂಗಮ ತೃಪ್ತಿಯ ಮಾಡುವದನು ಒಂದು ದಿವಸ ನಿಮ್ಮ ಶರಣರ ಕೂಡ ಮಹಾನುಭಾವವ ಮಾಡಿದೊಡೆ ಸಾಲದೆ? ಸಾಕ್ಷಿ॥ ಪೂಜಾ ಕೋಟಿ ಸಮ ಸ್ತೋತ್ರಂ। ಸ್ತೋತ್ರ ಕೋಟಿ ಸಮಂ ಜಪಂ ಜಪಕೋಟಿ ಸಮಂಧ್ಯಾನಂ। ಧ್ಯಾನಕೋಟಿ ಮನೋಲಯಂ॥ ಎಂದುದಾಗಿ ಮನ ಮನ ಬೆರಿಸಿ ಮನ ಸಮಾಧಿಯನೆಯ್ದುವದಕ್ಕೆ ಸರಿಯುಂಟೆ ಕೂಡಲ ಚನ್ನಸಂಗಮದೇವಾ?

೧೩. ಶ್ರೋತ್ರ, ನೇತ್ರ, ಘ್ರಾಣ. ಜಿಹ್ವೆ, ತ್ವಕ್ಕೆಂಬ ಬುದ್ಧೀಂದ್ರಿಯ ಕೂಡಿಕೊಂಡು ಇಚ್ಛೈಸುವ ವಾಯು ನಾಳವಾವುದೆಂದಡೆ, ರೇಚಕ ಪೂರಕ ಕುಂಭಕರೂಪಿಂದೆ ಚೇಷ್ಟಿಸುವದೊಂದು ಪ್ರಾಣವಾಯು. ರಸಂಗಳ ನಿರಸನಂಗಳ ಮಾಡಿ ಮಲ ಮೂತ್ರಂಗಳನದಸ್ಸುವಂ ಮಾಡಿಸುವದೊಂದು ಉದಾನ ವಾಯು. ಸಮಧಾತುಗಳನರಿತು ಅನ್ನಪಾನಾದಿಗಳ ಪರಿಹರಿಸುವದೊಂದು ಸಮಾನ ವಾಯು ರಕ್ತವ್ಯಾಪ್ತಿಯ ಮಾಡಿಸುವದೊಂದು ನಾಗವಾಯು. ಓಕರಿಕೆಯ ಮಾಡಿಸುವದೊಂದು ದೇವದತ್ತ ವಾಯು. ನಾಡಿ ನಾಡಿಯಲಿಕ್ಕೆ ಬುದ್ಧಿಯ ಮಾಡಿಸುವದೊಂದು ಧನಂಜಯ ವಾಯು. ಈ ಷಡ್ವಾಯುಗಳು ಮುಂತಾದ ದಶವಾಯುಗಳ ಸ್ಥಾನವಾವಾವೆಂದೊಡೆ ಗುಹ್ಯದಲ್ಲಿ ಅಪಾನವಾಯು ನಾಭಿಯಲ್ಲಿ ಸಮಾನ ವಾಯು ಹೃದಯದಲ್ಲಿ ಪ್ರಾಣವಾಯು ಕಂಠದಲ್ಲಿ ಉದಾನ ವಾಯು ಮುಖದಲ್ಲಿ ಧನಂಜಯ ವಾಯು ಸಮಸ್ತ ಸಂದುಗಳಲ್ಲಿ ವ್ಯಾನವಾಯು ಈಡಾನಾಳದಲ್ಲಿ ನಾಗ

ವಾಯು ಪಿಂಗಳ ನಾಳದಲ್ಲಿ ಕೂರ್ಮ ವಾಯು, ಸುಷುಮ್ನನಾಳದಲ್ಲಿ ಕ್ರಕರ ವಾಯು, ಹಸ್ತದಲ್ಲಿ ದೇವದತ್ತ ವಾಯು, ಜಿಹ್ವೆಯಲ್ಲಿ ಧನಂಜಯ ವಾಯು, ಇಂತಿವು ದಶವಾಯುಗಳು ಈ ವಾಯು ಪ್ರಾಣಿಯಂ ಕಳೆದು ಲಿಂಗಪ್ರಾಣಿಯಂ ಮಾಡಿದ ಬಳಿಕ ಅದೇ ಲಿಂಗಾಂಗ ಸಂಗ ಸಮರಸೈಕ್ಯವಾದ ಶಿವಯೋಗ ನಿದ್ರಾಮುದ್ರೆ ಎನಿಸುವದಯ್ಯ ನಮ್ಮ ಕೂಡಲ-ಚನ್ನಸಂಗಯ್ಯನಲ್ಲಿ.

೧೪. ಪ್ರಾಣವಾಯು ನೇತ್ರನಾಳ, ಅಪಾನವಾಯು ಜಿಹ್ವಾನಾಳ ವ್ಯಾನ ವಾಯು ಅಧಮನಾಳ, ಉದಾನ ವಾಯು ಕಮಳ ನಾಳ, ಸಮಾನ ವಾಯು ಮುಖನಾಳ, ನಾಗ ವಾಯು ಶ್ರೋತ್ರ ನಾಳ, ಕೂರ್ಮವಾಯು ಕಟಿನಾಳ ಕ್ರಕರವಾಯು ಚಂದ್ರನಾಳ, ದೇವದತ್ತ ವಾಯು ಸೂರ್ಯನಾಳ, ಧನಂಜಯ ವಾಯು ಬ್ರಹ್ಮನಾಳ, ಇಂತಿವು ದಶವಾಯುಗಳಿಹ ಸ್ಥಾನವು. ಪ್ರಾಣವಾಯು ಹರಿದಲ್ಲಿ ಲಿಂಗ ಪ್ರಾಣಮಂ ಮರೆದು, ತನು ಮನ ಧನವೆ ಪ್ರಾಣವಾಗಿಹುದು. ಅಪಾನವಾಯು ಹರಿದಲ್ಲಿ ಲಿಂಗ ಬಯಕೆಯಂ ಬಿಟ್ಟು, ಷಡುರಸಾನ್ನದ ಮೇಲೆ ಬಯಕೆಯಾಗಿಹುದು. ವ್ಯಾನ ವಾಯು ಹರಿದಲ್ಲಿ ಲಿಂಗಧ್ಯಾನಮಂ ಮರೆದು ಉದ್ದೇಶ ಗಮನಿಯಾಗಿಹುದು. ಸಮಾನ ವಾಯು ಹರಿದಲ್ಲಿ ಲಿಂಗ ಜಂಗಮದ ತೀರ್ಥಪ್ರಸಾದಮಂ ಮರೆದು ಕಲ್ಲು ಮರನಾಗಿಹನು. ನಾಗ ವಾಯು ಹರಿದಲ್ಲಿ ಸುಭಾಷಿತ ಗೋಷ್ಠಿಯಂ ಕೇಳಲೊಲ್ಲದೆ, ಕುಭಾಷೆ ಕುಶಬ್ದಂಗಳಂ ಕೇಳಬೇಕೆನುತಿಹನು. ಕೂರ್ಮ ವಾಯು ಹರಿದಲ್ಲಿ ಜ್ಞಾನ ಸಂಭಾಷಣೆಯಂ ಬಿಟ್ಟು, ಅಜ್ಞಾನ ಸಂಭಾಷಣೆಯಂ ಮಾಡಬೇಕೆನುತ್ತಿಹನು. ಕ್ರಕರ ವಾಯು ಹರಿದಲ್ಲಿ ಸುಗುಣವಂ ಬಿಟ್ಟು, ದುರ್ಗುಣದಿಂದ ಕೆಟ್ಟು ಗುರು ಲಿಂಗ ಜಂಗಮಕ್ಕೆ ತ್ರಿವಿಧ ಪದಾರ್ಥವನೊಪ್ಪಿಸಿ ಸಂತೋಷದಿಂದ ಶಿವಧ್ಯಾನವ ಬೆರಸಲೊಲ್ಲದೆ, ಅನರ್ಥವ ಮಾಡಿ ಕೆಡಿಸಿ ಕಳೆದು, ಆಹಾ ಎನ್ನೊಡವೆ ಹಾಳಾಗಿ ಹೋಯಿತ್ತೆಂದು ಮರುಗುತ್ತಿಹನು. ಇಂತೀ ದಶವಾಯುಗಳ ಭೇದವನರಿದು, ನಮ್ಮ ಕೂಡಲಚನ್ನಸಂಗಯ್ಯನಲ್ಲಿ ನಿರ್ಧರಿಸುವದೆ ಯೋಗಸಿದ್ಧಿ.

೧೫. ತನುವ್ಯಸನ, ಮನವ್ಯಸನ, ಧನವ್ಯಸನ, ವಾಹನವ್ಯಸನ, ವಿಶ್ವ ವ್ಯಸನ, ಉತ್ಸಾಹ ವ್ಯಸನ, ಸೇವಕ ವ್ಯಸನ ಇಂತಿವು ಸಪ್ತವ್ಯಸನಂಗಳ ವಿವರ. ತನು ವ್ಯಸನವೆತ್ತಿದಲ್ಲಿ ವಸ್ತ್ರಾಭರಣ ವೀಳ್ಯ ಅನುಲೇ

ಸನಾದಿಗಳಂ ಬಯಸುತ್ತಿಹನು. ಮನ ವ್ಯಸನವೆತ್ತಿದಲ್ಲಿ ಹುಸಿ ಕಳವು ಪರದಾರವಂ ಬಯಸುತ್ತಿಹನು. ಧನ ವ್ಯಸನವೆತ್ತಿದಲ್ಲಿ ಧನ ಧಾನ್ಯವಂ ಬಯಸುವನು. ವಾಹನ ವ್ಯಸನವೆತ್ತಿದಲ್ಲಿ ಆನೆ ಕುದುರೆ ವಾಹನಂಗಳ ಬಯಸುತ್ತಿಹನು. ವಿಶ್ವ ವ್ಯಸನವೆತ್ತಿದಲ್ಲಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಚತುರ್ವಿಧ ಕರ್ತವ್ಯವಂ ಬಯಸುತ್ತಿಹನು. ಉತ್ಸವ ವ್ಯಸನವೆತ್ತಿದಲ್ಲಿ ಪುತ್ರ ಮಿತ್ರ ಕಳತ್ರಾದಿಗಳಂ ಬಯಸುತ್ತಿಹನು. ಸೇವಕ ವ್ಯಸನವೆತ್ತಿದಲ್ಲಿ ಗಳಿಸಲಾರೆ, ಕೊಡಲಾರೆ, ಕೊಳಲಾರೆನೆನುತಿಹನು. ಇಂತೀ ಸಪ್ತವ್ಯಸನಂಗಳಂ ಬಿಟ್ಟು ಲಿಂಗ ವ್ಯಸನಿಯಾಗಿರಬಲ್ಲಡೆ ನಮ್ಮ ಕೂಡಲ ಚನ್ನಸಂಗಮದೇವನಲ್ಲಿ ಆತನೆ ಪರಮ ಶಿವಯೋಗಾಭ್ಯಾಸಿಯಾದ ಪ್ರಾಣಲಿಂಗ ಸಂಬಂಧಿ ಎನಿಸುವನು.

೧೬. ತನುಗುಣಗ್ರಾಹಕ ನಾಗದಿರಬೇಕು. ಮನಗುಣಗ್ರಾಹಕನಾಗದಿರಬೇಕು. ಧನಗುಣಗ್ರಾಹಕನಾಗದಿರಬೇಕು. ಈ ತ್ರಿವಿಧಗುಣಗ್ರಾಹಕನಾಗದಿರಬೇಕು. ಆಗದಿರ್ದೊಡೆ ಲಿಂಗಗ್ರಾಹಕನಾಗಿರಬೇಕಯ್ಯ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ.

೧೭. ಅಂಗದ ಮೇಲಣ ಲಿಂಗ ಹಿಂಗಿತ್ತೆಂಬರು. ಅಂಗ ಲಿಂಗ ಸಂಬಂಧಿಯಾದಲ್ಲಿ ಫಲವೇನು? ಮನ ಲಿಂಗ ಸಂಬಂಧಿಯಾಗದನ್ನಕ್ಕರ ಮನದಿಂದಲೇನು ಫಲವಿಲ್ಲವಯ್ಯಾ ನಮ್ಮ ಕೂಡಲಚನ್ನಸಂಗಯ್ಯನಲ್ಲಿ.

೧೮, ಅಂಗ ಸಂಗಿಯಾದವಂಗೆ, ಲಿಂಗಸಂಗವಿಲ್ಲ. ಲಿಂಗ ಸಂಗಿಯಾದವಂಗೆ ಅಂಗಸಂಗವಿಲ್ಲ ಅಂಗಸಂಗವೆಂಬುದೆ ಅನಾಚಾರ, ಲಿಂಗ ಸಂಗವೆಂಬುದೆ ಸದಾಚಾರ. ಇದು ಕಾರಣವಾಗಿ ಅಂಗಸಂಗವಂ ಬಿಟ್ಟು, ಲಿಂಗಸಂಗವಾಗಿರಬೇಕು ನಮ್ಮ ಕೂಡಲಚನ್ನಸಂಗಯ್ಯನಲ್ಲಿ.

೧೯. ಭುವನ ಹದಿನಾಲ್ಕರಲ್ಲಿ ಮನ ವೇದ್ಯವಾದುದನಾರು ಬಲ್ಲರೈಯ್ಯಾ? ದೂರದೂರಾಗಿ ಮನ್ನಿಸುವರು. ದೂರದೂರಾಗಿ ಸುಭಾಷಿತವಂ ಮಾಡುವರು. ದೂರವಲ್ಲ, ಸಮೀಪವಲ್ಲ. ದೂರಸ್ತು ಸಮೀಪಸ್ತು ಸಮೀಪಸ್ತು ದೂರಸ್ತನಾತ್। ಎಂದುದಾಗಿ, ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಮನವೇದ್ಯವಾಗಬೇಕು ಕಾಣಿರೋ.

೨೦. ಮನದ ಮತ್ಸರವ ಕಳೆದು, ಮನದ ಕೊನೆಯ ಮೊನೆಯ ಮೇಲೆ, ಲಿಂಗವ ಕುಳ್ಳಿರಿಸಬೇಕು. ತನುಗುಣವ ಕಳೆದು ಪ್ರಸಾದ

ಕಾಯುವ ಮಾಡಬೇಕು. ಧನಗುಣವ ಕಳೆದು ಮುಮುಕ್ಷುವೆನಿಸಬೇಕು. ಈ ತ್ರಿವಿಧ ಗುಣಂಗಳ ಕಳೆದು, ತ್ರಿವಿಧ ದಾಸೋಹಿಯಾಗಿರಬೇಕಯ್ಯಾ ನಮ್ಮ ಕೂಡಲಚನ್ನಸಂಗಮದೇವರಲ್ಲಿ.

೨೧. ಪ್ರಣವ ಪ್ರಣವುವೆಂದೊಡೇನೋ? ಆ ಪ್ರಣವುದ ಭೇದ ಬಲ್ಲವರಾರೋ? ಸಾಕ್ಷಿ॥ ಮೂಲಮಂತ್ರ ಸ್ವರೂಪಾಯ। ಮೂಲಮಂತ್ರ ಸ್ವರೂಪಿಣೆ। ಮೂಲಪ್ರಕೃತಿ ಸಾಜ್ಞಯೆ। ಮೂಲಸ್ತಂಭಾಯ ವೈನಮಃ ಎಂದುದಾಗಿ, ಪ್ರಣವುವೆಂಬುದು ಪ್ರಾಣವಾಯು. ನೆಲೆಯನರಿದು ಬಿಡಬಲ್ಲಡೆ ಪ್ರಣವ. ಸಾಕಲ್ಯ ಬ್ರಹ್ಮ ಮೂಲಾಂಕುರದ ಶೃತಿಯನರಿಯಬಲ್ಲಡೆ, ಪ್ರಣವ. ಐವತ್ತೆರಡು ಅಕ್ಷರದಲ್ಲಿ ಭೇದಭ್ರಮೆಯ ತಿಳಿದು, ಓದಬಲ್ಲಡೆ ಪ್ರಣವ. ನಾದ ಬಿಂದು ಕಲಾತೀತನಾಗಬಲ್ಲಡೆ, ಪ್ರಣವ. ಇದು ಕಾರಣ ಕೂಡಲಚನ್ನಸಂಗಯ್ಯ ನಿಮ್ಮ ಶರಣರು ಸಹಸ್ರವೇದಿಗಳಾದ ಕಾರಣ ಪ್ರಣವ ಪ್ರತಿಷ್ಠಾಚಾರ್ಯರು. ಅವರಿಗೆ ಮಿಗೆ ಮಿಗೆ ನಮೋ ನಮೋ ಎಂಬೆನು.

---

ಮುಂದೆ ಪ್ರಾಣಲಿಂಗಿಯ ಆಚಾರಲಿಂಗಸ್ಥಲ. ಇಂತಪ್ಪ ಪ್ರಾಣಲಿಂಗಿಯ ಸ್ಥಲವ ನಂಗಂಗೊಂಡಿಪ್ಪ ಪ್ರಾಣಲಿಂಗಿಯ ಆಚಾರ ಲಿಂಗಸ್ಥಲ ಆ ಸ್ಥಲದನುಭಾವದ ವಚನ.

## ಪ್ರಾಣಲಿಂಗಿಯ ಆಚಾರಲಿಂಗ.

೧. ಆಜ್ಞೆ ಸಹಿತ ಗುರು ಆಜ್ಞೆ ಸಹಿತ ಲಿಂಗ ಆಜ್ಞೆ ಸಹಿತ ಜಂಗಮ ಆಜ್ಞೆ ಸಹಿತ ಪಾದೋದಕ ಪ್ರಸಾಧ ಆಜ್ಞೆ ಸಹಿತ ಆರುವತ್ತು ನಾಲ್ಕು ಶೀಲ ಆಜ್ಞೆ ಸಹಿತ ಐವತ್ತಾರು ವ್ರತ ಆಜ್ಞೆ ಸಹಿತ ಮೂವತ್ತೆರಡು ನೇಮ. ಇದು ಕಾರಣವಾಗಿ ಆಜ್ಞೆಯ ಮೀರಿ ನಡೆಯಲಾಗದು. ಆಚಾರ ಸಹಿತ ಲಿಂಗಭಕ್ತನಾದೊಡೆ ಅನ್ಯ ದೈವವೆಂಬುವುದು ತನ್ನಲ್ಲಿಯೆ ಅರಿಯಬೇಕು. ಇದಿರಲಿ. ಭವಿಯ ಕೊಂದ ಕಾರಣವೇನಯ್ಯ? ಅರಿಷಡ್ವರ್ಗ ಮಲತ್ರಯಂಗಳೆಂಬ ಭವಿಯನರಿಯಬೇಕು. ಇವನರಿದು ಸತ್ತು ಚಿತ್ತಾನಂದವೆಂಬ ಶ್ರೀಗುರುವಿನ ಕೈಯ್ಯಿಂದ ಅವರ ಭಕ್ತರ ಮಾಡಿಸಿ, ಶಿಕ್ಷೆ ದೀಕ್ಷೆ ಸ್ವಾನುಭಾವದಿಂದವನೆ ಅರುಹಿಸಿ ತ್ರಿಕರಣವೆಂಬ

ವಕ್ಕೆ ಸಂಜೀವನವೆಂಬ ಗುಟಿಕೆಯನಿಕ್ಕಿ ಅವನೆ ಭಕ್ತರ ಮಾಡಿ, ಶಿವ ಲಿಂಗಾರ್ಚನೆಯ ಮಾಡುವಾತನಿಗೆ ಶೀಲವಂತನೆಂಬೆನಯ್ಯ. ಅರಿ ಷಡ್ವರ್ಗ ಮಲತ್ರಯಂಗಳಿಂದೆ ವಿತತನಾಗಿ ವಿಷವಂ ಬಲಿದು ಅವು ಹೇಗೆ ಪ್ರಯೋಗಿಸುತ್ತಿಹವು ಹಾಗೆ ಅವರಿಚ್ಚೆಗೆ ತಾನವರಂತೆ ಪ್ರಯೋಗಿಸದೆ ಪರಿಣಾಮದಿಂದ ಬಂದ ಬಂದ ಪದಾರ್ಥವನು ಲಿಂಗಸ್ಪರ್ಶಿತವ ಮಾಡಿಕೊಂಬಾತನಿಗೆ ಲಿಂಗಸುಯಿಧಾಸಿ ಎನಿಸುವನು. ಆತ ಭವಿಪಾಕವ ಬಿಟ್ಟಾತನು. ॥ಸಾಕ್ಷಿ॥ ಅರ್ಪಣಾಂ ಧ್ವಯೋರ್ಲಿಂಗಂಚ । ಪರಪಾಕಂ ವಿವರ್ಜಯೇತ್। ವ್ಯಾಪಾರಂ ಸಕಲಂ ತ್ಯಕ್ತ್ವಾ । ಸ ರುದ್ರೋ ನಾತ್ರ ಸಂಶಯಃ ॥ ಎಂದುದಾಗಿ ಇಂತಪ್ಪಾತನಿಗೈಕ್ಯನು. ಇನ್ನು ಅನ್ಯದೈವವೆಂಬುವವಾವಾವೆಂದಡೆ ಪ್ರಾಣೋಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕ್ರಕರ ದೇವದತ್ತ, ಧನಂಜಯ ದಶವಾಯುಗಳುಂಟಾಗಿ ತನ್ನ ತಾನರಿವ ಪುರುಷಂಗೆ ಇವೆ ಅನ್ಯದೈವ ಕಾಣಿರೋ. ॥ಸಾಕ್ಷಿ॥ ಭೂತ ಲಿಂಗಮಿತಿ ಜ್ಞೇಯಂ । ಪ್ರೇತ ಲಿಂಗಶಿವಾರ್ಚಕಂ । ಭೂತಪ್ರೇತಪಿಶಾಚಂ ಚ । ದೂರಿತಂ ಪರಿವರ್ಜಯೇತ್ ॥ ಎಂದುದಾಗಿ ಇಂತೀಭವಿ ಭಕ್ತರೆಂಬ ಭೇದವನರಿಯದೆ ಇದಿರಿಂಗೆ ಅನ್ಯದೈವ ಭವಿಯನುಂಟು ಮಾಡಿಕೊಂಬ ದುಶ್ಶೀಲವಂತರೆಲ್ಲ ಅವರಂತಿರಲಿ. ತಮ್ಮ ತಮ್ಮ ಮನದ ತಮಂಧವ ಕಳೆದು ತಮ್ಮೊಳಗಿರ್ದ ಭವಿಗಳ ಭಕ್ತರ ಮಾಡಿ ತಮ್ಮಲ್ಲಿರುವ ಅಷ್ಟಮದಂಗಳು ಸಪ್ತ ವ್ಯಸನಂಗಳು ಅರಿಷಡ್ವರ್ಗಂಗಳು ಪಂಚಭೂತಂಗಳು ಚತುಃಕರಣಂಗಳು, ತ್ರಿಕರಣಂಗಳು ದ್ವಿಗುಣಂಗಳು ಅನ್ಯ ದೈವವ ಸಾಧ್ಯದಲ್ಲಿ ಶಿವ ಸಂಸ್ಕಾರದಿಂದೆ ಲಿಂಗಕರಣಂಗಳೆಂದೆನಿಸಿ ನಿತ್ಯ ಲಿಂಗಾರ್ಚನೆಯ ಮಾಡಬಲ್ಲಾತನೆ ಶೀಲವಂತನಯ್ಯಾ. ಆತನ ಶ್ರೀಪಾದವನು ಹಸ್ತವನೆತ್ತಿ ಹೊಗಳುತ್ತಿರ್ದವು ವೇದಂಗಳು ॥ಸಾಕ್ಷಿ॥ ಓಂ ಅಯಂ ಮೇ ಹಸ್ತೋ ಭಗವಾನ್ । ಅಯಂ ಮೆ ಭಗವತ್ತರಂ । ಅಯಂ ಮೆ, ವಿಶ್ವಭೇಷಜಂ ಅಯಂ ಮೇ ತತ್ತ್ವಯಂ ಪಿತಾ॥ ಇಂತಪ್ಪ ಲಿಂಗಾರ್ಚನೆಯ ಮಾಡಬಲ್ಲಾತನೆ ಸಂಬಂಧಿ ಎನಿಸಿಕೊಳಬಲ್ಲನಯ್ಯ ಕೂಡಲ ಚನ್ನ ಸಂಗಮದೇವಾ. ನಿಮ್ಮ ಶರಣ ಸಂಗನಬಸವಣ್ಣಂಗೆ ಸುಲಭವಾಯಿತ್ತು.

೩. ಹೊನ್ನು ಭಕ್ತನೆಂಬೆನೆ? ಹೊನ್ನಿನೊಳಗಣ ಮುದ್ರೆ ಭವಿ. ಹೆಣ್ಣು ಭಕ್ತನೆಂಬೆನೆ? ಹೆಣ್ಣಿನೊಳಗಣ ವಿರಹ ಭವಿ. ಮಣ್ಣು ಭಕ್ತನೆಂ

ಬೆನೆ? ಮಣ್ಣಿನೊಳಗಣ ಬೆಳಸು ಭವಿ. ಈ ತ್ರಿವಿಧ ಭವಿತನವ ಕಳೆಯ ಬಲ್ಲಡೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆತನೆ ಅಚ್ಚಶೀಲವಂತ ನೆಂಬೆನು.

೩. ತನ್ನ ಆಚಾರಕ್ಕೋಸ್ಕರ ಅನ್ಯರಿಗೆ ಲಿಂಗ ಸಂಬಂಧವ ಮಾಡುವರಯ್ಯಾ. ಹೊಂದಿತಲ್ಲ ಗುರುವಚನಕ್ಕೆ ಭಂಗ. ಒಂದು ಕಾಲದಲ್ಲಿ ಲಿಂಗಾರ್ಚನೆಯು ತಡೆದೊಡೆ ರೌರವ ನರಕವೆಂದುದು ಗುರು ವಚನ. ನಮ್ಮ ಕೂಡಲಚನ್ನ ಸಂಗಯ್ಯನಲ್ಲಿ ಇದೇ ಪ್ರತಿಜ್ಞೆಯಯ್ಯಾ.

---

ಮುಂದೆ ಪ್ರಾಣಲಿಂಗಿಯ ಗುರುಲಿಂಗಸ್ಥಲ. ಇಂತೀ ಆಚಾರಲಿಂಗದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯ ಗುರುಲಿಂಗಸ್ಥಲ ಆ ಸ್ಥಲದನುಭಾವದ ವಚನ.

## ಪ್ರಾಣಲಿಂಗಿಯ ಗುರುಲಿಂಗಸ್ಥಲ.

೧. ಆಣವಮಲ, ಮಾಯಾಮಲ, ಕಾರ್ಮಿಕ ಮಲವೆಂಬ ಮಲತ್ರಯಂಗಳಂ ಕಳೆದು, ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ ದೀಕ್ಷೆ, ವಿಭೂತಿಪಟ್ಟ ದೀಕ್ಷೆ, ಕಳಶಾಭಿಷೇಕದೀಕ್ಷೆ, ಲಿಂಗಾಯತ ದೀಕ್ಷೆ, ಲಿಂಗಸ್ವಾಯತ ದೀಕ್ಷೆ ಈ ಏಳು ಕಾಯಕ್ಕುಪದೇಶವ ಮಾಡುವುದು ಸಮಯ ದೀಕ್ಷೆ ನಿಃಸಂಸಾರ ದೀಕ್ಷೆ ನಿರ್ವಾಣ ದೀಕ್ಷೆ ತತ್ವದೀಕ್ಷೆ ಅಧ್ಯಾತ್ಮಿಕದೀಕ್ಷೆ ಅನುಗ್ರಹ ದೀಕ್ಷೆ ಸತ್ಯಶುದ್ಧ ದೀಕ್ಷೆ ಈ ಏಳು ಪ್ರಾಣಕ್ಕುಪದೇಶವ ಮಾಡುವುದು. ಏಕಾಗ್ರ ಚಿತ್ತದೀಕ್ಷೆ ದೃಢವ್ರತ ದೀಕ್ಷೆ ಪಂಚೇಂದ್ರಿಯಾರ್ಪಿತ ದೀಕ್ಷೆ ಅಹಿಂಸಾ ದೀಕ್ಷೆ ಮನೋಲಯ ದೀಕ್ಷೆ ಲಿಂಗ ನಿಜದೀಕ್ಷೆ ಸದ್ಯೋನ್ಮುಕ್ತಿದೀಕ್ಷೆ ಈ ಏಳು ಮನಕ್ಕುಪದೇಶವದು. ಈ ಪ್ರಕಾರದ ಮೂರೇಳ ಇಪ್ಪತ್ತೊಂದು ತೆರದುಪದೇಶವು ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಸಹಜದೀಕ್ಷೆ ಎನಿಸುವದು.

೨. ತಾನೆ ಗುರುವೆಂದು ಮುಂದಣವರಿಗೆ ಅನುಗ್ರಹವ ಮಾಡುವರಯ್ಯಾ! ತಾನೆ ಗುರುವೆಂತಾದರೂ ಎಲ್ಲರಿಗೆ ಒಂದೇ ದೇಹ. ವಿಷಯೇಂದ್ರಿಯಭೂತಂಗಳೊಂದೆ ॥ಸಾಕ್ಷಿ॥ ಸಪ್ತಧಾತುಸಮಂಪಿಂಡಂ। ಸಮಯೋನಿಸಮುದ್ಭವಂ ಆತ್ಮಜೀವ ಸಮಾನಂ ಚ ವರ್ಣಾನಾಂ ಕಿಂ ಪ್ರಯೋಜನಂ ||

ಎಂದುದಾಗಿ, ಗುರುವೆಂಬುದು ಪರುಷವು. ಆಪರುಷ ಮುಟ್ಟಲೊಡನೆ ಲೋಹ ಸುವರ್ಣವಹುದಲ್ಲದೆ ಪರುಷವಾಗಲರಿಯದು ನೋಡಾ. ಅದು ಗುರು ಸ್ಥಲವಲ್ಲ. ಮಾಣು. ಗುರುಸ್ಥಲವೆಂಬುದು ತಾನು ಸ್ವಯಂಜ್ಯೋತಿಪ್ರಕಾಶವು. ಅಂತಪ್ಪ ಸ್ವಯಂಜ್ಯೋತಿಪ್ರಕಾಶವಂ ತಂದು, ಉರಜ್ಯೋತಿಯ ಹತ್ತಿಸಿದೊಡೆ, ಆ ಜ್ಯೋತಿ ತನ್ನಂತೆ ಮಾಡಿತ್ತು. ಅದಾವ ಜ್ಯೋತಿ ಎಂದೊಡೆ, ಅದು ಪಶ್ಚಿಮ ಜ್ಯೋತಿ. ಆ ಜ್ಯೋತಿಯ ಬೆಳಗಿನಿಂದ ಪ್ರಾಣ-ಲಿಂಗವ ಕಂಡು ಸುಖಿಯಾದೆನು. ನಾಲ್ಕು ವೇದದರ್ಥ ಅಜಪ ಗಾಯತ್ರಿಯರ್ಥ ಪ್ರಾಣಾಯಾಮದಿಂದ ಪ್ರಾಣಲಿಂಗ ಸಂಬಂಧವ ಮಾಡುವುದು. ಇಷ್ಟರಲ್ಲಿ ತಾನು ಸ್ವತಂತ್ರನಾದೊಡೆ, ಇಷ್ಟಲಿಂಗವನಾರಿಗಾದೊಡೆಯು ಕೊಡಬಹುದು. ಅಲ್ಲದಿದ್ದೊಡೆ ಅಂಧಕನ ಕೈಯ್ಯ ಅಂಧಕನು ಹಿಡಿದಂತೆ ಕಾಣಾ ಕೂಡಲಚನ್ನಸಂಗಮದೇವಾ.

---

ಮುಂದೆ ಪ್ರಾಣಲಿಂಗಿಯ ಶಿವಲಿಂಗಸ್ಥಲ. ಇಂತಪ್ಪ ಪ್ರಾಣಲಿಂಗಿಯ ಗುರುಲಿಂಗಸ್ಥಲದಲ್ಲಿ ಸಮರಸವನೈದಿದ ಶಿವಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಾಣಲಿಂಗಿಯ ಶಿವಲಿಂಗಸ್ಥಲ

೧. ಉರಸ್ಥಲದಲ್ಲಿ ಲಿಂಗವ ಧರಿಸಿದ ಬಳಿಕ, ಮನದ ಕೊನೆಯ ಮೊನೆಯಲ್ಲಿ ಲಿಂಗವನಗಲದಂತಿರಬೇಕು. ಉರು ಗುರುಸ್ಥಲ, ಉರು ಲಿಂಗಸ್ಥಲ, ಉರು ಜಂಗಮಸ್ಥಲ, ಉರುಪ್ರಸಾದಸ್ಥಲ, ಉರು ಅನುಭಾವ ಸ್ಥಲವೆಂದರಿದ ಬಳಿಕ, ಅನ್ಯವಿಶ್ರಂಗಳು ಹೊದ್ದಬಾರದು. ತಟ್ಟು ಮುಟ್ಟು ತಾಗು ನಿರೋಧಂಗಳಿಗೆ ಗುರಿಯಾಗಲಾಗದು. ಇಂದ್ರಿಯಂಗಳ ಕೂಡಿ, ಮನವ ತಾಪಂಗೊಳಿಸದೆ ಉರುಲಿಂಗ ಸ್ವಾಯತವಾಗಿರ್ದುದು ಪ್ರಾಣಲಿಂಗಿಯ ಪ್ರಾಣಲಿಂಗದ ಚಿಹ್ನ ನಮ್ಮ ಕೂಡಲಚನ್ನಸಂಗಯ್ಯನಲ್ಲಿ.

೨. ಕರಸ್ಥಲದಲ್ಲಿ ಲಿಂಗವ ಧರಿಸಿದ ಬಳಿಕ, ಅನಿಮಿಷ ದೃಷ್ಟಿಯ ಆ ಬಿಂದುವಾಗಿರಬೇಕು. ತನ್ನ ತಾನೆ ಅನುಮಿಷನಾಗಿರಬೇಕು. ಹೀಗೆ ಲಿಂಗದಲ್ಲಿ ಅನುಮಿಷನಾಗಿರಬೇಕು. ಹಾಗೆ ಜಂಗಮದಲ್ಲಿ ನಿಲುಕಡೆಯಾಗಿರಬೇಕು. ಪ್ರಸಾದದಲ್ಲಿ ಪರಿಪೂರ್ಣನಾಗಿರಬೇಕು. ಲಿಂಗವ ಮು

ಟ್ಟಿದ ಕೈ ಮೀಸಲಾಗಿ ಹಿರಣ್ಯಕ್ಕೆ ಕೈಯ್ಯಾನದಿರಬೇಕು. ಹೀಗೆ ತನ್ನ ನಿಲುಕಡೆಯು ತಾನರಿದಿರಬೇಕು. ಇದು ಕಾರಣ ನಮ್ಮ ಕೂಡಲಚನ್ನ ಸಂಗಯ್ಯನಲ್ಲಿ ಕರಸ್ಥಲದನುವನರಿವಡೆ ಇದೇ ಕ್ರಮವು.

೩. ಅಂಗದ ಮೇಲೆ ಲಿಂಗಸಂಬಂಧಿಯಾದ ಬಳಿಕ, ಸರ್ವಾಂಗದಲ್ಲಿ ತೋರುವ ವಿಕಾರವಳಿದಿರಬೇಕು. ಆ ಅಂಗವ ಸೋಂಕಿದ ಲಿಂಗಕ್ಕೆ ಸೆಜ್ಜೆ ಶಿವದಾರವಾವುದೆಂದೊಡೆ, ಅಂಗವೆ ಸಜ್ಜೆ, ಆಚಾರವೆ ಶಿವದಾರ, ತ್ರಿಕರಣ ಶುದ್ಧವಾದುದೆ ಕುಳಿಕೆ, ಈ ತ್ರಿವಿಧವ ಗುಣವನರಿಯಬೇಕು. ಈ ತ್ರಿವಿಧದಲ್ಲಿ ಸಂಪನ್ನನಾಗಿರಬೇಕು. ಈ ತ್ರಿವಿಧವ ಮುಟ್ಟಿ ಲಿಂಗಾರ್ಚನೆಯ ಮಾಡಬೇಕು. ಅಂಗ ಲಿಂಗಸಂಬಂಧಕ್ಕೆ ಇದೇ ಕ್ರಮವಯ್ಯಾ ಕೂಡಲಚನ್ನಸಂಗಮದೇವಾ.

೪. ಕಕ್ಷೆಯಲ್ಲಿ ಲಿಂಗವ ಧರಿಸಿದ ಬಳಿಕ, ಅನ್ಯ ಕಾಂಕ್ಷೆ ಇಲ್ಲದಿರಬೇಕು. ಮಾಯದ ಮುಸುಕಡೆಯಾಟ ನಿಂದಿರಬೇಕು. ಸಂಸಾರವ ಹೊದ್ದದೆ ಮನವು ಮಹಸ್ಥಲವನಿಂಬುಗೊಂಡಿರಬೇಕು. ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಏಕಾರ್ಥವಾದುದೆ ಕಕ್ಷೆಯಲ್ಲಿ ಲಿಂಗವ ಧರಿಸುವ ಕ್ರಮ.

೫. ಶ್ರೀಗುರು ಕಾರುಣ್ಯ ಸಂಪಾದನೆಯಾದಲ್ಲಿ ಮಾರ್ಗಕ್ರಿಯೆ ಮೀರಿದ ಕ್ರಿಯೆ ಸಂಪಾದನೆಯಾದಲ್ಲಿ ಸದ್ಭಕ್ತ ಸಮರಸಭಕ್ತಿ ಸಂಪಾದನೆಯಾದಲ್ಲಿ ಭಾವ ನಿರ್ಭಾವ ನಿಷ್ಠೆಯಾದಲ್ಲಿ ಅರ್ಪಿತಾಯತ ನಿಷ್ಠೆಯಾದಲ್ಲಿ ಆಗ ಏಕಾರ್ಥವಾದಾಗಳೇ ಮಹಸ್ಥಲವೆನಿಸುವದು. ಆ ಸ್ಥಲವನೆ ಅತ್ಯಂತ ಪ್ರೀತಿಯಿಂದೆ ಮಹಾವಿಶೇಷವೆಂದು, ಗಳದಲ್ಲಿ ಧರಿಸುವಡೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಗಳದಲ್ಲಿ ಧರಿಸುವ ಕ್ರಮ.

೬. ಅಮಳೋಕ್ಯದಲ್ಲಿ ಲಿಂಗವ ಧರಿಸುವಡೆ, ಅನ್ನಪಾನಾದಿಗಳ ಹಂಗಳಿದಿರಬೇಕು. ಅಹಂಕಾರ ಮಮಕಾರಂಗಳನಳಿದಿರಬೇಕು. ಅನುಭಾವದನುವನರಿದಿರಬೇಕು. ಕಾಮನ ಕಂಗಳಳಿದಿರಬೇಕು. ಶಬ್ದ ನಿಃಶಬ್ದವಾಗಿರಬೇಕು. ಮಹದಾಶ್ರಯದಲ್ಲಿ ಮನ ಲಿಯ್ಯವಾಗಿರಬೇಕು. ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಪರಿಣಾಮಿಸಬೇಕು.

೭. ಉತ್ತಮಾಂಗದಲ್ಲಿ ಲಿಂಗವ ಧರಿಸಿದ ಬಳಿಕ, ಅನ್ಯರಿಗೆ ತಲೆವಾಗದಿರಬೇಕು. ಮಾನವರ ಸೇವೆಗೆಯ್ದು ಬೇಡಲಾಗದು. ಹಸಿವು ತೃಷೆ ವಿಷಯ ವ್ಯಸನಂಗಳು ಲಿಂಗದಲ್ಲಿ ನಿಕ್ಷೇಪವಾಗಬೇಕು. ಜಾಗ್ರ

ತ್‌ಸ್ವಪ್ನ ಸುಷುಪ್ತಿಗಳಲ್ಲಿ ಲಿಂಗ ನಿಲುಕಡೆಯಲ್ಲಿ ತೆರಹು ಮರೆಹಿಲ್ಲದಿರಬೇಕು. ಉತ್ತಮಾಂಗದಲ್ಲಿ ಲಿಂಗವ ಧರಿಸಿದ ಮಹಾತ್ಮಂಗೆ ಇದೆ ಮುಕ್ತಿಪಥವಯ್ಯಾ ಕೂಡಲಚನ್ನಸಂಗಮದೇವಾ.

೮ ಕಾಯಾನುಗ್ರಹ ಭಾವಿಗಳು ಕಾಯದಲ್ಲಿಯೇ ಮುಕ್ತರು. ಜೀವಾನುಗ್ರಹ ಭಾವಿಗಳು ಜೀವದಲ್ಲಿಯೇ ಮುಕ್ತರು. ಪ್ರಾಣಾನುಗ್ರಹ ಭಾವಿಗಳು ಪ್ರಾಣದಲ್ಲಿಯೇ ಮುಕ್ತರು. ಪವನಾನುಗ್ರಹ ಭಾವಿಗಳು ಪವನದಲ್ಲಿಯೆ ಮುಕ್ತರು. ಇಂತಿವರೆಲ್ಲರು ಲಿಂಗಾನುಭವಿಗಳಿಗೆಂತು ಸರಿ ಎಂಬೆನಯ್ಯಾ? ಆದಿ ಅನಾದಿಯು ಸಂದಳಿಯಿತ್ತು. ಪ್ರಣವ ಪ್ರಜ್ವಲಿತವಾದ ಕಾಲ ಕರ್ಮವಳಿದು, ಪ್ರಾಣಲಿಂಗವಾಯಿತ್ತು ನೋಡಾ ಕೂಡಲಚನ್ನಸಂಗಮದೇವಾ.

೯. ಊರಿಗೆ ಒಡೆದ ಕೋಡನಳುಕುವದೆ? ಮಾರುತ ಹಿಡಿವನೆ ಹಾವ ನೋಡಿ ಹರಿವ ಕರಿಗಳು ಅರಿವವಡಿಗಡಿಗೆ ನೋಡಿರೆ. ಸರ ಹರಿದ ಮಣಿ ಒಂದೇ ಹರಳಾದುದು ನೋಡಿರೆ. ಬೆರಸಿ ಬೇರಿಲ್ಲದಿಹ ನಮ್ಮ ಕೂಡಲ ಚನ್ನಸಂಗಯ್ಯನ ನೋಡಿರೆ.

೧೦. ಕಳೆ ಏರಿದ ಲಿಂಗ ತೆರಹನರಿಸು, ಕಳೆ ಕಳೆಯುದ ವಳಯದ ಸೀಮೆಯಿಂದತ್ತಲು, ವೇಧಿಸಿದ ಮುಗ್ಧೆಯು ನೋಡಾ! ಆಕಾರ ನಿರಾಕಾರದ ಪುಣ್ಯ ಪಾಪದ ಅರುಹಿನ ಮರಹಿನ ಅಷ್ಟದಳದ ಕಮಲದಲ್ಲಿ ಮಧುಪಾನವಾಗವೆ, ಕೂಷಲ ಚನ್ನಸಂಗಯ್ಯನೆಂಬ ಮಹಾಲಿಂಗವ ಮನದಲ್ಲಿ ಆಳವಡಿಸಿದ ಮುಗ್ಧೆಯು ನೋಡಾ.

೧೧. ಪೃಥ್ವಿ ಸಲಿಲ ಪಾವಕ ಪವನ ಅಂಬರ ರವಿ ಶಕ್ತಿ ಆತ್ಮನೆಂಬಷ್ಟ ತನು ಭೇದಿಸಿ, ಶ್ರೋತ್ರ ನೇತ್ರ ಘ್ರಾಣ, ಜಿಹ್ವೆ ತ್ವಕ್ಕುಗಳೆಂಬ ಪಂಚೇಂದ್ರಿಯವನರಿದು, ವಾಕ್ಕು ಪಾಣಿ, ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯಂಗಳ ತೊರೆದು, ಪ್ರಾಣೋಪಾನ, ವ್ಯಾನ ಉದಾನ ಸಮಾನ, ನಾಗ, ಕೂರ್ಮ, ಕ್ರಕರ, ದೇವದತ್ತ, ಧನಂಜಯವೆಂಬ ದಶವಾಯುಗಳ ಸಂಚವ ಮುರಿದು ಮನ ಬುದ್ಧಿ ಚಿತ್ತ ಅಹಂಕಾರವೆಂಬ ಚತುಃಕರಣಂಗಳನೊಂದು ಮಾಡಿ, ಉತ್ಪತ್ತಿ ಸ್ಥಿತಿ ಲಯವೆಂಬ ತ್ರಿಕಾಲ ಮೂಲಾದಿಗಳ ಸುಟ್ಟು, ಜ್ಞಾನವನೆ ಬೆಳಸಿ, ಧ್ಯಾನವ ನೆಲೆಗೊಳಿಸಿ ಚಿತ್ತ ಸುಯಿಧಾನವಾಗಿ ನಿಜ ಸಂಧಾನದ ಸಮಾಧಿಯಲ್ಲಿ ನಿಂದು ಲಿಂಗಾರ್ಚನೆಯಂ ಮಾಡುವ ಶಿವಶರಣರ ಪಾದವ ತೋರಯ್ಯಾ ॥ಸಾಕ್ಷಿ॥

ವ್ಯಾಪಾರಂ ಸಕಲಂ ತ್ಯಕ್ತ್ವಾ ಸ ರುದ್ರೋ ರುದ್ರಮರ್ಚಯೇತ್ ॥ ಎಂಬ ಶ್ರುತಿ ನಿಮ್ಮ ಶರಣರಿಗೆ ಸಂದಿತ್ತು ಕೂಡಲ ಚನ್ನಸಂಗಮದೇವಾ.

೧೨. ಹೃದಯ ಕಮಲದಲ್ಲಿರ್ಪ ದೇವನ ದೇಹಾರವ ಮಾಡಲರಿಯರು ನೋಡಾ. ದೇಹ ನಿರ್ಮೋಹಿಯಾಗವನ್ನಕ್ಕರ ದೇಹಾರವಿನ್ನೆಲ್ಲಿಹದೋ? ಅನಂತ ಮುಖದಲ್ಲಿ ದೇಹಾರವ ಮಾಡಲು ದೇವನಲ್ಲಿಲ್ಲ ನೋಡಾ. ಅಸತ್ಯವಿಡಿದು ಹುಸಿಯ ಪೂಜಿಸಿ ಗಸಣಿಗೊಳಗಾದರು ನೋಡಾ ಅನಂತ ಹಿರಿಯರೆಲ್ಲರು. ಎಲೆಲೆ ಕೂಡಲ ಚನ್ನಸಂಗ ನಿಮ್ಮ ಶರಣ ಏಕೋಗ್ರಾಹಿಯಾಗಿ ಸಚ್ಚಿದಾನಂದ ಸ್ವರೂಪವಾದ ನಿಶ್ಚಿಂತ ನಿಜೈಕ್ಯನು ನೋಡಯ್ಯ.

೧೩. ನಾಲ್ಕು ಗ್ರಾಮದ ಪಟ್ಟಣಕ್ಕೆ ಪಂಚೈವರ ಕಾವಲು ನೋಡಾ. ಅವರ ಸಂಚವಿಡಿದು ಲಿಂಗಾರ್ಚನೆಯ ಮಾಡಿದೊಡೆ ಅದು ಲೋಕದ ಒಳಕೆ ಕಂಡಯ್ಯಾ. ಪಂಚೈವರ ಪಂಚಸ್ಥಾನವನಳಿದು ಏಕಸ್ಥಾನವ ಮಾಡಿದುದನರಿದು ನವನಾಳದ ಭೇದದಲಾ ಪರಿಯನರಿದೊಡೆ ಆತ ಲಿಂಗೈಕ್ಯ ನೋಡಾ. ಆ ನವನಾಳದ ಮಧ್ಯದಲ್ಲಿರ್ಪ ಜೀವ ಪರಮರ ನೆಲೆಯನರಿದೊಡೆ ನಮ್ಮ ಕೂಡಲ ಚನ್ನಸಂಗಯ್ಯನೊಬ್ಬಾತನೆ ಸಾಹಿತ್ಯವಾಗಿಹನು.

೧೪. ಗ್ರಾಮದ ಮಧ್ಯ ಧವಳಾರದೊಳಗೆ ಎಂಟು ಕಂಭ ಒಂಬತ್ತು ಬಾಗಿಲದೊಂದು ಶಿವಾಲಯ ಇರುತಿಹುದು. ಅದರ ಮಧ್ಯಸ್ಥಾನದೊಳಿರ್ಪ ಸ್ವಯಂಭುನಾಥನನರಿಯದೆ ಕಲ್ಲಿನಾಥನ ಪೂಜಿಸಿ ಸ್ವಯಂಭುನಾಥನ ಒಲ್ಲಿದೆ ಎಲ್ಲರೂ ಮರುಳಾದರು ನೋಡಾ. ಮೆಲ್ಲ ಮೆಲ್ಲನೆ ಸ್ವಯಂಭುನಾಥನು ತನ್ನ ತಪ್ಪಿಸಿಕೊಂಡು ಕಲ್ಲಿನಾಥನ ತೋರಿದ. ಆ ಶಿವಾಲಯದೊಳಗಣ ಮಧ್ಯಸ್ಥಾನವನರಿದು ಅವರ ಗರ್ಭಗೃಹವ ತಿಳಿದೊಡೆ ಆ ಕಲ್ಲಿನಾಥನು ನಾಸ್ತಿಯಾಗಿ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಸ್ವಯಂಭುವಾಯಿತ್ತು.

೧೫. ಕಾಯ ಪುರವೆಂಬ ಪಟ್ಟಣದೊಳಗೆ, ಮನವೆಂಬರಸು ತ್ರಿಕರಣವೆಂಬ ಪ್ರಧಾನಿ, ವಶೀಕರಣವೆಂಬ ಶಾನಭೋವ, ಆಸೆ ರೋಷವೆಂಬ ದ್ವಾರಪಾಲಕರು, ತ್ರಿಮಲವೆಂಬ ಕೋಟೆ, ಬಂಧಿಸುವ ಹಸಿವು ತೃಷೆ ವಿಷಯಾದಿಗಳ ಬೊಬ್ಬೆಯಬ್ಬರ, ಪಂಚೇಂದ್ರಿಯಂಗಳೆಂಬ ಕಾಹುಲುಗ ವಿವುತ್ತಿದೆ. ಭಯಂಕರವೆಂಬ ಅರಿಷಡ್ವರ್ಗಾದಿಗಳ ಪೇರ್ಬಲದ ಗುಂಪಿನ ಅರ್ಭಟಿಸುವ ಸಂಚಲವೆಂಬ ತೇಜಿ ಅಷ್ಟಮದವೆಂಬವೆಟಾನೆ, ಮೊದಲ ನಾಯಕರಿಪ್ಪತ್ತೈದುಮಂದಿ ಪ್ರಜೆ ಪಸಾಯತರು ನೂರನಾಲ್ವತ್ತೆಂಟು,

ದೇಹ ವಿಕಾರದ ಸರಿಗಳ ಸಂದಣಿ ಈರೈದು ಮಾನ್ಯ ಎರವುಪಟಳವ
ಗೆಲಬಾರದು. ಮುವ್ವರ ಕಂಟಕವತ್ಯಗ್ರ. ಮುಂದುವರಿವ ಕಹಳೆಯ
ಮೋಹರದ ಸಂಭ್ರಮ, ದುರ್ಮದವೆಂಬ ರಾಜೇಂದ್ರನು ನಿತ್ಯತ್ವದಿಂದ
ರಾಜ್ಯಂಗೈಯ್ಯುತ್ತಿರಲು, ಅಂತ್ಯ ಶೂನ್ಯವೆಂಬ ಪಟ್ಟಣದೊಳಗೆ ಅನಾಮ
ಯವೆಂಬ ಶರಣನರಸು, ಸ್ವತಂತ್ರ ಲೀಲೆಯಿಂದೆಚ್ಚತ್ತು ನೋಡಿ, ಗಹ
ಗಹಿಸಿ ನಗುತ್ತಿಹನು. ಮಹದಹಂಕಾರದ ವಡ್ಡಾವಣೆಯ ನೋಡಿ
ಹೂಂಕರಿಸಿ, ಸುಮನವೆಂಬ ತೇಜಿಯ ಬೇಗದಿಂದೇರಿ, ಘನತರವಾದ
ಪಂಚಾಕ್ಷರಿಯ ಜೋಡಂ ತೊಟ್ಟು, ನಿಷ್ಠೆ ಎಂಬ ಅಡ್ಡಾಯುಧವಂ
ಕಿತ್ತು ಜ್ಞಾನವೆಂಬ ಪಂಚೇಕ್ಷುವಿನಿಂದೆಡಬಲವಂ ನೋಡಿ ಸತ್ವ ರಜ
ತಮವೆಂಬ ತ್ರಿಗುಣದ ಪ್ರಧಾನರಂ ಕೆಡೆಮೆಟ್ಟಿ ಆ ಸುಮನವೆಂಬ ತೇಜಿ
ಯ ಕುರುಪಾಟದಲ್ಲಿ ವದಸಿ, ವಶೀಕರಣರೆಂಬ ಶಾನಬೋವರ ತತ್ತರ
ತರಿದು ದ್ವಾರ ಕವಾಟವಂ ಮುರಿದು ಆಸೆ ರೋಷಾದಿಗಳ ಬೆದರಿಸಿ,
ಮಲತ್ರಯದ ಕೋಟೆಯ ನುರುಹಿ ಹಸಿವು ತೃಷೆ ವಿಷಯ ವ್ಯಸನಾದಿ
ಗಳಂ ಸಂಹರಿಸಿ, ಪಂಚೇಂದ್ರಿಯದ ಜಿಹ್ವೆಯಂ ಕೊಯ್ದು ಅರಿಷಡ್ವ
ರ್ಗವಂ ಜರಿದು, ಪ್ರಪಂಚವೆಂಬ ತೇಜಿಯಂ ಕೆಡಹಿ, ದೇಹದಲ್ಲಿರ್ದ
ಅಷ್ಟ ಮದಗಳ ಹಿಟ್ಟುಗುಟ್ಟಿ, ಇಷ್ಟತ್ರಿವರ ದರ್ಪವಂ ಕೆಡಿಸಿ, ಕಾಯ
ವಿಕಾರದ ನೂರುನಲ್ವತ್ತೆಂಟು ಸಂದೇಹವೆಂಬ ಹಕ್ಕೆಯಂ ಬಿಡಿಸಿ,
ಮುವ್ವರ ಕಾಲಾಟದ ಸಂಚಾರಕ್ಕೆ ತೆರಹುಗೊಡದೆ, ದುರ್ಲಯದ ಪಟು
ಭಟರ ಬಲವಂ ಬರಿಗೈಯ್ದು ಶರಣುವೊಕ್ಕರ್ಗೆ ಅಭಯ ಹಸ್ತವಂ
ಕೊಟ್ಟು, ಆ ಪುರವಂ ಸಂತವಿಸಿ, ತನ್ನ ವಶಕ್ಕೆ ತಂದು, ವೀರಶೈವ
ಸಮ್ಮತವಾಗಿ ನಿಂದು, ಷಡ್ವರ್ಗವಲ್ಲಿ ಜಸುರನಾಗಿ, ಕಾಲ ಕರ್ಮ ಜಿತ
ಪ್ರಭುಃ । ಸರ್ವೇಂದ್ರಿಯ ಜಿತಾರೂಢ । ವೀರಮಹೇಶ್ವರಸ್ಮೃತಃ । ಸತ್ಕ್ರಿ
ಯಾಸಂಪನ್ನನಾಗಿ, ಆ ಪುರಕ್ಕೆ ಅಧಿಪತಿಯಾಗಿ, ತಾನಲ್ಲದನ್ಯರಿಲ್ಲೆಂದು
ಕಂಡು, ಆ ಪುರಕ್ಕೆ ಸುಚಿತ್ತ ಸುಬುದ್ಧಿ ಸುಮನ ಸುಜ್ಞಾನವೆಂಬ ನಾ
ಲ್ವರು ತಳವಾರರಂ ಮಾಡಿ, ಸುಜ್ಞಾನವೆಂಬರುವಿಂಗೆ ಪಟ್ಟವಂ ಕಟ್ಟಿ,
ಮಂತ್ರರಾಜನೆಂಬ ಹೆಸರಿಟ್ಟು ಷಡ್ವಿಧಬ್ರಹ್ಮ ದ್ವೈತದಲ್ಲಿ ಪರವಶನಾಗಿ,
ಬಾಹ್ಯೋಪಚಾರಂಗಳಡಗಿ, ತನ್ನ ತಾ ಬೇರ್ಪಡಿಸಿ ನಿಂದು, ಅಖಂಡ
ವಾಗಿ ॥ಸಾಕ್ಷಿ॥ ಇಂದ್ರಾವದ್ರಿಯೋಹಸ್ತ । ಪೀಠ ನಿಜಲಿಂಗ ನಿಷ್ಠಂ।
ವಿನಶ್ಯತಲ್ಲೀನಮಪ್ರವೇಶಾ । ಬಾಹ್ಯಕ್ರಿಯಾಸಂಕುಳ ನಿಷ್ಪ್ರಹಾತ್ಮ ಸಂಪೂ

ಜಯೊತ್ತ್ಸಂಗಯೆ ವೀರಶೈವಂ ಎಂದುದಾಗಿ, ಸುಮಹತ್ತ್ವದಿಂದೆ ತನ್ನ ಕರ ಸರೋಜ ಪೀಠಾಗ್ರದೋಳ್ಮಿರೆವ ಇಷ್ಟಬ್ರಹ್ಮದಲ್ಲಿ ತೃಪ್ತನಾಗಿ ಬಾಹ್ಯ ವೆನ್ನದೆ ಬಾಹ್ಯಾಭ್ಯಂತರವೆನ್ನದೆ ರಾಜಯೋಗಿಯಾಗಿ ತನ್ನ ಪಶ್ಚಿಮ ತತ್ತ್ವಮಂ ತಾನೆ ನೋಡಿ ತಿಳಿದು, ನಿಸ್ಪೃಹಾತ್ಮನಾಗಿ, ಇನ್ನು ಅನ್ಯವಿಲ್ಲ ವೆಂದರಿದು, ಅದ್ವೈತ ಭಾವದಿಂದವೆ ವೀರನಾಗಿ, ಮೇರು ಗಿರಿಯ ಮೇಲೆ ತೊಳಗಿ ಬೆಳಗುವ ಶಿಖಾ ಚಕ್ರದಿಂದ ಮೇಲಣ ಮಮ ಪೀಠ ದಲ್ಲಿರುವ ಪ್ರಣವದ ಪ್ರಭೆಯು ಜ್ಯೋತಿರ್ಮಯ ಲಿಂಗದಲ್ಲಿ ತಾನೆನ್ನದೆ ಇದಿರೆನ್ನದೆ ಅಲ್ಲಿ ಸ್ವೈನೆರಗಾದ ನಿಜ ಶರಣನಲ್ಲಿಯೆ ಸನ್ನಿಹಿತ ನಮ್ಮ ಕೂಡಲ ಚನ್ನಸಂಗಮದೇವಾ.

೧೬. ಕಂದದ ಹೂವನೆ ಕೊಯ್ದು ನೊಂದದಾರತಿಯ ಬೆಳಗಿ ಅಂದವಳಿಯದೆ ಬಿಂದು ತುಳುಕದೆ ನಂದಿ ಮುಂದುಗೆಡದ ಮುನ್ನವೆ ಕಂದದ ಹೂವಿನ ಪೂಜೆಯು ಲಿಂಗಮಧ್ಯವ ತಿಳಿದುನೋಡಿ ಮೇಲು ಗಿರಿಯ ಮೇಲಿಹ ಆಕಳದ ಕ್ಷೀರದಲ್ಲಿ ಅಡಿಗೆಯನೆ ಮಾಡಿ ನಮ್ಮ ಕೂಡಲ ಚನ್ನಸಂಗಯ್ಯನೆಂಬ ಲಿಂಗಕ್ಕೆ ಆರೋಗಣೆಯ ಸವೆಯಾ.

೧೭. ಸರೋವರದೊಳಗೊಂದು ಹಿರಿಯ ಕಮಳ ಹುಟ್ಟಿ ಪರಿ ಮಳವಡಗಿರ್ದುದನಾರು ಅರಿಯರಲ್ಲ. ಆ ಪುಷ್ಪವ ಅರಳದೆ ಕೊಯ್ದು ಕರಡಿಗೆಯೊಳಗಿರಿಸಿ ಸುರಕ್ಷಿತವ ಮಾಡಲರಿಯರಲ್ಲ. ಎಡದ ಕೈಯ್ಯಲ್ಲಿ ಲಿಂಗ ಬಲದ ಕೈಯ್ಯಲ್ಲಿ ಪುಷ್ಪ ಒಡವೆರೆದು ಪೂಜೆಯ ಮಾಡಲರಿ ಯರಲ್ಲ. ಪರಿಯಾಯ ಪರೀಕ್ಷೆಯನೊರೆದು ನೋಡುತ್ತ ಕುರುಹಿಟ್ಟರು ಹಿನಂತೆ ಕಣ್ಣಾಲಿ ಹಳಚದಂತೆ ಬಾರಿಯ ಮೆಟ್ಟಿ ನಿಂದು ನೋಡುತ್ತ ಹರಿಯ ವೃಷಭನ ಕೊಟ್ಟು ಹಿಡಿದಿರುವ ಸ್ವಾಮಿಯ ಕಂಡು ಜನನ ಮರಣಂಗಳಿಲ್ಲದಂತಾದೆನಲ್ಲ. ಎನ್ನೊಡೆಯ ಎನ್ನ ಕರುಣಿ ಕೂಡಲ ಚನ್ನಸಂಗನ ಕರುಣ ಪ್ರಸಾದ ಪ್ರಾಣಲಿಂಗಿಗಲ್ಲದೆ ಇನ್ನಾರಿಗೆಯೂ ಅಳ ವಡದು ನೋಡಾ.

೧೮. ಮಾಣಿಕ್ಯ ಮಂಟಪದೊಳಗೆ ಒಳಗೇಳು ಚಿತ್ರಕರೊಡನೆ ಮೇಳವಿಸಿದನು ಮಹಾಮಂತ್ರಂಗಳ ಆ ಮೂಲ ಮಂತ್ರದ ಮೇಲೆ ಪ್ರಾಣಲಿಂಗದ ಬೆಳಗು ಅಲ್ಲಲ್ಲಿಗೆ ವಜ್ರದ ಕೀಲು, ಆ ಮಹಾಕೂಟದ ಜಾಳಿಂದ್ರದೊಳಗೆ ಮಾಣಿಕ್ಯದ ಪ್ರತಿಬಿಂಬ ಏಳು ರತ್ನದ ಪುತ್ಥಳಿಗಳು ಮಣಿಮಾಲೆಯ ಹಾರಂಗಳು ಹೊಳೆವ ಮುತ್ತಿನ ದಂಡೆ ಅಳಿಯ ನೀಲದ

ತೊಡಿಗೆಯ ತೊಟ್ಟು ಸುಳಿವ ಮದ್ದಳೆಕಾರರು ಒಳಗೆ ದಂದಣವೆನಲು ಕುಣಿಕುಣಿದಾಡುವ ಪಾಡಿಗ ಬಹುರೂಪುಗ ನಟುವಿಗ ತಳೋದರಿಯ ಮೇಳಾಪ ಕಹಳೆಕಾರರ ನಾದ ಕೊಳಲವ ರಭಸದೊಳು ಹಾಡುತ್ತ ಒಳಹೊರಗೆ ಕಾಣಬರುತ್ತಿರೆ ಚಿತ್ರದ ಬೊಂಬೆ ಫಣಿಪತಿಯ ಕೋಣೆಯೊಳು ಸಂದಣಿಸುತ್ತಿರಲು ಗಣತಿಂಥಿಣಿಯ ಮೇಳವೆಲ್ಲವು ನಮ್ಮ ಕೂಡಲ ಚನ್ನಸಂಗಮದೇವರಲ್ಲಿಹ ಕಳಸ ಪ್ರಾಣಲಿಂಗದ ಬೆಳಗಿನೊಳಗೆ ಬೆಳಗಾಯಿತ್ತು.

೧೯. ಉದಯ ಮಧ್ಯಾನ್ಹದ ಅಸ್ತಮಾನವೆಂಬ ತ್ರಿಕಾಲದಲ್ಲಿ ಪ್ರಾಣಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬರು. ಉದಯವಾವುದು, ಮಧ್ಯಾನ್ಹವಾವುದು, ಅಸ್ತಮಾನವಾವುದು, ನೀವು ಬಲ್ಲಡೆ ಹೇಳಿರೆ. ಈ ಕಾಯ ಉದಯವೋ? ಈ ಕಾಯ ಮಧ್ಯಾನ್ಹವೋ? ಈ ಕಾಯ ಅಸ್ತಮಾನವೋ? ಈ ಕಾಯದ ಉದಯವ ಬಲ್ಲವ ಕರ್ಮಿ. ಈ ಕಾಯದ ಮಧ್ಯಾನ್ಹವ ಬಲ್ಲವ ಪ್ರಪಂಚಿ. ಈ ಕಾಯದ ಅಸ್ತಮಾನವ ಬಲ್ಲಾತ ವಿರಕ್ತ. ಜೀವ ಉದಯವೋ? ಜೀವ ಮಧ್ಯಾನ್ಹವೋ? ಜೀವ ಅಸ್ತಮಾನವೋ? ಜೀವದ ಉದಯವ ಬಲ್ಲಾತ ಜ್ಞಾನಿ. ಜೀವದ ಮಧ್ಯಾನ್ಹವ ಬಲ್ಲಾತ ಜಾತಿಸ್ಮರತ್ವ. ಜೀವದ ಅಸ್ತಮಾನವ ಬಲ್ಲಾತನು ಜೀವನ್ಮುಕ್ತ. ಲಿಂಗ ಉದಯವೋ? ಲಿಂಗ ಮಧ್ಯಾನ್ಹವೋ? ಲಿಂಗ ಅಸ್ತಮಾನವೋ ಇಂತೀ ತ್ರಿಕಾಲವನರಿದು ಮಜ್ಜನಕ್ಕೆರೆಯಬಲ್ಲಡೆ ನಮ್ಮ ಕೂಡಲ ಚನಸಂಗಯ್ಯನಲ್ಲಿ ಆತ ಅನವರತ ಲಿಂಗಾರ್ಚನ ಪರಿಣಾಮಿ.

೨೦. ಸ್ಥೂಲ ತನು ಸೂಕ್ಷ್ಮ ತನು ಕಾರಣ ತನು. ಸ್ಥೂಲತನುವಿನ ಮೇಲೆ ಇಷ್ಟಲಿಂಗ ಪ್ರತಿಷ್ಠೆ. ಸೂಕ್ಷ್ಮ ತನುವಿನ ಮೇಲೆ ಪ್ರಾಣಲಿಂಗ ಪ್ರತಿಷ್ಠೆ. ಕಾರಣ ತನುವಿನ ಮೇಲೆ ಭಾವಲಿಂಗಪ್ರತಿಷ್ಠೆ. ಇಂತೀ ಸ್ಥೂಲ ಸೂಕ್ಷ್ಮ ಕಾರಣವೆಂಬ ಮಹವು ಆ ಮಹದ ಹೃದಯದಲ್ಲಿ ಕೊನೆದೋರುತಿರ್ಪ ಜ್ಯೋತಿಯು ನಮ್ಮ ಶರಣರ ಸರ್ವಾಂಗದಲ್ಲುಂಟು ನೋಡಯ್ಯ ಕೂಡಲ ಚನ್ನಸಂಗಮದೇವಾ.

ಮುಂದೆ ಪ್ರಾಣಲಿಂಗಿಯ ಜಂಗಮಲಿಂಗಸ್ಥಲ. ಇಂತೀ ಶಿವಲಿಂಗದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯ ಜಂಗಮಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಾಣಲಿಂಗಿಯ ಜಂಗಮಲಿಂಗಸ್ಥಲ.

೧. ತನು ಮನವ ನಿತ್ಯವೆಂಬರು. ತನು ಮನ ನಿತ್ಯವೆಂಬ ಮಾತ ಕೇಳಲಾಗದು. ಅಂಬಲಿಯನಿಕ್ಕುವರೆಲ್ಲರು ಭಕ್ತರೆ? ಕಂಬಳಿಯ ಕೊಟ್ಟವರೆಲ್ಲರು ಭಕ್ತರೆ? ಧರ್ಮಾರ್ಥ ಕಾಮ ಮೋಕ್ಷವೆಂಬ ಚತುರ್ವಿಧ ಪದವಿಗಳಲ್ಲದೆ ಗುರುಲಿಂಗ ಜಂಗಮಕ್ಕೆ ತನು ಮನ ಧನವನಿತ್ತು ಕಿಂಚಿತ್ತು ಸಂಶಯವಿಲ್ಲದೆ ತನ್ನ ಹರಿವ ತಾನರಿಯದನ್ನಕ್ಕರ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ತ್ರಿವಿಧ ವಂಚಕರನೆಂತು ಸದ್ಭಕ್ತನೆಂಬೆನಯ್ಯಾ? ಎನಲಾಗದು.

೨. ಶರಣ ಭರಿತ ಲಿಂಗವದೆಲ್ಲಿಯುಂಟು? ಲಿಂಗಭರಿತ ಶರಣವದೆಲ್ಲಿಯುಂಟು? ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಮಹಾ ಗುರು ಬಸವೇಶ್ವರನೊಬ್ಬನೆ ಪರಿಪೂರ್ಣನಯ್ಯಾ.

೩. ಗುರುವಿನ ಗುರು ಪರಮ ಗುರು ಪರಬ್ರಹ್ಮ ಜಂಗಮವೆನಿಸಿಕೊಂಡ ಬಳಿಕ ತಾನೆ ಗುರುವಾಗಿ ಉಪದೇಶವ ಮಾಡಲಾಗದು. ಮುಂದೆ ಶಿಕ್ಷೆ ದೀಕ್ಷೆಗಳಿಂದೆ ಗುರುಕರುಣವ ಪಡೆದವರಿಂದೆ, ದಾಸೋಹವ ಮಾಡಿಸಿಕೊಳ್ಳಲ್ಕರ್ತನಲ್ಲದೆ, ತನ್ನ ಪ್ರಾಣಲಿಂಗವ ಕೊಡ ಕರ್ತನಲ್ಲ. ತನ್ನ ಪ್ರಾಣಲಿಂಗವ ಕೊಟ್ಟು ಗುರುವಾದ ಬಳಿಕ, ಜಂಗಮಸ್ಥಲಕ್ಕೆ ಭಂಗ ಹೊಂದಿತ್ತು. ಅದೆಂತೆಂದೊಡೆ, ಅವನು ತನ್ನ ಪೂರ್ವಾರ್ಜಿತವ ತ್ಯಜಿಸಿ, ಗುರು ಕರಜಾತನಾಗಿ, ನಿರ್ಧರಿಸಿ ನಿಲಲರಿಯ. ಅಂತಪ್ಪ ಭವಜೀವಿಗೆ ನಿಜ ಜಂಗಮವೆ? ಶಿವಯೋಗಿ ಎನಿಸಿಕೊಂಬ ರಾಜಕೃಪಾಳು ತಾನೆ ಚರಲಿಂಗವಾಗಿ ಬಂದು ಆಚಾರ ಭ್ರಷ್ಟರಿಗೆ ಹಸ್ತಾನುಗ್ರಹವ ಮಾಡಿದೊಡೆ ಜಂಗಮಸ್ಥಲಕ್ಕೆ ಅದೇ ಭಂಗವೆಂದುದು ನಮ್ಮ ಕೂಡಲ ಚನ್ನಸಂಗಯ್ಯನ ವಚನ. ಅದು ಕಾರಣವಾಗಿ ವೀರಶೈವ ಸಿದ್ಧಾಂತದಲ್ಲಿ ಶಬ್ದ ಮುಗ್ಧವಾಗಿರಬೇಕು. ಗುಹ್ಯಕ್ಕೆ ಗುಹ್ಯವಾಗಿರಬೇಕಯ್ಯಾ.

೪. ಕೇಶ ಕಾಷಾಯಾಂಬರವನಿಕ್ಕಿದೊಡೇನೊ? ವಿಭೂತಿ ರುದ್ರಾಕ್ಷಿ ಧರಿಸಿದೊಡೇನೊ? ಸಾಕಾರದಲ್ಲಿ ಸನ್ಮತನಲ್ಲ. ನಿರಾಕಾರದಲ್ಲಿ ನಿರುತನಲ್ಲ! ಪಾರಮಾರ್ಥದಲ್ಲಿ ಪರಿಣಾಮಿಯಲ್ಲ. ಇದು ಕಾರಣವಾಗಿ ಕೂಡಲಚನ್ನಸಂಗಮದೇವಾ ತುರುಬಾಗಲಿ ಜಡೆಯಾಗಲಿ ಬೋಳಾಗಲಿ ಅರಿವು ಆಚಾರವುಳ್ಳೊಡೆ ಜಂಗಮ.

೫. ನವ ಖಂಡ ಮಂಡಲವೆಂಬ ಭೂಮಿಯ ಮೇಲೆ ಅಚಲಿತ ಪೀಠವದೆ. ಅದರ ಮೇಲೊಂದು ಲಿಂಗವದೆ. ಅಲ್ಲಲ್ಲಿಗೆ ಆ ಮೂರ್ತಿಯಾಗಿ ಜಾಯತೆ ಚರಾದಿಗಳೆಲ್ಲ ಜಂಗಮವೆ? ಅಲ್ಲ. ಹಾಗೆ ಆಚರಿಸುವಂತಹ ಸೈರಣೆ ಸಂಬಂಧವಿಲ್ಲವಾಗಿ, ಇಂತಿಹರೆಲ್ಲರು ಉಪಜೀವಿಗಳು. ನಮ್ಮ ಕೂಡಲಚನ್ನಸಂಗಮದೇವರು ಸಾಹಿತ್ಯವಾಗಿ ಉಭಯಲಿಂಗವಾದವರಿಗೆ ನಮೋ ನಮೋ ಎಂಬೆನು.

೬. ಜಗಭರಿತ ಲಿಂಗವೆಲ್ಲೆಡೆಯುಲುಂಟು. ಶರಣ ಭರಿತ ಲಿಂಗವ, ಪೂರ್ವವಯ್ಯಾ. ಗಮನ ಜಂಗಮವೆಲ್ಲೆಡೆಯುಲುಂಟು. ನಿರ್ಗಮನ ಜಂಗಮವಪೂರ್ವವಯ್ಯಾ. ಅಚೇತನ ಲಿಂಗಕ್ಕೆ ಚೈತನ್ಯ ಜಂಗಮ ಸಾಹಿತ್ಯ ನೋಡಾ. ಇಂತೀ ಲಿಂಗಾಂಗ ಸಂಗಸಮರಸವಾದ ಸಕೀಲ ಸಂಬಂಧದಲ್ಲಿ ಪರಿಣಾಮಿಗಳಯ್ಯಾ ಕೂಡಲಚನ್ನಸಂಗಮದೇವಾ ನಿಮ್ಮ ಶರಣರು.

೭. ಕರ್ತೃಭೃತ್ಯರಾಗಿ ಮಾಡುವ ಮಾಟದಲ್ಲಿ ವಿಚಾರವುಂಟು. ಅದೆಂತೆಂದೊಡೆ ಸಂಸಾರದಿ ಧನವುಳ್ಳೊಡೆ ಜಂಗಮಲಿಂಗವಹುದು. ಅದಕ್ಕೆ ಮಾಡಿದಲ್ಲಿ ಫಲಪದವುಂಟು. ಆ ಫಲಪದವುಂಟಾದಲ್ಲಿ ಭವವುಂಟು. ಫಲಪದವಿಲ್ಲದಲ್ಲಿ ಭವವಿಲ್ಲ. ಮನದಂತೆ ಮಂಗಳವೆಂಬ ಸಟೆಯ ದಿಟಮಾಡಿ ಈ ಉಭಯದೊಳಗೆ ಆವುದು ಪ್ರಿಯವಾಗಿ ಮಾಡುವರು ಆ ಹಾಗಿಹರಯ್ಯಾ ಕೂಡಲ ಚನ್ನಸಂಗಮದೇವಾ.

೮. ॥ಸಾಕ್ಷಿ॥ ಭವಬೀಜ ಸ್ತಥಾಭಕ್ತಿ। ಭಕ್ತಿ ಬೀಜಸ್ತಥಾ ಶಿವಃ। ಶಿವಬೀಜ ಸ್ತಥಾ ಜ್ಞಾನಂ ತ್ರಿಲೋಕದುರ್ಲಭಂ। ಈಷಣತ್ರಯ ಸಂಯುಕ್ತಂ ಶಿವಜ್ಞಾನವಿವರ್ಜಿತಃ। ಶ್ವಪಚಂಪಾದತೀರ್ಥಂಚ। ಸ್ವೀಕರಂ ನರಕಂ ವ್ರಜೇತ್ ಸಂಸಾರಾರ್ಣವ ಘೋರೇಣ। ವೇಷ ಮಾಂಗಿರೋದಿತಃ। ಪಾದತೀರ್ಥ ಪ್ರಚಾದಂಚ ಸ್ವೀಕರಂ ನರಕಂ ವ್ರಜೇತ್। ಉತ್ತಮಂ ಪ್ರಾಣಲಿಂಗಿನಾಂ। ಮಧ್ಯಮಂ ಅಂಗಲಿಂಗಯೋಃ। ಕನಿಷ್ಠಂ ಸ್ಥಾವರಾರಾಧ್ಯಂ । ಶೂನ್ಯಂ

ಧ್ಯಾನನಿಷ್ಫಲಂ ಭವೇತ್। ಪ್ರಾಣಲಿಂಗವರಿಯದವರ ಪಾದಾರ್ಚನೆಯ ಮಾಡಲಾಗದು. ಮುಖ ಲಿಂಗವಿಲ್ಲದವರಲ್ಲಿ ಪ್ರಸಾದವ ಕೊಳಲಾಗದು. ಸರ್ವಾಂಗಲಿಂಗವೆಂದರಿಯದವರಲ್ಲಿ ಪಾದೋದಕ ಪ್ರಸಾದವ ಕೊಂಡೊಡೆ ಅಘೋರ ನರಕ ತಪ್ಪದಯ್ಯಾ ಕೂಡಲಚನ್ನ ಸಂಗಮದೇವಾ.

೯. ಜಂಗಮ ಜಂಗಮ ವೆಂದೊಡೇನು? ಬಾಯಲಿಕ್ಕಕ್ಕೆ ಜಂಗಮವೆ? ಜಂಗಮ ಜಂಗಮವೆಂದೊಡೆ, ಉಪಾಧಿಕನೆ? ಜಂಗಮ ಜಂಗಮ ವೆಂದೊಡೆ ಬೋಧಕನೆ? ಜಂಗಮ ಜಂಗಮವೆಂದೊಡೆ, ಅಶಕನೇ? ಜಂಗಮ ಜಂಗಮವೆಂದೊಡೆ, ಕಾರ್ಯಕಾರಣನೇ? ಜಂಗಮ ಜಂಗಮ ವೆಂದೊಡೆ ಸ್ತ್ರೀಲಂಪಟನೆ? ಈ ಷಡ್ಗುಣದಿಚ್ಛೆಕರ ಜಂಗಮವೆನ್ನೆನಯ್ಯಾ. ಈ ಉಪಜೀವಿ ಪಶುಮತದವರಿಗೆ ಜಂಗಮವೆಂಬ ನಾಮ ಸಲ್ಲದು. ಜಂಗಮವೆಲ್ಲ ಒಂದೇ ಎಂದು ಊಟಕ್ಕಿಕ್ಕಿ ಸುಡಿವ ಪಾತಕರ ಮಾತ ಕೇಳಲಾಗದು. ನಿಜ ಜಂಗಮವೆಂತೆಂದೊಡೆ, ನಿರ್ಲೇಪಕ, ನಿರುಪಾಧಿಕ, ನಿರ್ಭೇದ್ಯ ನಿರಾಶ್ರಿತ ಜಂಗಮ. ನಿರ್ಲಂಪಟ ಜಂಗಮ. ಈ ಷಡ್ಗುಣಭರಿತನಾದಾತನೇ ನಿರವಯ ಜಂಗಮ. ॥ ಸಾಕ್ಷಿ॥ ನಿಃಸಂಗತ್ವಂನಿರಾಭಾರೀ। ನಿಸ್ಸೀಮಂ ನಿರುಪಾಧಿಕಂ। ನಿರ್ದೇಹಂನಿರ್ಮಳಂ ನಿತ್ಯಂ ಸತ್ಯ ಜಂಗಮ ಲಕ್ಷಣಂ। ನಿಷ್ಕಳಂಕನಿರಾಪೇಕ್ಷಂ ನಿರ್ಭೇದ್ಯಂನಿರಾಶ್ರಿತಂ। ನಿರ್ದೇಶೀನಿಸ್ಪೃಹಂ ತಸ್ಯ ಸತ್ಯವಾಕ್ಯಂ ದಯಾಶಾಂತಂ॥ ಓಂ ಕಾರಂ ಜನಿತೆ ಪೃಥ್ವಿ। ಗಕಾರಂ ಗಗನೋದ್ಭವಂ। ಮಕಾರಂಮರ್ತ್ಯ ಲೋಕಂ ಚ। ತಸ್ಯಜಂಗಮಲಕ್ಷಣಂ। ಮುಗ್ಧತ್ವಂ। ಮೂರ್ತಿನಾಂ ತತ್ವ। ಮದೋನ್ಮೋಹವಿವರ್ಜಿತಂ। ಮಾಯಾದೇಹಲಯಂನಾಸ್ತಿ। ಇತ್ಯೇತೆ ಜಂಗಮಲಕ್ಷಣಂ। ಇದು ಕಾರಣ ಇಂತಪ್ಪ ದೇಹಕಾರಣವಾಗಿ, ಪ್ರಭುದೇವರು ಬಸವಣ್ಣನು, ಅವರಿಬ್ಬರು ಒಂದಾದ ಕಾರಣ ಅವರೊಕ್ಕುದ ಕೊಂಡು, ನಾನು ಬದುಕಿದೆನಯ್ಯಾ ಕೂಡಲ ಚನ್ನಸಂಗಮದೇವಾ.

೧೦. ಶರಣನೆನಿಸಿಕೊಂಬುವುದು ಅರಿದರಿದು ನೋಡಯ್ಯಾ. ಸತ್ಯವುಳ್ಳ ಸದ್ಭಕ್ತರೊಳಗಡಗಿರ್ದು, ತನ್ನ ಕುರುಹ ಲೋಕಕ್ಕೆ ತೋರದಂತಿರಬೇಕು. ಸಕಲ ಪ್ರಾಣಿಗಳ ಮೇಲೆ ರೋಷವಿಲ್ಲದಿರಬೇಕು. ಇಂತಪ್ಪ ಶಿವಶರಣರಲ್ಲಿ ಸನ್ನಿಹಿತನಯ್ಯಾ ನಮ್ಮ ಕೂಡಲಚನ್ನಸಂಗಮದೇವಾ.

---

ಮುಂದೆ ಪ್ರಾಣಲಿಂಗಿಯ ಪ್ರಸಾದಲಿಂಗಸ್ಥಲ. ಇಂತು ಜಂಗಮ ಲಿಂಗದಲ್ಲಿ ಅನುಭಾವಿಯಾದ ಪ್ರಾಣಲಿಂಗಿಯ ಪ್ರಸಾದಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಪ್ರಾಣಲಿಂಗಿಯ ಪ್ರಸಾದ ಲಿಂಗಸ್ಥಲ

೧. ಅಷ್ಟವಿಧಾರ್ಚನೆಯ ಮಾಡುವರೆ, ಅಂಗಸುಖವನರಿಯದಂತಿರ ಬೇಕು. ಲಿಂಗಾರ್ಚನೆಯ ಮಾಡುವರೆ, ಅರಿಷಡ್ವರ್ಗವನರಿಯದಂತಿರ ಬೇಕು. ಪ್ರಸಾದವ ಭೋಗಿಸುವಡೆ, ಹಸಿವು ತೃಷೆ ವ್ಯಸನವಿಲ್ಲದಂತಿರ ಬೇಕು. ಈ ತ್ರಿವಿಧವನರಿಯದಿರ್ದೊಡೆ ನಮ್ಮ ಕೂಡಲಚನ್ನಸಂಗಯ್ಯ ನಲ್ಲಿ ಬರಿಯ ವೇಷ ಡಂಭಕದ ಉದರಪೋಷಕರೆಂದೆಂಬೆನು.

೨. ಕಾಯವೇ ಜೀವವಾಗಿ ಜೀವವೆ ಕಾಯವಾಗಿ, ಕಾಯ ಜೀವವ ಮುಟ್ಟದು, ಪ್ರಾಣ ಲಿಂಗವ ಮುಟ್ಟದು. ಪ್ರಸಾದವೆಲ್ಲಿಹದೋ? ವಾಯುಕ್ಕೆ ವಾಯು ನಮ್ಮ ಕೂಡಲ ಚನ್ನಸಂಗಯ್ಯನೆಂಬುವುದೇ ವಾಯು.

೩. ಪ್ರಾಣಲಿಂಗ ಪ್ರಸಾದವೆಲ್ಲೆಡೆಯಲುಂಟು. ಲಿಂಗ ಪ್ರಾಣ ಪ್ರಸಾದವಪೂರ್ವವಯ್ಯಾ. ಪ್ರಾಣಲಿಂಗಪ್ರಸಾದ ದೇಹಿ ಕರ್ಮಿ. ಲಿಂಗ ಪ್ರಾಣಪ್ರಸಾದ ಲಿಂಗಭೋಗೋಪಭೋಗಿಯಯ್ಯಾ ಆತನೆ ನಿಮ್ಮ ಶರಣ ನೆನಿಸುವ ಶಿವಯೋಗಿಯಯ್ಯಾ ಕೂಡಲ ಚನ್ನಸಂಗಮದೇವಾ.

೪. ಶ್ರೋತ್ರೇಂದ್ರಿಯ ಸುಖವುಳ್ಳನ್ನಕ್ಕರ ಗುರುವಚನವನೆಂತು ಕೇಳಿದೆನೆನಬಹುದಯ್ಯಾ ? ಘ್ರಾಣೇಂದ್ರಿಯ ಸುಖವುಳ್ಳನ್ನಕ್ಕರ ಲಿಂಗಕ್ಕೆ ಗಂಧವನೆಂತು ನಿವೇದಿಸಿದೆನೆನಬಹುದಯ್ಯ? ನೇತ್ರೇಂದ್ರಿಯ ಸುಖವುಳ್ಳನ್ನ ಕ್ಕರ ಲಿಂಗವ ಭಾವಿಸಿದೆನೆಂತೆನ್ನಬಹುದಯ್ಯಾ ? ಜಿಹ್ವೇಂದ್ರಿಯ ಸುಖವು ಳ್ಳನ್ನರ ಪ್ರಸಾದವ ಗ್ರಹಿಸಿದೆನೆಂತೆನಬಹುದಯ್ಯಾ? ಶ್ರೋತ್ರೇಂದ್ರಿಯ ಸುಖವುಳ್ಳನ್ನಕ್ಕರ ಗುರುವಚನವನೆಂತು ಕೇಳಿದೆನೆನಬಹುದಯ್ಯ ? ಸ್ಪರ್ಶೇಂ ದ್ರಿಯ ಸುಖವುಳ್ಳನ್ನಕ್ಕರ ಲಿಂಗಾಂಗವಾಯಿತ್ತೆಂತೆನಬಹುದಯ್ಯಾ ? ಇಂತಿ ವೆಲ್ಲವನು ಪರಿಚ್ಛೇದಿಸಿದೊಡೆ ಅವರೆ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಪ್ರಾಣಲಿಂಗ ಪ್ರಸಾದಿಗಳಯ್ಯಾ.

೫. ರೂಪನರ್ಪಿಸಬಹುದಲ್ಲದೆ ರುಚಿಯನರ್ಪಿಸುವ ಪರಿ ಎಂತಯ್ಯಾ? ಸ್ಫುರವಣಿಸಿ ಬಂದ ಗುಣಂಗಳನು ಲಿಂಗದೊಳಗೆ ನಿಕ್ಷೇಪವ ಮಾಡಲರಿ ಯದಿರ್ದೊಡೆ, ಪ್ರಾಣಲಿಂಗ ನಾಸ್ತಿ. ಪ್ರಸಾದವಿನ್ನೆಲ್ಲಿಹದೋ ಕೂಡಲ ಚನ್ನಸಂಗಮದೇವಾ?

೬. ॥ ಸಾಕ್ಷಿ॥ ರುಚಿಯರ್ಪಿತಪ್ರಸಾದಂ ಚ। ಸ್ವಸ್ವಾರ್ಪಿತಪ್ರಸಾದಕಂ। ಉಭಯಾರ್ಪಿತವಿಹೀನೋಽಪಿ। ಪೂಜಾಯಂನಿಷ್ಫಲಂಭವೇತ್। ಎಂದುದಾಗಿ, ಇಂತೆಂಬ ಶೃತಿವಾಕ್ಯವ ಕೇಳಲಾಗದು. ರುಚಿಯು ಬಲ್ಲಡೆ ಪ್ರಸಾದಿ. ಅದು ಹೇಗೆಂದೊಡೆ, ತಾನು ಲಿಂಗ ಭೋಗೋಪ ಭೋಗಿಯಾದ ಕಾರಣ ರುಚಿಯನರ್ಪಿಸುವಾತ ಪ್ರಸಾದಿಯಲ್ಲ. ಸುಖವನರ್ಪಿಸುವಾತ ಭಕ್ತನಲ್ಲ. ಇದರ ಭೇದವನರಿಯದ ಶಿವಶರಣಂಗೆ ನಮೋ ನಮೋಎಂಬೆನೈಯ್ಯಾ ಕೂಡಲ ಚನ್ನಸಂಗಮದೇವಾ.

೭. ಶಿವಯೋಗವಾದಲ್ಲಿ ಸಂಸಾರಯೋಗ ಮಾಬುದಯ್ಯಾ. ಸಂಸಾರಯೋಗವಾದಲ್ಲಿ ಭಕ್ತಾನುಗ್ರಹವೆ ಯೋಗವಯ್ಯಾ. ಭಕ್ತಾನುಗ್ರಹ ಯೋಗವಾದಲ್ಲಿ ಲಿಂಗಾನುಗ್ರಹ ಯೋಗವಯ್ಯಾ. ಲಿಂಗಾನಗ್ರಹ ಯೋಗವಾದಲ್ಲಿ ಜಂಗಮಾನುಗ್ರಹ ಯೋಗವಯ್ಯಾ. ಜಂಗಮಾನುಗ್ರಹ ಯೋಗವಾದಲ್ಲಿ ಪ್ರಸಾದಾನುಗ್ರಹ ಯೋಗವಯ್ಯಾ. ಪ್ರಸಾದಾನುಗ್ರಹ ಯೋಗವಾದಲ್ಲಿ ಮುಕ್ತಿಯೋಗವೆಂಬುದಿಲ್ಲವಯ್ಯಾ. ಈ ಪಂಚಯೋಗವು ಸನ್ಮತವಾದಲ್ಲಿ ಮನ ಮಗ್ನ ಯೋಗವಯ್ಯಾ. ಆ ಮನ ಮಗ್ನ ಯೋಗವಾದಲ್ಲಿ ನಮ್ಮ ಕೂಡಲಚನ್ನಸಂಗಮದೇವರಲ್ಲಿ ಸಮರಸೈಕ್ಯದ ಸಂಯೋಗವಯ್ಯಾ.

೮. ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡು ಆರೋಗಣೆಯ ಮಾಡಲಾಗದು. ಭಾಜನವಲ್ಲಿ ಸಹಭೋಜನವ ಮಾಡಲಾಗದು. ಅದೇನುಕಾರಣವೆಂದೊಡೆ, ॥ ಸಾಕ್ಷಿ॥ ಸರ್ವಾಂಗಸ್ತು ಗತಂ ಪ್ರಾಣಂ ಭಾಜನಂಭೋಜನಂ ತಥಾ ॥ ಹಸ್ತಲಿಂಗ ಪ್ರತಿಗ್ರಾಹ್ಯಂ ನರಕೆ ಕಾಲಮಕ್ಷಯಂ । ಎಂದುದಾಗಿ, ಕೂಡಲಚನ್ನಸಂಗಮದೇವ ಕರಸ್ಥಲದಲ್ಲಿ ಲಿಂಗವ ಧರಿಸಿ ಸಹಭೋಜನವ ಮಾಡಿದೊಡೆ ನಾಯಕನರಕವಯ್ಯಾ.

೯. ಅರ್ಪಿತಾಕಾರ ನರಕವೆಂದುದು ಗುರುವಚನ. ಭಾಜನೆಯ ಮಾಡಿದಿರಿಂಭೋ. ಭಾಜನದಲ್ಲಿ ಭೋಜನವ ಮಾಡಿದ ರುಚಿಯ ಲಿಂಗಕ್ಕೆಂಬ ಕರ್ಮಿಯ ನೋಡಾ. ತಟ್ಟಿದ ಮುಟ್ಟಿದ ಸುಖವ ಲಿಂಗಕ್ಕೆಂಬ ಗುರುದ್ರೋಹಿಯ ನೋಡಾ. ॥ ಸಾಕ್ಷಿ॥ ಸಂಕಲ್ಪಂ ಚ ವಿಕಲ್ಪಂಚ। ಭಾವಾಭಾವ ವಿವರ್ಜಿತಃ ನಾಸ್ತಿಕರಣೇಂದ್ರಿಯಂ ಚೈವ। ತೇನೈವ ಸಹ ಭೋಜನಂ। ಎಂದುದಾಗಿ, ಲಿಂಗಭಾಜನದಲ್ಲಿ ಸಹ ಭೋಜನವ ಮಾಡ್ದಿದೊಡೆ, ಇಹಪರದಲ್ಲಿ ಸಲ್ಲದ ನರಕಿ. ಕೂಡಲಚನ್ನಸಂಗಮದೇವಾ ಈ ಮರ್ಮವನರಿಯರಯ್ಯಾ.

೧೦. ಇಪ್ಪತ್ತೊಂದು ಯುಗದವರೆಲ್ಲರು ಲಿಂಗವ ಪೂಜಿಸಿ ದೃಷ್ಟವಾವುದು ನಷ್ಟವಾವುದೆಂದರಿಯದೆ ಭಾವ ಭ್ರಮಿತರಾದರು. ಜೀವ ಸಂಕಲ್ಪಿತರಾದರು. ಜೀವನಾಹುತಿಯನೆ ಲಿಂಗಾರ್ಪಿತವೆಂಬುವರು ಭವದ ಬಳ್ಳಿಯ ಹರಿಯಲರಿಯರಾಗಿ ಇಂತಹರೆ ಭಕ್ತರು? ಇಂತಹರೆ ಪ್ರಸಾದಿಗಳು? ಅಲ್ಲಲ್ಲ ಕೇಳಿ ಭೋ ಭಕ್ತನ ಮಹಿಮೆಯನು ಪ್ರಸಾದಿಯ ಘನವನು. ಪೃಥ್ವಿಯ ಸಾರವಲ್ಲದ ಪದಾರ್ಥವ ಲಿಂಗಕ್ಕೆ ಕೊಡಬಾರದ ಭಾಷೆ. ಅಪ್ಪುವಿನಿಂದ ಲಿಂಗಕ್ಕೆ ಮಜ್ಜನಕ್ಕೆರೆಯದ ಭಾಷೆ. ತೇಜದಿಂದಲಾದ ನಿವಾಳಿಯ ಲಿಂಗಕ್ಕೆತ್ತಬಾರದ ಭಾಷೆ. ವಾಯುವಿನಿಂದಾದ ಪರಿಮಳವ ಲಿಂಗಕ್ಕೆ ನಿವೇದಿಸಬಾರದ ಭಾಷೆ. ಆಕಾಶದಿಂದಾದ ಶೂನ್ಯವ ಲಿಂಗಕ್ಕೆ ಭಾವಿಸಬಾರದ ಭಾಷೆ. ಅದೆಂತೆಂದೊಡೆ ಮತ್ತೊಂದು ಪೃಥ್ವಿ ಉಂಟಾಗಿ ಮತ್ತೊಂದಪ್ಪು ಉಂಟಾಗಿ ಮತ್ತೊಂದು ತೇಜ ಉಂಟಾಗಿ ಮತ್ತೊಂದು ವಾಯು ಉಂಟಾಗಿ ಮತ್ತೊಂದು ಆಕಾಶ ಉಂಟಾಗಿ ಇಂತಿವರಲ್ಲಿ ಉಂಟಾದ ಪದಾರ್ಥದ್ರವ್ಯಂಗಳ ಲಿಂಗಕ್ಕೆ ನೀಡಿ ಮಾಡುವದೆ ಭಕ್ತಿ. ಇದು ಕಾರಣವಾಗಿ ಕೂಡಲ ಚನ್ನಸಂಗಯ್ಯ ಅರ್ಪಿತದ ಮುಖವ ನಿಮ್ಮ ಶರಣರೆ ಬಲ್ಲರು. ನೀವೆ ಬಲ್ಲಿರಿ. ನಾನೆತ್ತಬಲ್ಲೆನಯ್ಯಾ? ನಿಮ್ಮ ಧರ್ಮ ನಿಮ್ಮ ಧರ್ಮ.

೧೧. ಉತ್ತರ ದಕ್ಷಿಣ ಪೂರ್ವ ಪಶ್ಚಿಮವೆಂಬ ಬಟ್ಟೆಯನಾಲಿಸಿ ವಾಯುಬಂಧವಂ ಕಟ್ಟಿ, ಪಶ್ಚಿಮ ದ್ವಾರದಲ್ಲಿಯೆ ಪ್ರಣವ ನಿವಾಸಿಯಾಗಿರ್ದನಾ ಶರಣ. ಅಧೋನಾಳದಲ್ಲಿ ನಿರುತ ಮಧ್ಯನಾಳದಲ್ಲಿ ನಿರಾಳ ಉರ್ಧ್ವನಾಳದಲ್ಲಿ ಸುರಾಳ ವಾಮ ಕುಸುಮದ ಕೊನೆಯಲ್ಲಿ ಶೈವಲೋಕವ ಧರಿಸಿದ ಘಟಕ್ಕೆ ಕೇಡಿಲ್ಲವಾಗಿ ಲಿಂಗಕ್ಕೆ ಪ್ರಾಣಕ್ಕೆ ಒಂದೆ ಎಂಬ ಕಾರಣ ಅತಲವೆನಿಸಿತ್ತು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಸಮರಸೈಕ್ಯವನರಿದ ಕಾರಣದಿಂದೆ, ಭವದ ಬಾಧೆಯ ಗೆಲಿದ ಕಾರಣ ಎನ್ನ ಪ್ರಾಣಕ್ಕೆ ಭಯವಿಲ್ಲ ಎನ್ನ ಕಾಯಕ್ಕೆ ಬಂಧನವಿಲ್ಲ.

೧೨. ಪ್ರಸಾದ ಪ್ರಸಾದವೆಂಬುವರು ಪ್ರಸಾದದ ಸ್ಥಳಕುಳವೆಂತಿರ್ಪದೆಂದೊಡೆ ನಾನರಿಯೆನಯ್ಯಾ! ಕೊಟ್ಟವನೇನು ಗುರುವೆ? ಅಲ್ಲ. ಕೊಂಡವನೇನು ಶಿಷ್ಯನೇ? ಅದೆಂತಯ್ಯಾ ಎಂದೊಡೆ, ಅಂಜಿಕೆಯಿಂದ ಕೊಂಬುವುದು ಎನ್ನ ಪ್ರಸಾದ. ಅದಂತಿರಲಿ. ಮತ್ತೆಂತೆಂದೊಡೆ ತನುವ ನಂಡಲಿದು, ಮನವ ಶುದ್ಧವಮಾಡಿ, ಈಡಾಪಿಂಗಳ ನಾಳವಂ ಕಟ್ಟಿ,

ಸುಷುಮ್ನ ನಾಳದಲ್ಲಿರ್ಪ ಪವನನೆಂಬ ಪರಿಚಾರಕನಿಂದೆ ಅಗ್ನಿ ಎಂಬ ಅಜಗರನ ಎಬ್ಬಿಸಲು, ಅದು ಮೇಲುಗಿರಿಯಲ್ಲಿರ್ದ ಪ್ರಸಾದವ ತಾಗ ಲೊಡನೆ ಆ ಪ್ರಸಾದವು ಉದರಕ್ಕಿಳಿದು ಬರ್ಪಲ್ಲಿ, ಮನವೆಂಬ ಪ್ರಸಾದಿ ಮೆಯ್ಯಾಂತುಕೊಂಡು ಭೋಗಿಸಬಲ್ಲಡೆ, ಆತನೆ ಪ್ರಸಾದಿ ಕೂಡಲಚನ್ನ ಸಂಗಮದೇವಾ.

೧೩. ಕ್ರಿಯೆಯೆಂಬುದನಾರು ಬಲ್ಲರೋ? ಅಂಗಲಿಂಗವೆಂಬ ಸಂದು ಳಿದುದು ಕ್ರಿಯೆಯಲ್ಲ. ಅರ್ಪಿತ ಅನರ್ಪಿತವೆಂಬರು. ಅರ್ಪಿತವಾವುದು? ಅನರ್ಪಿತವಾವುದು? ಕ್ರಿಯೆಯೆಂಬುವದೇನು? ನಿಃಕ್ರಿಯೆಯೆಂಬುವದೆ ಪ್ರಾಣ. ತನುವೆಂಬ ಲಿಂಗವು ಪ್ರಾಣವೆಂಬ ಜಂಗಮಕ್ಕೆ ಮನವ ಸಮ ರ್ಪಣೆಯ ಮಾಡಿ ಆ ಪ್ರಾಣಲಿಂಗವೆಂಬ ಜಂಗಮಕ್ಕೆ ಮನವ ಸಮ ರ್ಪಿಸಿದ ನಿಃಕ್ರಿಯ ಪ್ರಸಾದಿಗಳ ತೋರಿಸಿ ಬದುಕಿಸಯ್ಯ ಎನ್ನ ಕೂಡ ಲಚನ್ನಸಂಗಮದೇವಾ.

---

ಮುಂದೆ ಪ್ರಾಣಲಿಂಗಿಯ ಮಹಾಲಿಂಗಸ್ಥಲ. ಇಂತೀ ಪ್ರಾಣಲಿಂ ಗಿಯ ಪ್ರಸಾದ ಲಿಂಗದೊಳು ಸಮರಸವನೆಯ್ದಿದ ಮಹಾಲಿಂಗ. ಆ ಸ್ಥಲ ಸ್ಥಲದನುಭಾವದ ವಚನ.

## ಪ್ರಾಣಲಿಂಗಿಯ ಮಹಾಲಿಂಗಸ್ಥಲ

೧. ಶ್ರೀಶೈಲ ಸಿಂಹಾಸನದ ಮೇಲೆ ಕುಳ್ಳಿರ್ದು, ಆ ಪುರದ ಬಾಗಿ ಲೊಳು ತಳತಳಿಯಂಗಳು, ಆ ಗಿರಿಯ ಸುತ್ತಲು ಗಾಳಿ ದೆಸೆದೆಸೆಗೆ ಬೀಸು ತ್ತಿರಲು, ಕೆರಳಿ ಆ ಪುರದ ನಾಲ್ಕು ಕೇರಿಯನೆ ಬಲಿದು, ಆ ನರನೆಂಬ ಪೆಸರಳಿದು ಗುರುಮಾರ್ಗಾಚಾರವಿಡಿದು ಬಂದು, ಮರಹೆಂಬ ಕದವ ಮುರಿದು, ಒಳಪೊಕ್ಕು, ಆ ಪುರದ ಮರ್ಮವನರಿದು, ಭರದಿಂದೆ ಶ್ರೀಸ್ಥಾನ ವನರುಹಿ, ಪರಿವಾರನೆಲ್ಲವನು ತನ್ನ ವಾಸಕ್ಕೆ ತಂದು, ಗಿರಿಯ ಶಿಖರವನೇರಿ ಆ ಪುರವ ಸೂರೆಗೊಂಡು, ಆ ಪುರಕ್ಕೆ ತಾನೆ ಒಡೆಯನಾಗಿ, ಪರಮ ಪರಿಣಾಮದಿಂದೆ ಓಲಾಡುತಿರ್ದರಯ್ಯಾ ಕೂಡಲ ಚನ್ನಸಂಗಮದೇವಾ ನಿಮ್ಮ ಶರಣರು.

೨. ಅಂಗವೆ ಲಿಂಗ ಲಿಂಗವೇ ಅಂಗವೆಂದರಿದ ಬಳಿಕ ನಮ್ಮ ಕೂಡಲ ಚನ್ನಸಂಗಮದೇವರು ಅಲ್ಲಿ ಹೆರೆಹಿಂಗದಿರ್ಪ ಕಾಣಿರೋ.

೩. ನೆಚ್ಚು ಮೆಚ್ಚು ಮನದಲ್ಲಿ ಅಚ್ಚೊತ್ತಿದಂತಿರಬೇಕು. ಜಂಗಮವೆನ್ನದು. ಅದು ತಾನು ತಾನಾಗಿ ನಿಂದುದು ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

೪. ಆಯತ ಲಿಂಗದಲ್ಲಿ ಆಚಾರವರತು ಸ್ವಾಯತ ಲಿಂಗದಲ್ಲಿ ವಿಚಾರವರತು ಸನ್ನಿಹಿತ ಲಿಂಗದಲ್ಲಿ ಅನುಭಾವವರತು ಇಂತೀ ತ್ರಿವಿಧದಲ್ಲಿ ತ್ರಿವಿಧವರತ ಬಳಿಕ ಒಂದಲ್ಲದೆರಡುಂಟೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ?

೫. ಅಯ್ಯಾ ಲೋಕದ ನಡತೆ ನಮಗೆ ಡೊಂಕು. ತನ್ನ ನಡತೆ ಲೋಕಕ್ಕೆ ಡೊಂಕು. ಊರಹೊದ್ದಿ ಕಾಡ ಸೇರ. ಆಪ್ಯಾಯನ ವಿರಹಿತ ಶರಣ ಕಪಾಲದೊಳು ಉಲುಹಡಗಿದ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಒಂದಾದ ಪರಮಲಿಂಗೈಕ್ಯವು.

೬. ಇನಿಗಡಲಣುಗನ ಕೂಡಿದ ಪತಂಗನು ತಾ ಪೊಸ ದಿವಸವ ಮರೆದಂತೆ ಅದು ಹೇಗೆಂದೊಡೆ ಸತ್ವದ ಗುಣ ರಜದಲ್ಲಡಗಿ ರಜದ ಗುಣ ತಮದಲ್ಲಡಗಿ ತಮದ ಗುಣ ರುದ್ರನೊಳಡಗಿ ರುದ್ರನ ಗುಣ ಈಶ್ವರನೊಳಡಗಿ ಈಶ್ವರನ ಗುಣ ಸದಾಶಿವನೊಳಡಗಿ ಸದಾಶಿವನ ಗುಣ ಅಕ್ಷರಾತ್ಮಕನಾದ ಶಿವನೊಳಡಗಿ ॥ಸಾಕ್ಷಿ॥ ಅಕ್ಷರಾಣಿ ಚ ಮಂತ್ರಾಣಿ ಸ್ವರಬಿಂದು ಸಮಾಶ್ರಿತಂ ॥ ಬಿಂದುರ್ಬಿಂದುತ್ಯನು ದಿನಂ । ಸುನಾದಃ ಶಿವರ್ಬಿಂದ್ಯತೆ ॥ ಇದು ಕಾರಣ ಕೂಡಲ ಚನ್ನಸಂಗಯ್ಯ ನಿಮ್ಮ ಶರಣರೆ ಬಲ್ಲರಲ್ಲದೆ ಮಿಕ್ಕಿನವರೆತ್ತ ಬಲ್ಲರಯ್ಯಾ?

೭. ರೇಚಕ ಪೂರಕ, ಕುಂಭಕವೆಂಬ ಗರುಡವಾಯು ಸೋಂಕ ತೆಗೆದು, ಬ್ರಹ್ಮಾಂಡದಲ್ಲಿ ಕಿತ್ತಿಟ್ಟು, ಆ ದ್ವಾರದ ಕವಾಟವ ತೆರೆದು, ಆ ಎಂದಾಲಿಸುತಿರ್ದ ಬಾಲಕುಮಾರ ಪ್ರಹುಢ ವಿಗಂಧದಲ್ಲಿ ಕಾಳಿಂದರ ಪೊಕ್ಕು ಆ ಕಾಳಿಂದರದಿಂದಲತ್ತಲಾರು ಬಲ್ಲರೋ? ಅಪ್ಪಿನ ಘಟವ ಹೊತ್ತುಕೊಂಡು ಸುಳಿವ ಜಗದೊಳಗೆ ಅರೆಬಿರಿದು ನಿರಾಳದಲ್ಲಿ ನೆನೆವ ಭೇದವನಾರು ಬಲ್ಲರೋ? ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯರನು ಲಿಂಗೈಕ್ಯರೇ ಬಲ್ಲರು.

೮. ಮಂದಾರ ಸ್ಥಾನ ಮೊದಲಾದ ಆಧಾರ ಕಡೆಯಾದ, ಸ್ವಾದೋದಕ ಸಮುದ್ರದಲ್ಲಿ ವಿಶ್ರಮಿಸದ ಇಕ್ಷು ಸಮುದ್ರದಲ್ಲಿ ತೃಪ್ತನಾಗಿ ಮೇರುಮಂದಿರದಲ್ಲಿ ಮುಗ್ಧನಾದ ಕಾರಣ ಕೂಡಲ ಚನ್ನಸಂಗ, ನಿಮ್ಮ ಶರಣ.

೯. ಒಂದನೆಯ ಬಾಗಿಲಲ್ಲಿ ನೆನಹಿಪ್ಪುದು. ಎರಡನೆಯ ಬಾಗಿಲಲ್ಲಿ ಗುಣವಿಪ್ಪುದು. ಮೂರನೆಯ ಬಾಗಿಲಲ್ಲಿ ಸುಗುಣವಿಪ್ಪುದು. ನಾಲ್ಕನೆಯ ಬಾಗಿಲಲ್ಲಿ ಯೋಗವಿರ್ಪುದು. ಐದನೆಯ ಬಾಗಿಲಲ್ಲಿ ಪಂಚೇಂದ್ರಿಯ ಗುಣವಿಪ್ಪುದು. ಆರನೆಯ ಬಾಗಿಲಲ್ಲಿ ಷಟ್‌ಸ್ಥಲಂಗಳಿಪ್ಪವು. ಏಳನೆಯ ಬಾಗಿಲಲ್ಲಿ ಸಪ್ತವ್ಯಸನಂಗಳಿಪ್ಪವು. ಎಂಟನೆಯ ಬಾಗಿಲಲ್ಲಿ ಅಷ್ಟಮದಂಗಳಿಪ್ಪವು. ಒಂಬತ್ತನೆಯ ಬಾಗಿಲಲ್ಲಿ ನಾದ ಬಿಂದು ಕಳೆಗಳಿಪ್ಪವು. ಹತ್ತನೆಯ ಬಾಗಿಲಲ್ಲಿ ಸುಜ್ಞಾನವಿಪ್ಪುದು. ಇಂತೀ ಒಂಬತ್ತು ಬಾಗಿಲಂ ಕಳೆದು, ಹತ್ತು ಬಾಗಿಲಂ ತೆಗೆದು, ಒಳಪೊಕ್ಕು ಸುಖಿಯಾಗಿರ್ದನಯ್ಯಾ ಕೂಡಲಚನ್ನಸಂಗಮದೇವಾ ನಿಮ್ಮ ಶರಣ ಸಂಗನಬಸವಣ್ಣ.

೧೦. ಕಾಯವೇ ಶಿವಾಲಯ, ಕಮಳಾದ್ವ ಮಂಟಪವೆ ಸುಖಾಸನ ನೋಡಯ್ಯಾ! ಜ್ಞಾನಾರೂಢ ಪ್ರಾಜ್ಞೇಶ್ವರನೆಂಬಾತನಲ್ಲಿಗೆ ದೇವರು ನೋಡಯ್ಯಾ! ಅಲ್ಲಿಪ್ಪ ಇಂಬಿನ ಮಠಪತಿ ಹಂಸದೇವನೆಂಬಾತನಾ ದೇವರ ಪೂಜಿಸುವ. ತನ್ನ ದಳದುಳಿಯ ನೊಲ್ಲದ ಲಿಂಗವೆ ಗೂಡಾಗಿಪ್ಪನು ಕೂಡಲಚನ್ನಸಂಗಮ ನಿಮ್ಮ ಶರಣ ನಿಶ್ಚಿಂತ ನಿಜ ಲಿಂಗೈಕ್ಯನು.

೧೧. ಲಿಂಗ ಗಂಭೀರನಾದ ಶರಣ ಅಂಗ ವಿಕಾರವನರಿಯನಯ್ಯಾ. ಜಂಗಮ ಸನ್ಮತವಾದ ಶರಣ ಇಂದ್ರಿಯವಿಕಾರವನರಿಯನಯ್ಯಾ. ಲಿಂಗ ಗಂಭೀರನಾಗಿ ಮನ್ಮನದಲ್ಲಿಲೀಯ್ಯವಾಯಿತ್ತು. ಜಂಗಮ ಸನ್ಮತವಾಗಿ ಅವಧಾನವನರಿಯನಯ್ಯಾ ಕೂಡಲಚನ್ನಸಂಗಯ್ಯನಲ್ಲಿ ಐಕ್ಯವಾದ ಮಹಾ ಶರಣ.

ಇಂತೀ ಪ್ರಾಣಲಿಂಗಿಯ ಸ್ಥಲ ಒಂದರಲ್ಲಿ ಷಡ್ವಿಧಲಿಂಗವು ಸಮರಸವನೆಯ್ದುತ್ತಿರಲು ಮುಂದೆ ಶರಣ ಸ್ಥಲವಾದುದು. ಇಂತೀ ಚತುಃಸ್ಥಲಕ್ಕೆ ಸೇರಿದ ವಚನ ೨೩೦ ಕ್ಕ ಗ್ರಂಥ ೮೪ ಕ್ಕಂ ಮಂಗಳಂ

# ಶರಣಸ್ಥಲ.

ಆ ಶರಣನ ತಾಮಸನಿರಸನಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ತಾಮಸ ನಿರಸನಸ್ಥಲ.

೧. ಮಜ್ಜನಕ್ಕೆರೆವುದು ಮಾದ ಬಳಿಕ ಮನ ಮತ್ತೊಂದಕ್ಕೆರಗದಿರಬೇಕು ಪೂಜೆಯ ಮಾಡುವುದು ಮಾದ ಬಳಿಕ ಪರರ ಬೋಧಿಸಲಾಗದು. ಅರ್ಪಿತವ ಮಾಡುವುದು ಮಾದ ಬಳಿಕ ಅಂಗ ಭೋಗಂಗಳ ಮರೆದಿರಬೇಕು. ಇಂತಿದು ಮೀರಿದ ಘನವು ಅಗಮ್ಯವಾಯಿತ್ತು. ಅವನರಿಯಬಾರದಂತಿರಲಂತಿರಲಿ. ನಾ ನೀನೆಂಬ ಭ್ರಮೆಯುಳ್ಳನ್ನಕ್ಕರ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಲೇಬೇಕು. ದ್ವೈತಾದ್ವೈತದಿಂದೆ ಇವ ಮಾಡದಿರ್ದೊಡೆ ನಾಯಕ ನರಕ ತಪ್ಪದಯ್ಯಾ ಕೂಡಲ ಚನ್ನಸಂಗಮದೇವಾ.

೨. ವ್ರತಸ್ಥನರಿವು ಪ್ರಪಂಚದಲ್ಲಿ ಹೋಯಿತ್ತು. ಭಾಷೆವಂತನರಿವು ಸಂಚಲದಿಂದ ಹೋಯಿತ್ತು. ನೇಮಸ್ತನರಿವು ಸಂದೇಹದಿಂದೆ ಹೋಯಿತ್ತು. ಶೀಲವಂತನರಿವು ಸೂತಕದಿಂದೆ ಹೋಯಿತ್ತು. ಜಂಗಮದರಿವು ಬೇಡಿದಲ್ಲಿ ಹೋಯಿತ್ತು. ಭಕ್ತನರಿವು ಮಾಡಿದೆನೆಂದಲ್ಲಿ ಹೋಯಿತ್ತು. ಪ್ರಸಾದಿಯ ಅರಿವು ಇಚ್ಛೈಸಿದಲ್ಲಿ ಹೋಯಿತ್ತು. ಇಂತಿವೆಲ್ಲವು ನಿರ್ಣಯಕ್ಕೆ ಸಲ್ಲದೆ ಹೋದವು. ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಶರಣರೆಂತಪ್ಪರೋ?

೩. ಕಾಣಬಹ ಲಿಂಗಕ್ಕೆ ಅಗ್ಗವಣಿಯ ಕೊಟ್ಟು ವೇಳೆಯಾಯಿತ್ತೆಂಬಿರಿ ಲೋಕಕ್ಕೆಲ್ಲ. ನಿರಾಳಲಿಂಗಕ್ಕೆ ಕೊಡಲರಿಯರು ನೋಡಾ. ಕಂಡವರ ಕಂಡು ಕಂಡೆವೆಂಬಂತೆ, ಉಂಡವರ ಕಂಡು ಉಂಡೆವೆಂಬಂತೆ, ಇದ ಕಂಡು ನಾಚಿತ್ತೆನ್ನ ಮನವು ಕೂಡಲಚನ್ನಸಂಗಮದೇವಾ.

೪. ಅಂಗದಾಪ್ಯಾಯನವಳಿದ ಕಾರಣ ಲಿಂಗ ಲಿಂಗವೆನುತಿರ್ದರು. ಸಂಗದಾಪ್ಯಾಯನವಳಿದ ಕಾರಣ ಜಂಗಮ ಜಂಗಮವೆನುತಿರ್ದರು. ಪರಿಣಾಮ ನೆಲೆಗೊಂಡ ಕಾರಣ ಪ್ರಸಾದ ಪ್ರಸಾದವೆನುತಿರ್ದರು. ಇಂತಿವರೊಳು ಒಂದೊಂದರುವಿಡಿದು ನಾವು ಭಂಗಿತರಾದರು. ಎಲೆ ಕೂಡಲಚನ್ನಸಂಗ ನಿಮ್ಮ ಶರಣ ಸಂಗ ರಹಿತ.

೫. ದೇವ ದಾನವ ಮಾನವರು ಮೊದಲಾದ ಎಲ್ಲ ಜೀವದಲ್ಲಿಯು ಹಿರಿದು ಕಿರಿದೆನ್ನದೆ ನಿದ್ರೆ ಎಂಬಾಹುತಿಯು ಬೀಸಿ ಸರಿಮುಗಿಯಲೊಡನೆ ಅರಿವು ಮರಹಾಯಿತ್ತು. ನೋಟ ಜಾರಿತ್ತು. ಬುದ್ಧಿ ತೊಡೆಯಿತ್ತು. ಜೀವ ಹಾರಿತ್ತು. ದೇಹ ಒರಗಿತ್ತು. ಹೀಗೆ ನಿಚ್ಚ ನಿಚ್ಚ ಬಾಹುದು ಹೋಹುದು ಆರು ಅರಿಯರಯ್ಯಾ! ಕೂಡಲಚನ್ನಸಂಗಮದೇವಾ ನಿಮ್ಮ ಮಾಯಾಸೂತ್ರದ ಹೊಲಬರಿತವರಪೂರ್ವ.

೬. ವಚನದ ರಚನೆಯ ಅನುಭಾವವ ಬಲ್ಲೆವೆಂಬುವರು ನೀವು ಕೇಳಿರೋ. ವಚನವಾವುದು ರಚನೆಯಾವುದು ಅನುಭಾವವಾವುದು ನೀವು ಬಲ್ಲರೆ ಹೇಳಿರೋ. ಅಲ್ಲದಿದ್ದೊಡೆ ಕೇಳಿರೋ ಆತ್ಮ ತೃಪ್ತಿಯನರಿಯಬಲ್ಲಡೆ ವಚನ. ಸ್ಥಾವರ ಜಂಗಮದಲ್ಲಿ ದಯವಾಗಿರಬಲ್ಲಡೆ ವಚನ. ಅರಿಷಡ್ವರ್ಗದಿಚ್ಛೆಗೆ ಹರಿಯದಿರಬಲ್ಲಡೆ ಅನುಭಾವ. ವೇದಶಾಸ್ತ್ರ ಪುರಾಣಾಗಮಂಗಳ ನೋಡಬಲ್ಲಾತ ಜಾಣನಲ್ಲದೆ ಅನುಭಾವಿಯಲ್ಲ. ಅದೇಕೆಂದೊಡೆ ಅವು ಬ್ರಹ್ಮನೆಂಜಲು. ಸತ್ವ ರಜ ತಮವನೊತ್ತಿ ನಿಂದಲ್ಲಿ ಸಹಜ ನೆಲೆಗೊಂಬುವುದು. ಇದನರಿಯದೆ ವೇದಾಭ್ಯಾಸವ ಬಲ್ಲೆನೆಂದು ನುಡಿವ ಗಡಣದವನು ಅನುಭಾವಿಯೇ? ಅಲ್ಲ. ಅವ ಇದಿರ ಮೆಚ್ಚಿಸಿಕೊಂಡು ತನ್ನುದರವ ಹೊರೆವ ಉದರಪೋಷಕನು. ಎನ್ನೊಡೆಯ ಕೂಡಲಚನ್ನಸಂಗಮದೇವಾ ನಿಮ್ಮನುಭಾವಿಯ ನೀವೆಂಬೆನಯ್ಯಾ.

---

ಮುಂದೆ ಶರಣಸ್ಥಲದ ನಿರ್ದೇಶ. ಇಂತೀ ತಾಮಸ ನಿರ್ದೇಶವ ಮಾಡಿದ ಶರಣನ ನಿರ್ದೇಶಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ನಿರ್ದೇಶಸ್ಥಲ

೧. ಲಿಂಗಗ್ರಾಹಕನಾದ ಶರಣನ ಅಂಗ ಗುಣಕ್ಕೆ ವಿರೋಧಿಯಯ್ಯಾ. ಜಂಗಮ ಗ್ರಾಹಕನಾದ ಶರಣ ತೀರ್ಥ ಪ್ರಾಣಾಭಿಮಾನಕ್ಕೆ ವಿರೋಧಿಯಯ್ಯಾ. ಪ್ರಸಾದ ಗ್ರಾಹಕನಾದ ಶರಣ ಜಿಹ್ವೇಂದ್ರಿಯದ ರುಚಿಗೆ ವಿರೋಧಿಯಯ್ಯ. ಇಂತೀ ತ್ರಿವಿಧ ಗ್ರಾಹಕನಯ್ಯಾ ನಿಮ್ಮ ನಿಜ ಶರಣ ಕೂಡಲ ಚನ್ನಸಂಗಮದೇವಾ.

೨. ಏಕೋ ವರ್ಣ ಷಟ್‌ಸ್ಥಲವೆಂದೆಂಬೆನೆ? ಪ್ರಣಮದ ದೃಷ್ಟ ಕಾಣಬಾರದು. ಅಂಗವನು ಲಿಂಗವನು ಮಂತ್ರವನು ಸಂಗ ಸಮರಸವ

ಮಾಡಿ ತೋರಿಸೊಡೆ, ಒಂದೆ ಎಂಬೆನು. ಅದು ಷಟ್‌ಸ್ಥಲವನೊಡಗೂಡಿದ ಲ್ಲವೆ ತೋರದಾಗಿ. ಕೂಡಲಚನ್ನಸಂಗಮದೇವಾ ಈ ನಿರ್ಣಯವನರಿದೊಡೆ, ಅದು ಷಟ್‌ಸ್ಥಲದ ಬ್ರಹ್ಮವೆಂಬೆನಯ್ಯ. ಮತ್ತೆ ಮತ್ತೆಯು ನೀವೆ ನೀವೆ ಎಂದು ನೆರೆ ನಂಬುವೆನಯ್ಯಾ.

೩. ಲಿಂಗವೆಂದರಿದವಂಗೆ ಹಿಂದಿಲ್ಲ. ಜಂಗಮವೆಂದರಿದವಂಗೆ ಮುಂದಿಲ್ಲ. ಇದೇ ಶಿವಾಚಾರದ ತೊಡಕು, ॥ಸಾಕ್ಷಿ॥ ಆತ್ಮ ಪ್ರಕೃತಿನಾಂ ಸ್ವಾಭಾವಯುತೇ ಎಂದುದಾಗಿ, ಇದು ಕಾರಣ ಕೂಡಲಚನ್ನಸಂಗಮ ದೇವನು ಮುಟ್ಟಬಾರದ ಠಾವನು ಮರೆಗೊಂಡಿರ್ದನು.

೪. ಕಣ್ಣೊಳಗೆ ಕಣ್ಣಿದ್ದು, ಕಾಣಲರಿಯರಯ್ಯಾ! ಕಿವಿಯೊಳಗೆ ಕಿವಿ ಇದ್ದು ಕೇಳಲರಿಯರಯ್ಯಾ! ಘ್ರಾಣದೊಳಗೆ ಘ್ರಾಣವಿದ್ದು ಘ್ರಾಣಿಸಲರಿಯರಯ್ಯಾ! ಜಿಹ್ವೆಯೊಳಗೆ ಜಿಹ್ವೆ ಇದ್ದು ರುಚಿಸಲರಿಯರಯ್ಯಾ! ತ್ವಕ್ಕಿನೊಳಗೆ ತ್ವಕ್ಕಿದ್ದು ಸ್ಪರ್ಶನವ ಮಾಡಲರಿಯರಯ್ಯಾ! ಪ್ರಾಣದೊಳಗೆ ಪ್ರಾಣವಿದ್ದು ಪ್ರಾಣನ ಪರಿಯನರಿಯರಯ್ಯಾ! ಕಾಯದೊಳಗೆ ಕಾಯವಿದ್ದು ಬಿಡದು ಬೇರಾಗದು. ಕೂಡಲಚನ್ನಸಂಗಮದೇವಾ ನೀವಿಕ್ಕಿದ ಅಣಕದ ತೊಡಕಿನ ಭೇದವ ಭೇದಿಸಬಾರದಯ್ಯಾ.

೫. ಅರ್ಥೇಷಣ ಪುತ್ರೇಷಣ, ದಾರೇಷಣ ಎಂಬ ಈಷಣತ್ರಯವನೆ ಬಿಟ್ಟು ಮಂಡೆಯ ಬೋಳಿಸಿದ ಬಳಿಕ, ಮರಳಿ ಹೊನ್ನಿಂಗೆರಗಿದೊಡೆ, ಗುರುದ್ರೋಹ. ಹೆಣ್ಣಿಂಗೆರಗಿದೊಡೆ, ಲಿಂಗದ್ರೋಹ. ಮಣ್ಣಿಂಗೆರಗಿದೊಡೆ ಜಂಗಮದ್ರೋಹ. ಆತ ಪೂರ್ವಾಚಾರ್ಯರ ಪೊದ್ದುಗೆಯೆ? ಅಲ್ಲ. ಅದೇಕೆಂದೊಡೆ, ॥ಸಾಕ್ಷಿ॥ ಸ್ಥಾವರಂ ಭಿನ್ನದೋಷಾಣಾಂ। ವ್ರತಭ್ರಷ್ಟೆ ನ ಜಂಗಮಃ। ಉಭಯೋರ್ಭಿನ್ನ ಭಾವೇನ ನಚಾರ್ಚನಂ ನಚವಂದನಂ॥ ಎಂದುದಾಗಿ ಇದು ಕಾರಣ ಕೂಡಲ ಚನ್ನಸಂಗಮನಲ್ಲಿ ಬಸವಣ್ಣನೇ ಭಕ್ತ ಪ್ರಭುವೇ ಜಂಗಮ.

ಮುಂದೆ ಶರಣನ ಆಚಾರಲಿಂಗಸ್ಥಲ. ಇಂತೀ ಶರಣ ಸ್ಥಲವ ಸಂಗಂಗೊಂಡಿಪ್ಪ ಶರಣನ ಆಚಾರ ಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ಆಚಾರಲಿಂಗ ಸ್ಥಲ.

೧. ಭವಿಗಿಕ್ಕ ಬಾರದೆಂಬ ಶೀಲ ಸಂಬಂಧಿಗಳು ಮರಳಿಇಕ್ಕಿದೊಡೆ ಭಾಷೆಗೆ ವ್ರತಗೇಡಿ ಎಂಬುವ ಕಾಕು ಹೊಲೆಯರಿರಾ ನೀವು ಕೇಳಿರೋ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬಾರು ಭವಿಗಳು ತಮ್ಮ ನಾವರಿಸಿಕೊಂಡಿರಲು, ಮತ್ತೆ ಭವಿಗಿಕ್ಕಬಾರದೆಂಬ ಪರಿ ಎಂತೋ? ಭವಿ ಹಿಂಗಿ ಯುಂಗದ ಭವಿಯ ಕಳೆವುದು ಅಭ್ಯಾಸವಲ್ಲದೆ ನಿಜವಲ್ಲ. ಇದು ಕಾರಣ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಅಂತರಂಗದ ಭವಿಯ ಕಳೆವ ಶೀಲವಂತರಪೂರ್ವಯ್ಯಾ. ಅಂತರಂಗ ಬಹಿರಂಗವ ಕಳೆದು ಗುರುಲಿಂಗಜಂಗಮಕ್ಕೆ ಸಕಲ ಪದಾರ್ಥ ಸಲಿಸಿ ಸಂಶಯವಳಿದಿರ ಬಲ್ಲಡೆ ಶೀಲವಂತ ಶರಣನೆಂಬೆನಯ್ಯಾ.

೨. ಘಟ ಸಂಸಾರದಲ್ಲಿ ಪಟಲ ಹರಿವುದೆ? ಜೀವ ಸಂಸಾರವಿಲ್ಲ ದನ್ನಕ್ಕರ ಭವವೆಂತು ಹರಿವುದಯ್ಯಾ? ಅಂಗಭವಿಯನು ಲಿಂಗಭವಿ ಯನು ಕಳೆದುಳಿದಲ್ಲದೆ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಲಿಂಗ ಬಾಹ್ಯ ವ್ರತಭ್ರಷ್ಟ ಭವಿ ಸ್ಥಾವರ ದೀಕ್ಷೆ ಹೊಂದಬಾರದು.

೩. ಶೀಲಶೀಲವೆಂದೊಡೇನು? ಭವಿ ನೋಡಿದ ಮಡಕೆಯನು ಕಳೆವುದು ಶೀಲವೇ? ಕೆರೆಭಾವಿಯ ಕಳೆವುದು ಶೀಲವೇ? ಒಸರುವ ಉದ ಕವ ತಾಹದು ಶೀಲವೇ? ಲಿಂಗಾರ್ಪಿತವ ಮಾಡಿದ ಪ್ರಸಾದವ ಭವಿ ನೋಡಲಿಕ್ಕೆ ಕೊಂಡೊಡೆ ಕಿಲ್ಬಿಷ ಭಾಷೆಗೆ ವ್ರತಗೇಡಿ. ಅಂತಲ್ಲದೆ ಕೊಳ ದಿದ್ದೊಡೆ ಪ್ರಸಾದ ದ್ರೋಹಿ. ಇದು ಕಾರಣವಾಗಿ ನಮ್ಮ ಕೂಡಲಚನ್ನ ಸಂಗಯ್ಯನಲ್ಲಿ ನಿರ್ಣಯವನರಿಯದೆ ಸಂಕಲ್ಪದಿಂದೆ ಕೆಟ್ಟಿತ್ತು ಶೀಲ.

೪. ಭಕ್ತರ ಮಠಕ್ಕೆ ಹೋಗಿ ಒಳಹೊರಗೆಂಬುದು ಶೀಲವೆ? ನಮ್ಮ ಲಿಂಗಕ್ಕೆ ಒಳ್ಳೆ ಅಗ್ಗಣಿಯ ತನ್ನಿ, ಒಳ್ಳೆ ಪುಷ್ಪವ ತನ್ನಿ, ಒಳ್ಳೆ ಓಗರವ ಮಾಡಿ ಎಂಬುದು ಶೀಲವೇ? ಅಲ್ಲಲ್ಲ. ಕೇಳಿ ಭೋ. ಏಕವಾ ಕ್ಯದ ಬೀಭತ್ಸ ಶಬ್ದ ದ್ವಿಗುಣ ತ್ರಿಗುಣ ಪಂಚಭೂತ, ಅರಿಷಡ್ವರ್ಗ, ಸಪ್ತವ್ಯಸನ, ಅಷ್ಟಮದ, ನವಗ್ರಹ, ದಶವಾಯು, ದಶೇಂದ್ರಿಯ ಇಂತಿ

ವನೆಲ್ಲವ ಕೊಂದು ತಿಂದಾತನೆ ಶೀಲವಂತ ನಮ್ಮ ಕೂಡಲಚೆನ್ನಸಂಗ ಮದೇವರಲ್ಲಿ.

೫. ಶೀಲವಂತನಾದೊಡೆ ಪ್ರಪಂಚ ನಾಸ್ತಿಯಾಗಿರಬೇಕು. ಸೀಮೆ ಯಾದೊಡೆ ಪಂಚೇಂದ್ರಿಯಂಗಳು ನಾಸ್ತಿಯಾಗಿರಬೇಕು. ತನ್ನ ಕರ್ತು ವಿನಲ್ಲಿ ಸಕಲ ಸಂಶಯ ನಾಸ್ತಿಯಾದ ಶೀಲಕ್ಕೆ ಭವಂ ನಾಸ್ತಿ ಭವಿ ನಾಸ್ತಿ ಭ್ರಮೆನಾಸ್ತಿ. ಇವು ನಾಸ್ತಿಯಾದಲ್ಲದೆ ನಮ್ಮ ಕೂಡಲಚೆನ್ನಸಂಗ ಯ್ಯನಲ್ಲಿ ಶೀಲವಂತನೆನಿಸಬಾರದು. ಈ ವಂಚನೆಯ ಡಂಭಕ ಅಪ ಸ್ಮಾರಿಗಳಿಗೆಂತಯ್ಯಾ ?

೬. ಶೀಲವಂತರು ಶೀಲವಂತರು ನಾವಿವನರಿಯೆವಯ್ಯಾ. ಅಂಗ ನೆಯರ ಅಧರ ಪಾನ ಉದರಕ್ಕೆ ಹೊಗುವನ್ನಕ್ಕರ ಶೀಲವೆಲ್ಲಿಹದೋ? ಬಾಲರಳಿಯದೆ ಈಷಣ ತ್ರಯವೆಂಬ ಸೊಣಗಂಗಳು ಬೆಂಬತ್ತಿ ಬರುತ್ತಿ ರಲು ಶೀಲವೆಲ್ಲಿಹದೋ? ಚಿತ್ತ ಚಂಚಲವಳಿದು ಮನವು ಮಹದಲ್ಲಿ ನೆಲೆಗೊಂಡುದೇ ಶೀಲ. ಗುರು ಲಿಂಗ ಜಂಗಮವೇ ಪ್ರಾಣವೆಂಬ ಪರಮ ಪರಿಣಾಮ ನೆಲೆಗೊಂಬುದೇ ಶೀಲ. ನಮ್ಮ ಘನ ಗುರು ಜಂಗಮವೇ ಪ್ರಾಣ. ಕೂಡಲಚೆನ್ನಸಂಗಯ್ಯನಲ್ಲಿ ಶೀಲವಂತರು ವ್ರತಸ್ಥರು ನೇಮಸ್ತ ರೆಂಬುವರಪೂರ್ವವಯ್ಯಾ.

೭. ನದಿಯ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು ಮಜ್ಜನಕ್ಕೆ ರೆವ ಶೀಲವಂತರು, ಶುಚಿಯಿಧಾಸಿಗಳಪ್ಪರೆ? ಮದುವೆಗಳಿಯ ಭವಿಪಾಕ ಪರಪಾಕವನೆ ಭುಂಜಿಸುವ ಉದರಪೋಷಕರೆಲ್ಲರು ಶೀಲವಂತರಪ್ಪರೆ? ಅಲ್ಲಲ್ಲವಯ್ಯಾ! ಮತ್ತೆಂತೆಂದೊಡೆ, ಅಶನವರತು ವ್ಯಸನ ಬೆಂದು ಹುಸಿ ಮುಸಣೆಸಿ, ಮಹಾಲಿಂಗದ ವಿಷಯದೊಳಗೆ ತಲ್ಲೀಯವಾಗಿ ಸರ್ವಾಂ ಗವು ಸಮತೆಯಾಗಿರಬಲ್ಲಡೆ, ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಅನ ರಚ್ಚ ಶೀಲವಂತರೆಂಬೆನು. ಅವರೊಕ್ಕುದ ಕೊಂಡು ಸುಖಿಯಾಗಿಪ್ಪೆನಯ್ಯಾ.

ಮುಂದೆ ಶರಣನ ಗುರುಲಿಂಗಸ್ಥಲ. ಇಂತೀಯಾಚಾರ ಲಿಂಗದಲ್ಲಿ ನಿರುತನಾದ ಶರಣನ ಗುರುಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ಗುರುಲಿಂಗಸ್ಥಲ.

೧. ಕಾಲಚಕ್ರ, ಕರ್ಮಚಕ್ರ, ನಾದಚಕ್ರ, ಬಿಂದುಚಕ್ರದೊಳಗೆ ಹುಟ್ಟದ ಯೋನಿ ಇಲ್ಲ. ಮೆಟ್ಟದ ನೆಲನಿಲ್ಲ. ಉಣ್ಣದಾಹಾರವಿಲ್ಲ. ಕಾಣದ ದುಃಖವಿಲ್ಲ. ಇಂತೀ ನಾನಾ ಜನ್ಮದಲ್ಲಿ ನುಗ್ಗು ನುರಿಯಾಗಿ ಬಂದವಂಗೆ, ಪ್ರಾಯಶ್ಚಿತ್ತವಿಲ್ಲದೆ ಗುರುವ ಮುಟ್ಟಬಹುದೆ? ಲಿಂಗವ ನರ್ಚಿಸಬಹುದೆ? ಪ್ರಸಾದವ ಕೊಳಬಹುದೆ? ಕೂಡಲ ಚನ್ನಸಂಗಮ ದೇವಾ ಈ ಹೀಗೆ ತ್ರಿಕರಣ ಶುದ್ಧವಿಲ್ಲದವಂಗೆ ಉಪದೇಶವ ಕೊಟ್ಟ ಗುರುವಿಂಗೆ ನಾಯಕ ನರಕ ತಪ್ಪದು. ಅಂತಪ್ಪ ಪಾಪಿಗೆ ಎಚ್ಚರವ ಕೊಟ್ಟಡೆಯು ಅದೆ ಸರಿ.

೨. ಗುರು ಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯಾ? ಜ್ಯೋತಿಯಿಂದೊದಗಿದ ಜ್ಯೋತಿಯಂತಿರಬೇಕು. ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಮರೀಚಿಕಾ ಜಲದಂತಿರಬೇಕು.

೩. ಗುರು ಬಂದ ಶಿಷ್ಯನ ಕರೆದು ತನ್ನ ಪಾದದ ಮೇಲೆ ಕೆಡಹಿಕೊಂಡಡೆ ನಾಯಕ ನರಕ. ಆವನಿಗೆ ಪ್ರಸಾದವ ತೆಗೆದುಕೋ ಎಂದು ನೀಡಿದೊಡೆ ಅದು ಕಿಲ್ಬಿಷವು. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಬಲ್ಲ ಮಹಾತ್ಮರೊಲ್ಲರು. ವೀರಶೈವ ಸಂಪನ್ನರಾದ ಪರಮ ಸದ್ಭಕ್ತರವರಿಂದೆ ಪಾದೋದಕ ಪ್ರಸಾದವ ಕೊಳ್ಳರು.

---

ಮುಂದೆ ಶರಣನ ಶಿವಲಿಂಗಸ್ಥಲ. ಇಂತೀ ಗುರುಲಿಂಗದಲ್ಲಿ ಆನಂದ ಭರಿತವಾದ ಶರಣನ ಶಿವಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ಶಿವಲಿಂಗಸ್ಥಲ.

೧. ಒಡಲ ಧರ್ಮಂಗಳು ಬಿಡದನ್ನಕ್ಕರ ಎರಡನರಿಯದ ಪೂಜೆಯ ಮಾಡಿಹೆನೆಂಬ ನರಕಿಗಳವರೆತ್ತ ಬಲ್ಲರೋ? ಉದಯದಲಾಚ ಪೂಜೆಯು ಅಸ್ತಮಾನದಲ್ಲಿ ಎಂಜಲೆಂಬ ಭಂಗಿತರ ಮುಖವನೋಡಲಾಗದು. ಅಗ್ನಿ

ಎಂಜಲವನುಂಡು ಲಿಂಗದಲ್ಲಿ ಸ್ವಯವನರಸುವ ಭಂಗಿತರನೇನೆಂಬೆನಯ್ಯಾ ಕೂಡಲ ಚನ್ನಸಂಗಮದೇವಾ?

೨. ನಿಷ್ಠೆಯುಳ್ಳಾತಂಗೆ ನಿತ್ಯ ನೇಮದ ಹಂಗೇಕೆ? ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೋ? ಮನ ಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೋ? ಭಾವ ಶುದ್ಧವುಳ್ಳಾತಂಗೆ ಪುಷ್ಪದ ಹಂಗೇಕೋ? ಕೂಡಲ ಚನ್ನಸಂಗಯ್ಯಾ ನಿಮ್ಮ ನರಿದಾತಂಗೆ ಇದಿರಿಟ್ಟರಿಯಬೇಕೆಂಬ ಹಂಗೇಕೆ?

೩. ಪೂಜಿಸುವನ್ನಕ್ಕರ ಫಲದಾಯಕ ಕಂಡಯ್ಯಾ. ಸಹಜ ಸಂಬಂಧದರಿವು ಹುಟ್ಟದನ್ನಕ್ಕರ ಎರಡೆನಿಸುವುದು. ಗಮನ ನಿರ್ಗಮನವಾಗಿ ಆಶೆ ಆಮಿಷವಳಿಯದನ್ನಕ್ಕರ ಲಿಂಗದ ಪೂಜೆ ಎಲ್ಲಿಹುದೋ? ಘಟದೊಳಗೆ ದಿಟವಾಗಿರ್ದ ಪಂಚಭೂತದ ಹಂಗಳಿದಲ್ಲದೆ ನಮ್ಮ ಕೂಡಲ ಚನ್ನಸಂಗಯ್ಯನ ಮುಟ್ಟಬಾರದು.

೪. ಮಾಯಾಂಗನೆಯ ಸೋಂಕಳಿದಲ್ಲದೆ ಅಂಗ ಲಿಂಗ ಸೋಂಕಲ್ಲವಯ್ಯಾ. ಘಟವು ಸ್ವಯವಾದಲ್ಲದೆ, ಕಾಂಕ್ಷೆಯಲ್ಲವಯ್ಯಾ. ನಿದ್ರೆ ಕವಿದು ಭೂಮಿಗೆ ತಲೆಯಾಗುವುದು ನಿಂದಲ್ಲದೆ ಉತ್ತಮಾಂಗವಲ್ಲವಯ್ಯಾ. ಜಿಹ್ವೇಂದ್ರಿಯವರತಲ್ಲದೆ ಅಮಳೋಕ್ಯವಿಲ್ಲಯ್ಯಾ. ಅನುಭಾವವರತಲ್ಲದೆ ಕಂಠವಲ್ಲವಯ್ಯಾ. ಕೈಯೊಡ್ಡಿ ಕಿಡಿವುದರತಲ್ಲದೆ ಕರಸ್ಥಲವಲ್ಲವಯ್ಯಾ. ಈ ಆರರ ಕುಳವರಿಯದಿರ್ದೊಡೆ ಮುಂದೆ ಬಾಹ ನರಕ ಹಿಂದೆ ಬಾಹುದು ಕಾಣಾ ಅಯ್ಯಾ ಕೂಡಲ ಚನ್ನಸಂಗಮದೇವಾ.

---

ಮುಂಪೆ ಶರಣನ ಜಂಗಮಲಿಂಗಸ್ಥಲ. ಇಂತೀ 'ಶಿವಲಿಂಗದಲ್ಲಿ ಅನಂತ ಸ್ವರೂಪನಾದ ಶರಣನ ಜಂಗಮಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ಜಂಗಮಲಿಂಗಸ್ಥಲ

೧. ತಾಳು ಬೋಳು ಕಪ್ಪರವೆಂತೆಂಬರು. ತಾಳಾವುದು ಬೋಳಾವುದು ಕಪ್ಪರವಾವುದೆಂದರಿಯರು. ಕಾಯದ ಕಳವಳನ ಗುಣವ ತಾಳಬಲ್ಲಡೆ ತಾಳು. ಸಂಸಾರ ವಿಷಯವ ಬೋಳಿಸಬಲ್ಲಡೆ ಬೋಳು. ಪರದಲ್ಲಿ ಪರಿಣಾಮಿಸಬಲ್ಲಡೆ ಕಪ್ಪರ. ಇಂತಿಲ್ಲದಿರ್ದೊಡೆ, ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಡೊಂಬರ ಬೋಳು.

೨. ಆಚಾರವೆಂಬ ಕಪ್ಪುರ ಒಂದು ವಿಚಾರವೆಂಬ ಕಪ್ಪುರ ಒಂದು ಅವಿಚಾರವೆಂಬ ಕಪ್ಪುರ ಒಂದು ಈ ತ್ರಿವಿಧ ಕಪ್ಪುರದೊಳಗೆ ಆಚಾರ ಕಪ್ಪುರವೇ ಲಾಂಛನವ ತೋರಿ ಬೇಡುವರಾಗಿ ಜಡನೆಂಬೆನಯ್ಯಾ. ವಿಚಾರ ಕಪ್ಪುರವೇ ಸೊಮ್ಮು ಸಂಬಂಧವ ತೋರಿ ಬೇಡುವದಾಗಿ, ಹೆಳವನೆಂಬೆನಯ್ಯಾ. ಅವಿಚಾರ ಕಪ್ಪುರವೇ ಸೊಮ್ಮು ಸಂಬಂಧದ ನೇಮ ನಿತ್ಯವೆಂಬ ನಾಮ ಸೀಮೆಯ ತೋರಿ ಬೇಡುವದಾಗಿ ನಿರುಪಾಧಿಕನೆಂಬೆನಯ್ಯಾ ಕೂಡಲಚನ್ನಸಂಗಮದೇವಾ.

೩ ಸಚರಾಚರದ ಚತುರ್ವರ್ಣಾಲಯದೊಳಗೆ ತಿರುಗುವ ವೇಷಧಾರಿಗಳನೆನಗೊಮ್ಮೆ ತೋರದಿರಾ ॥ಸಾಕ್ಷಿ॥ ಆಶಾ ಬದ್ಧತೆ ಲೋಕೇ ಕರ್ಮಣಾಂ ಬಹು ಚಿಂತಯೋಃ ॥ ಆಯು ಕ್ಷೀಣ ನ ಜಾನಾತಿ ವೇಣು ಸೂತ್ರ ವಿಧೀಯತೇ ॥ ಎಂದುದಾಗಿ ಆಸೆಯ ಧಿಕ್ಕರಿಸಿ ನಿರಾಶೆಯ ಪತಿಕರಿಸಿ ಸುಳಿವ ವೇಷವ ಕಂಡಡೆ, ನೀ ಸರಿ ಎಂಬೆನಯ್ಯಾ ಕೂಡಲಚನ್ನಸಂಗಮದೇವಾ.

೪. ತನು ಸ್ವಾಯತವಾದವರ ಸಂಗ ಸ್ವಾಯತದಂತಿಪ್ಪುದಯ್ಯಾ. ಮನ ಸ್ವಾಯತವಾದವರ ಸಂಗ ಜ್ಯೋತಿರ್ಮಯ ಲಿಂಗದಂತಿರ್ಪುದಯ್ಯಾ. ಶಬ್ದ ಸ್ವಾಯತವಾದವರಂಗ ಪೃಥ್ವಿಯಂತಿರ್ಪುದಯ್ಯ. ಈ ತ್ರಿವಿಧವು ಸ್ವಾಯತವಾದವರ ಕಂಡಡೆ, ಗುರುವೆಂಬೆ ಲಿಂಗವೆಂಬೆ ಜಂಗಮವೆಂಬೆ ನಮ್ಮ ಘನಗುರು ಕೂಡಲಚನ್ನಸಂಗಯ್ಯ ತಾನೇ ಎಂಬೆನು.

೫. ಬರೆ ಜಾಳು ಬೋಳರೆಲ್ಲ ಜಂಗಮವೆ? ವೇಷಧಾರಿಗಳೆಲ್ಲ ಜಂಗಮವೆ? ಪಾಶಬದ್ಧ ಪಶುಮತದ ವಿವರಗೇಡಿಗಳೆಲ್ಲ ಜಂಗಮವೇ? ಆಚಾರಭ್ರಷ್ಟರಾದ ಅನಾಚಾರ ಮಿಶ್ರವಾದ ಅಪಸ್ಮಾರಿಗಳೆಲ್ಲ ಜಂಗಮವೇ? ತಾನು ವಿಷಯದೊಳಗೆ ಸಿಲ್ಕಿ ಅಹಂ ನಾನು ನನ್ನದೆಂದು ಮುಂದುವರಿವವರೆಲ್ಲ ಜಂಗಮವೇ? ಲಿಂಗಾಂಗ ಸಂಗ ಸಮರಸವರಿದಾನಂದಿಸುವ ಶಿವಯೋಗೀಶ್ವರರ ನಿಲವನರಿಯದೆ ಮಿಥ್ಯವ ನುಡಿದು ಸ್ತುತಿ ನಿಂದೆಯ ಮಾಡುವವರು ಜಂಗಮವೆ? ನೀತಿಯ ನಿಜವ ಬಿಟ್ಟು ಸತ್ಯ ಸದಾಚಾರವನೊತ್ತಿ ನ್ಯಾಯವ ಮಾಡುವವರು ಜಂಗಮವೆ? ಜಂಗಮ ಜಂಗಮವೆಂದೊಡೆ ನಾಮರೂಪಿಗಳೆಲ್ಲ ಜಂಗಮವೆ? ನಾಮ ಕಲ್ಲು ಮರ ಮೊದಲಾದ ಜಂ ಎಂಬ ಹುಳುವಿಗುಂಟು. ನಿಜ ಜಂಗಮವೆಂತೆಂದೊಡೆ ಹೇಳಿಹೆನು ಕೇಳಿರಣ್ಣಾ. ನಿಜೈಕ್ಯನಾದ ನಿಸ್ಸೀಮನೆ ಜಂ

ಗವು. ಅರಿವು ಆಚಾರ ಸತ್ಕ್ರಿಯೆಯುಳ್ಳೊಡೆ ಜಂಗಮ. ಅಂತಪ್ಪ ಸಚ್ಚಿದಾನಂದ ನಿತ್ಯ ನಿರಂಜನ ಜಂಗಮದ ಸುಳುಹು ಪಾವನ. ಅಂತಪ್ಪ ರಹಸ್ಯ ಬ್ರಹ್ಮವ ತೋರಿಸಿ ಅವರ ಪಾದರಕ್ಷೆಯ ಕಾಯ್ವುದಕ್ಕೆ ಯೋಗ್ಯನ ಮಾಡಿರಿಸಯ್ಯಾ ಎನ್ನ ಕೂಡಲ ಚನ್ನಸಂಗಮದೇವಾ.

---

ಮುಂದೆ ಶರಣನ ಪ್ರಸಾದಲಿಂಗಸ್ಥಲ. ಇಂತೀ ಜಂಗಮಲಿಂಗದಲ್ಲಿ ಆನಂದ ಸ್ವರೂಪವಾದ ಶರಣನ ಪ್ರಸಾದಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ಪ್ರಸಾದಲಿಂಗಸ್ಥಲ

೧. ಓಗರವ ಪ್ರಸಾದವ ಮಾಡಕೊಂಬೆನಾಗಿ ಪ್ರಸಾದವ ಓಗರವ ಮಾಡಿಕೊಂಬೆನಾಗಿ ಆತ ಪ್ರಸಾದಿಯು ಪ್ರಸಾದಿ. ಶಬ್ದ ಸ್ಪರ್ಶ ರೂಪು ರಸ ಗಂಧ ಸಹಿತವಾಗಿ ಜಂಗಮಾರ್ಪಿತವ ಮಾಡಿಕೊಂಬನಾಗಿ, ಆತ ಜಂಗಮ ಪ್ರಸಾದಿ. ಸಪ್ತವ್ಯಸನ ಅಷ್ಟಮದ ಮೊದಲಾದ ಗುಣವನಳಿದನಾಗಿ ಆತ ಗುರುಪ್ರಸಾದಿ. ಇದು ಕಾರಣ ಕೂಡಲ ಚನ್ನಸಂಗಮದೇವಾ ನಿಮ್ಮ ಪ್ರಸಾದಿಗಳ ಪ್ರಸಾದಿಗೆ ನಮೋ ನಮೋ ಎಂಬೆನಯ್ಯಾ.

೨. ನವ ಖಂಡ ಮಂಡಲ ಹದಿನಾಲ್ಕು ಭುವನವೆಂಬುವದೊಂದು ಗ್ರಾಮ. ಪಂಚಭೂತ ಚತುಃಕರಣಂಗಳುಳ್ಳ ಕಾಯದೊಳಗೆ ಸ್ಥೂಲವಾವುದು ಸೂಕ್ಷ್ಮವಾವುದು ಬಲ್ಲರೆ ಹೇಳಿರೋ. ಕಾಲಚಕ್ರ, ಕರ್ಮಚಕ್ರ, ನಾದಚಕ್ರ, ಬಿಂದುಚಕ್ರವೆಂಬ ನಾಲ್ಕು ಚಕ್ರದೊಳಗೆ ಆವುದು ಘನವೆಂಬೆನಾವುದು ಕಿರಿದೆಂಬುದ ನೀವು ಬಲ್ಲರೆ ಹೇಳಿರೋ. ಶುದ್ಧ, ಸಿದ್ಧ ಪ್ರಸಿದ್ಧವೆಂದು ಹೆಸರಿಟ್ಟುಕೊಂಡು ನುಡಿವಿರಿ. ಓಗರವಾವ ಕಡೆಯುಲು ಪ್ರಸಾದವಾವ ಕಡೆಯುಲು ಇಕ್ಕಿದ ರಾಟಳ ತುಂಬುತ್ತಂ ಕೆಡಹುತ್ತಂ ಅಂತಲ್ಲದೆ ರಾಟಳ ಮುರಿದು ಸೂತ್ರ ಹರಿದು ಶೂನ್ಯವಾದೊಡೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆತನೆ ಮಹಾ ಪ್ರಸಾದಿ ಎಂಬೆನು.

೩. ಅನಾದಿಯ ಸ್ಥಳಕುಳದಲ್ಲಿ ಗುರು ಸನ್ಮತವಾದ ಪ್ರಸಾದಿ ದೇಹ ಗುಣವಳಿದು ಉದರಾಗ್ನಿ ತಲೆದೋರದಿರ್ದೊಡೆ, ಸಕಲ ಸನ್ಮತವಾದ ಪ್ರಸಾದಿ. ಮನ ಬುದ್ಧಿ ಚಿತ್ತ ಅಹಂಕಾರ ಸನ್ಮತವಾದ ಪ್ರಸಾದಿ.

ಶಬ್ದ ಸ್ಪರ್ಶ ರೂಪು ರಸ ಗಂಧವೆಂಬ ಪಂಚೇಂದ್ರಿಯವು ಸನ್ನಿತವಾದ ಪ್ರಸಾದಿ, ಇದು ಕಾರಣವಾಗಿ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಸರ್ವ ಸನ್ನಿತವಾದ ಪ್ರಸಾದಿ.

೪. ರೂಪು ವಿಕಾರಿಗಳಿಗಿನ್ನಾಗದಯ್ಯಾ. ರುಚಿ ವಿಕಾರಿಗಳಿಗಿನ್ನಾಗ ದಯ್ಯಾ. ಮನದ ರಚನೆಯ ನುಡಿವವರಿಗಿನ್ನಾಗದಯ್ಯಾ. ಈ ತ್ರಿವಿಧವ ಮೊದಲನರಿಯದ ಅಸಂಬಂಧಿಗಳಿಗಾಗದಯ್ಯಾ. ಈ ತ್ರಿವಿಧದಲ್ಲಿ ವೈಮ ರೆದವರಿಗೆ ನಿಮ್ಮ ಪ್ರಸಾದ ಸಾಧ್ಯವಾಗದಯ್ಯಾ ಕೂಡಲ ಚನ್ನಸಂಗಮ ದೇವಾ.

೫. ಗುರು ಮುಟ್ಟಿ ಬಂದುದು ಪ್ರಸಾದವೆಂಬೆನೆ? ಎನ್ನೆ. ಅದೇನು ಕಾರಣವೆಂದೊಡೆ ಆಶೆ ಆಮಿಷಕ್ಕೊಳಗಾದ ಕಾರಣ. ಲಿಂಗವಿಲ್ಲದ ಜಂಗಮ ಜಂಗಮವಿಲ್ಲದ ಲಿಂಗ ಲಿಂಗಜಂಗಮವೆಂಬ ಭಯವ ಕಳೆ ದುಳಿದ ಪರಮ ಪ್ರಸಾದಿಯ ತೋರಿಸಯ್ಯಾ ಎನಗೆ ಕೂಡಲಚನ್ನಸಂ ಗಮದೇವಾ.

೬. ॥ಸಾಕ್ಷಿ॥ ಉಭೌ ಕಾಮ ಉಭೌ ಭಕ್ತಿ ಉಭೌ ನಾಶ್ರಮ ನಾಶ್ರಮಃ ಎಂದುದಾಗಿ ಉಭಯ ಲಿಂಗ ಪ್ರಸಾದವನರಿಯದೆ ಉಭ ಯಂಗಳೊಳಗಾಯಿತ್ತು. ಉಭಯ ನಾಮದ ಮೇಲೆ, ನಾಮವಾದು ದನು ದೇವ ಪೂಜಕರಿಗರಿಯಬಾರದು ಕೂಡಲ ಚನ್ನಸಂಗಯ್ಯ ನಿಮ್ಮ ಪ್ರಸಾದಿಗಲ್ಲದೆ ಮತ್ತಾರಿಗೆಯು ತಿಳಿಯದು.

೭. ಒಮ್ಮೆಯಲ್ಲದೆ ಇಮ್ಮೆಯುಂಟೆ ಪೂಜೆ? ಒಮ್ಮೆಯಲ್ಲದೆ ಇಮ್ಮೆ ಯುಂಟೆ ಅರ್ಪಿತ? ಒಮ್ಮೆಯಲ್ಲದೆ ಇಮ್ಮೆಯುಂಟೆ ಪ್ರಸಾದ? ತನುವ ರ್ಪಿತವಾದ ಬಳಿಕ ಮರಳಿ ಮರಳಿ ಅರ್ಪಿತ ಉಂಟೆ ಅಯ್ಯಾ ಕೂಡ ಲಚನ್ನಸಂಗಮದೇವಾ?

ಶರಣನ ಮಹಾಲಿಂಗಸ್ಥಲ. ಇಂತೀ ಪ್ರಸಾದಲಿಂಗದಲ್ಲಿ ಆನಂದ ಸ್ವರೂಪನಾದ ಶರಣನ ಮಹಾಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಶರಣನ ಮಹಾಲಿಂಗಸ್ಥಲ

೧. ತ್ರಿವಿಧಕ್ಕೆ ರತಿಯಾಗಿ, ತ್ರಿವಿಧದ ನಿಜವ ತಿಳಿದು, ತ್ರಿವಿಧ ವನವಗ್ರಹಿಸಿ ತ್ರಿವಿಧ ಪದವ ಮೀರಿ ತ್ರಿವಿಧ ನಿರ್ಣಯದಲ್ಲಿ ನಿಷ್ಪತ್ತಿ ಯಾದ ಕೂಡಲಚನ್ನಸಂಗ ನಿಮ್ಮ ಶರಣ.

೨. ಓಲೆಯನಿಕ್ಕಿದ ಬಾಲೆಯ ಓಲೆಯ ಕಳೆಯದಿನ್ನೆಂತೋ? ಓಲೆ ಇರ್ದರ್ಡ ಯೋಗ ವ್ಯರ್ಥವಾಯಿತ್ತೆಲ್ಲರಿಗು. ಓಲೆಯು ಹೋಯಿತ್ತು. ಬಾಲೆಯು ಹೋಯಿತ್ತು. ಓಲೆಯ ಬಾಲೆಯ ಕೀಲ ಬಲ್ಲವರ ನಮ್ಮ ಕೂಡಲಚನ್ನಸಂಗಯ್ಯನೆಂಬೆನು.

೩. ಲಿಂಗ ಲಿಂಗವೆಂಬಲ್ಲಿಯೇ ತಪ್ಪಿತ್ತು. ಜಂಗಮ ಜಂಗಮವೆಂ ಬಲ್ಲಿಯೇ ತಪ್ಪಿತ್ತು. ಪ್ರಸಾದ ಪ್ರಸಾದವೆಂಬಲ್ಲಿಯೇ ತಪ್ಪಿತ್ತು. ಈ ತ್ರಿವಿಧ ಸಂಚದ ರಹಸ್ಯದ ಸಿಕ್ಷೇಪವನರಿಯದೆ ಈ ಲೋಕದಲ್ಲಿರ್ದಡೇನು? ಆ ಲೋಕದಲ್ಲಿರ್ದಡೇನು? ಮತ್ತಾ ಲೋಕದಿಂದ ಈ ಲೋಕಕ್ಕೆ ಬಂದ ಡೇನು? ಮತ್ತೆ ಹದಿನಾಲ್ಕು ಲೋಕದಲ್ಲಿ ಚರಿಸಿದಡೇನು? ಭೂ ಪ್ರದ ಕ್ಷಿಣೆಯ ಮಾಡಿದಡೇನು? ಸಂಸಾರವ ಬಿಟ್ಟಡೇನು? ನಿಸ್ಸಂಸಾರಿಯಾ ದಡೇನು? ಲಿಂಗ ಭೋಗೋಪಭೋಗಿಯಾದ ನಿಜ ಸಾರಾಯ ನಿರಾಳ ಘನ ಮಹಿಮ ಶರಣಂಗೆಣೆ ಏನಯ್ಯಾ ಕೂಡಲಚನ್ನಸಂಗಮದೇವಾ?

೪. ಸಮತೆ ಸುಯಿಧಾನದ ಶರಣಂಗೆ ಅರಿವು ಮರವೆಯುಂಟೆ? ಉಪಮೆಗೆ ಸ್ಥಲವಾದ ಶರಣಂಗೆ ಶಬ್ದ ಸಂದಣಿಯುಂಟೆ? ಅಖಂಡ ಲಿಂಗಕ್ಕೆ ಅಪ್ರಮಾಣ ಶರಣಂಗೆ ಸೀಮೆಯುಂಟೆ? ಸಂಶಯ ಸಂಕ ಲ್ಪದ ಸಂದು ಸಂಬಂಧದ ಬಂಧ ಉಂಟೆ? ಎಲೆಲೆ ಕೂಡಲ ಚನ್ನಸಂಗ ಭವವಿಲ್ಲ ಬಂಧನವಿಲ್ಲ. ಜವನಿಕೆ ಎಂಬುವುದು ಮುನ್ನಿಲ್ಲವಯ್ಯ.

೫. ಗ್ರಾಮದ ಪದಗತಿಯನರಿಯರು. ಆ ಗ್ರಾಮಕ್ಕೆ ಗುರುವಾ ವುದೆಂದರಿಯರು. ಗ್ರಾಮದ ಕಾರಣವಿದ್ದಲ್ಲಿ ನಿಶ್ಚಟವಾವುದೆಂದರಿಯರು. ಇದನರಿದು ಮರೆದು ನಿಂದೊಡೆ, ನಮ್ಮ ಕೂಡಲಚನ್ನಸಂಗಯ್ಯ ಲಿಂಗೈ ಕ್ಯವು.

೬. ಲಿಂಗಸ್ಥಲ ಲಿಂಗಸ್ಥಲದಲ್ಲಿಯೇ ನಿಂದಿತ್ತು. ಜಂಗಮಸ್ಥಲ ಜಂಗಮಸ್ಥಲದಲ್ಲಿಯೇ ನಿಂದಿತ್ತು. ಪ್ರಸಾದಸ್ಥಲ ಪ್ರಸಾದಸ್ಥಲದಲ್ಲಿಯೇ ನಿಂದಿತ್ತು ಇಂತೀ ತ್ರಿವಿಧಸ್ಥಲ ತ್ರಿವಿಧಸ್ಥಲದಲ್ಲಿಯೇ ನಿಂದಿತ್ತು. ಕೂಡಲ ಚನ್ನಸಂಗ ನಿಮ್ಮ ಶರಣಂಗೆ.

ಇಂತೀ ಐದಕ್ಕೆ ಸೇರಿದ ವಚನ ೨೮೧ ಕ್ಕಂ ಗ್ರಂಥ ೮೬ ಕ್ಕಂ ಮಂಗಳ ಮಹಾ ಶ್ರೀ.

# ಐಕ್ಯಸ್ಥಲ

ಐಕ್ಯತಾಮುಸನಿರಸನಸ್ಥಲ. ಆ ಸ್ಥಲದನುಭಾವದ ವಚನ.

## ಐಕ್ಯತಾಮುಸನಿರಸನ ಸ್ಥಲ

೧. ಹಸಿವರತಲ್ಲದೆ, ಪ್ರಸಾದಿಯಲ್ಲ. ತೃಷೆಯರತಲ್ಲದೆ ಪಾದೋದಕಿಯಲ್ಲ. ನಿದ್ರೆಯರತಲ್ಲದೆ ಭವ ವಿರಹಿತನಲ್ಲ. ಅನಲ ಪವನ ಗುಣ ವರತಲ್ಲದೆ ಜನನ ಮರಣ ವಿರಹಿತನಲ್ಲ. ಇದು ಕಾರಣ ಕೂಡಲ ಚನ್ನ ಸಂಗಯ್ಯನಲ್ಲಿ ಎಲ್ಲರಿಗೆಲ್ಲಿಯದೊ ಲಿಂಗೈಕ್ಯವು?

೨. ಲಿಂಗಸ್ಥಲ ನಾಸ್ತಿಯಾದಲ್ಲದೆ ಭಕ್ತನಲ್ಲ. ಜಂಗಮ ಸ್ಥಲ ನಾಸ್ತಿಯಾದಲ್ಲದೆ ಶರಣನಲ್ಲ. ಗುರುಸ್ಥಲ ನಾಸ್ತಿಯಾದಲ್ಲದೆ ಐಕ್ಯನಲ್ಲ. ಇದು ಕಾರಣ ಕೂಡಲ ಚನ್ನಸಂಗಮದೇವಾ ಭಕ್ತಿ ಕೆಟ್ಟು ಭವಿಯಾದಲ್ಲದೆ ಲಿಂಗೈಕ್ಯನಲ್ಲ.

೩. ಅಂಜಿಕೆಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ. ಎಂಜಲುಳ್ಳನ್ನಕ್ಕರ ಪ್ರಸಾದಿಯಲ್ಲ. ಸೂತಕವುಳ್ಳನ್ನಕ್ಕರ ಶರಣನಲ್ಲ. ಈ ತ್ರಿವಿಧವುಳ್ಳನ್ನಕ್ಕರ ಲಿಂಗೈಕ್ಯನಲ್ಲ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ.

೪. ಗುರುಲಿಂಗಜಂಗಮದೆಡೆಯಲ್ಲಿ ಹುಸಿವನ್ನಕ್ಕರ ಭಕ್ತನಲ್ಲ. ಹುರುಡುವಿಡಿದಾತ ಮಹೇಶ್ವರನಲ್ಲ. ಪದಾರ್ಥದ ಪೂರ್ವವನರಿವನ್ನಕ್ಕರ ಪ್ರಸಾದಿಯಲ್ಲ. ಕಲೆಯುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ. ಸತಿಯುಳ್ಳನ್ನಕ್ಕರ ಶರಣನಲ್ಲ. ಪತಿಯುಳ್ಳನ್ನಕ್ಕರ ಐಕ್ಯನಲ್ಲ. ಇಂತೀ ಷಟುಸ್ಥಲದ ಸಕೀಲವನರಿಯಬಲ್ಲಡೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಸದ್ಭಕ್ತರಿಗಳವಲ್ಲ ಸಹಜದೊಡೆಯರಿಗಲ್ಲದೆ.

೫. ಹೊನ್ನುಳ್ಳಾತ ಭಕ್ತನಲ್ಲ. ಹೆಣ್ಣುಳ್ಳಾತ ಶರಣನಲ್ಲ. ಮಣ್ಣುಳ್ಳಾತ ಲಿಂಗೈಕ್ಯನಲ್ಲ. ಹೊನ್ನುಜೀವ ಹೆಣ್ಣುಪ್ರಾಣ ಮಣ್ಣುದೇಹ ಹೊನ್ನು ಭವಿ ಹೆಣ್ಣು ಭವ ಮಣ್ಣು ಹಮ್ಮು ಈ ತ್ರಿವಿಧ ಸ್ಥಲವಪೂರ್ವ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ.

೬. ಅರುಹಿಲ್ಲದ ಕಾರಣ ಭವಕ್ಕೆ ಬಂದರು. ಅರುಹಿಲ್ಲದವಂಗೆ ಆಚಾರವಿಲ್ಲ ಆಚಾರವಿಲ್ಲದವಂಗೆ ಗುರುವಿಲ್ಲ. ಗುರುವಿಲ್ಲದವಂಗೆ ಲಿಂಗ

ವಿಲ್ಲ. ಲಿಂಗವಿಲ್ಲದವಂಗೆ ಜಂಗಮವಿಲ್ಲ. ಜಂಗಮವಿಲ್ಲದವಂಗೆ ಪಾದ ತೀರ್ಥಪ್ರಸಾದವಿಲ್ಲ. ಪಾದ ತೀರ್ಥ ಪ್ರಸಾದವಿಲ್ಲದವಂಗೆ ಗಣತ್ವವಿಲ್ಲ. ಅರಿವು ಸಾಹಿತ್ಯ ಆಚಾರ, ಆಚಾರಸಾಹಿತ್ಯ ಗುರು, ಗುರು ಸಾಹಿತ್ಯ ಲಿಂಗ, ಲಿಂಗಸಾಹಿತ್ಯ ಜಂಗಮ, ಜಂಗಮ ಸಾಹಿತ್ಯ ಪ್ರಸಾದ, ಪ್ರಸಾದ ಸಾಹಿತ್ಯ ಗಣತ್ವ, ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಇವಷ್ಟು ಒಂದುಗೂಡಿದವರಲ್ಲಿ ಎಲ್ಲ ಸ್ಥಲ ಉಂಟು ಅನಿಷ್ಕಳ ಲಿಂಗೈಕ್ಯ ಆತ ಅಪೂರ್ವ.

ಮುಂದೆ ಐಕ್ಯನ ನಿರ್ದೇಶಸ್ಥಲ. ಆ ಸ್ಥಲದನುಭಾವದ ವಚನ.

## ಐಕ್ಯನ ನಿರ್ದೇಶಸ್ಥಲ.

೧. ಆಚಾರದರಿವು ಆಗಮವ ಕೂಡಿಕೊಂಡಿತ್ತು. ಗುರುಮಾರ್ಗದಾಚಾರದರಿವು ನೈಷ್ಠೆಯ ಕೂಡಿಕೊಂಡಿತ್ತು. ಲಿಂಗಾಚಾರದರಿವು ಕ್ರಿಯೆಯ ಕೂಡಿಕೊಂಡಿತ್ತು. ಸಮಯಾಚಾರದರಿವು ನಿಃಕ್ರಿಯೆಯ ಕೂಡಿಕೊಂಡಿತ್ತು. ಈ ಚತುರ್ವಿಧದೊಳಗೆ ಆವಂಗವು ಅಲ್ಲ. ಘನಗುರು ಕೂಡಲ ಚನ್ನಸಂಗಮದೇವಾ ನಿಮ್ಮ ಶರಣನ ಪರಿ ಬೇರೆ.

೨. ಭಕ್ತನಾದೊಡೆ ಕಿಂಕರ ಕಿಂಕರನಾಗಿರಬೇಕು. ಮಾಹೇಶ್ವರನಾದೊಡೆ ಆದಿಯನಾದಿಯನರಿದಿರಬೇಕು. ಪ್ರಸಾದಿಯಾದೊಡೆ ಒಡಲೊಳಗಣ ದುರ್ಗುಣವಿರಹಿತನಾಗಿರಬೇಕು. ಪ್ರಾಣಲಿಂಗಿಯಾದೊಡೆ ಬಾಹ್ಯವಿಚಾರವಿಲ್ಲದಿರಬೇಕು. ಶರಣನಾದೊಡೆ ನಿಃಸಂಗಿಯಾಗಿರಬೇಕು. ಐಕ್ಯನಾದೊಡೆ ಬಯಲು ಬಯಲಾಗಿರಬೇಕು. ಇಂತೀ ಸ್ಥಲ ಭೇದವನರಿದಲ್ಲದೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಸುಸಂಗವೇದ್ಯನೆನಿಸಬಾರದು.

೩. ಭಕ್ತನಾದೊಡೆ ಭಕ್ತಿಸ್ಥಲವನರಿತು ಅರಿಯದಂತಿರಬೇಕು. ಮಾಹೇಶ್ವರನಾದೊಡೆ ನಿಷ್ಠೆಯನರಿತು ಅರಿಯದಂತಿರಬೇಕು. ಪ್ರಸಾದಿಯಾದೊಡೆ ಪ್ರಸಾದಿ ಸ್ಥಲವನರಿತು ಅರಿಯದಂತಿರಬೇಕು. ಪ್ರಾಣಲಿಂಗಿಯಾದೊಡೆ ಅಂತಃಸ್ಥಿತಿಯನರಿತು ಅರಿಯದಂತಿರಬೇಕು. ಶರಣನಾದೊಡೆ ಸತಿ ಪತಿ ಎಂದರಿತು ಅರಿಯದಂತಿರಬೇಕು. ಐಕ್ಯನಾದೊಡೆ ತಾನು ತಾನಾಗಿ ಹೆರೆ ಹಿಂಗದಂತಿರಬೇಕು. ಇಂತೀ ಷಟ್ಸ್ಥಲದ ನಿರ್ಣಯವ

ನಿಶ್ಚೈಸಿ ನಿರ್ಧರಿಸದೆ ನಾನು ಬಲ್ಲೆ ತಾನು ಬಲ್ಲೆನೆಂಬ ಲಜ್ಜೆಗೆಟ್ಟ ಲಾಂಛನಧಾರಿಗಳನೇನೆಂಬೆನಯ್ಯ ಕೂಡಲಚನ್ನಸಂಗಮದೇವಾ?

೪. ಲಿಂಗಸ್ಥಲವಿಲ್ಲದವರ ಭಕ್ತರೆಂಬೆ. ಗುರುಸ್ಥಲವಿಲ್ಲದವರ ಶಿಷ್ಯರೆಂಬೆ. ಪ್ರಸಾದಿಸ್ಥಲವಿಲ್ಲದವರ ಜಂಗಮವೆಂಬೆ. ಈ ತ್ರಿವಿಧ ಸ್ಥಲವಿಲ್ಲದವರ ಶರಣರೆಂಬೆ. ಇದು ಕಾರಣವಾಗಿ ಪ್ರಭುವೆ ಕೂಡಲ ಚನ್ನಸಂಗಮದೇವರಲ್ಲಿ ಭವಿ ಸಾಹಿತ್ಯವಿದ್ದಾತನ ಭಕ್ತರೆಂಬೆ ಪರವು ಲಿಂಗೈಕ್ಯರೆಂಬೆನು.

೫. ಆದಿಯಾಧಾರವಾಗಿಹುದೆ ಘನ. ಆ ಘನ ವೇಧಿಸಿಹುದೆ ಮನ. ಆ ಮನವು ಮಹದಲ್ಲಿ ನಿಂದುದೆ ಭಕ್ತಿ. ಭಿನ್ನಭಾವದಿಚ್ಛೆ ತಲೆದೋರ ದಿಹುದೆ ಆಚಾರ. ತಟ್ಟು ಮುಟ್ಟು ತಾಗು ನಿರೋಧವಿಲ್ಲದಿಹುದೆ ಪೂಜೆ. ಆಶೆ ರೋಷವಿಲ್ಲದಿಹುದೆ ಪ್ರಸಾದ. ಕರಣ ಮಥನವಿಲ್ಲದಿಹುದೆ ಅನ ಭಾವ. ಇಂತೀ ಸರ್ವಾಂಗದಲ್ಲಿ ಸರ್ವಾಚಾರ ಸನ್ನಿಹಿತವಾದ ನಿಜ ಲಿಂಗೈಕ್ಯಂಗೆ ನಮೊ ನಮೊ ಎಂಬೆನಯ್ಯಾ ಕೂಡಲಚನ್ನಸಂಗಮದೇವಾ.

೬. ಗ್ರಾಮಮಧ್ಯದ ಧವಳಾರದೊಳಗೊಂದು ಸತ್ತ ಹೆಣನಿರುತ್ತಿರಲು ಆ ಗ್ರಾಮವ ಸುತ್ತಿ ಬರುತಿರ್ದ ರಕ್ಕಸಿ ಕಂಡಳಲ್ಲ. ಈ ಗ್ರಾಮ ನನ್ನ ಕಾವಲು. ಈ ಗ್ರಾಮದಲ್ಲಿ ನಾನಿಪ್ಪೆ. ಇದಾರು ಕೊಂದವನಾರು? ಕೊಲ್ಲವ ಮುನ್ನ ಅದು ತಾ ಸತ್ತಂದು ನನಗಿದು ಕರ ಸೋಜಿಗವೆಂದು ಈ ಸತ್ತದು ಗ್ರಾಮವ ಕೆಡಿಸಿತ್ತು. ಇನ್ನಿದ್ದರೆ ಎನ್ನನು ಕೆಡಿಸಿತ್ತು. ಇಲ್ಲಿದ್ದವರಿಗೆಯು ಉಪಟಳ ನೋಡಾ ಎಂದು ಆ ಗ್ರಾಮವ ಬಿಟ್ಟು ಹೋಯಿತ್ತಯ್ಯ ಕೂಡಲ ಚನ್ನಸಂಗಮದೇವಾ.

೭. ಸತ್ತ ಹೆಣನ ಹೊತ್ತವರಿಲ್ಲ. ಆಶ್ಚರ್ಯಗೊಂಡರು ನೋಡಾ. ಹೊತ್ತವರೆಲ್ಲ ಸತ್ತುದ ಕಂಡು ಮೂರ್ಛೆಗತವಾದರಲ್ಲ. ಸತ್ತು ಬಂದವರೆಲ್ಲ ಹೋಗಿ ಅದ ಮುಟ್ಟಲಮ್ಮರು ನೋಡಾ. ಮುಟ್ಟದೆ ಮುವ್ವರ ಎಡ್ಡಿಸಿತ್ತು. ಸತ್ತ ಪರಿಯ ನೋಡಾ. ಅದು ಕಾಡಿನಲ್ಲಿ ಅರಿಯದು. ಕಿಚ್ಚಿನಲ್ಲಿ ಬೇಯದು. ತಾ ಸತ್ತ ಪರಿಯ ನೋಡಯ್ಯ. ಕೂಡಲ ಚನ್ನಸಂಗಯ್ಯನೆಂಬ ಮನದ ನೆನಹಿನ ಚಿಂತೆ ಸತ್ತ ಪರಿಯ ನೋಡಾ.

೮. ಶರಣ ಸತ್ತರೆ ಭಕ್ತರು ಹೊತ್ತರು ಪ್ರಸಾದಿಗಳತ್ತರಲ್ಲ ಸುತ್ತಲಿರ್ದ ಜಂಗಮವೆಲ್ಲ ಕಿಚ್ಚ ಹಿಡಿದರು ಊರೊಳಗಿರ್ದವರೊಂಬತ್ತು

ಬಾಗಿಲವ ತುಂಬಿಕೊಂಡಿರ್ದರು ನೋಡಾ. ಮರಳಿ ಒಂದು ಬಾಗಿಲವ ತೆರೆದು ನೋಡಿ ಸತ್ತುದ ಕಂಡು ಅತ್ತರು. ಅತ್ತವರು ಸತ್ತರೆಂದು ಆ ಸತ್ತವರೆಲ್ಲ ಬಾಹದ ಕಂಡು ಅತ್ತವರು ಎತ್ತಲೆಯಾದರು. ನಮ್ಮ ಕೂಡಲ ಚನ್ನಸಂಗಯ್ಯ ಸತ್ತು ಸ್ವಯವಾದ.

೯. ದೃಷ್ಟ ನಷ್ಟವಾದುದಕ್ಕೇನು ದೃಷ್ಟ? ಅನುಭಾವ ನಷ್ಟವಾದುದೇ ದೃಷ್ಟ. ಆ ಅನುಭಾವ ನಷ್ಟವಾದುದಕ್ಕೇನು ದೃಷ್ಟ? ಸ್ವಯ ಪರವೆನ್ನದುದೆ ದೃಷ್ಟ. ಸ್ವಯ ಪರವೆನ್ನದುದಕ್ಕೇನು ದೃಷ್ಟ? ಕ್ಷಮೆ ದಮೆ ನಯನುಡಿ ಭಯಭಕ್ತಿ ಕರಣ ಕಿಂಕುರ್ವಾಣದಿಂದೆ ಸಹಿತವಾದುದೆ ದೃಷ್ಟ. ಕ್ಷಮೆ ದಮೆಯಾಗಿ ನಿಹಿತವಾದುದಕ್ಕೇನು ದೃಷ್ಟ? ಘನಮಹಾಲಿಂಗವೆನಿಸುವ ಕೂಡಲ ಚನ್ನಸಂಗನೆಂದು ಎನ್ನದಿಹುದೇ ದೃಷ್ಟ.

---

ಇಂತು ಐಕ್ಯ ಸ್ಥಲವನಂಗಂಗೊಂಡಿಪ್ಪ ಸಮರಸ ಸಂಪನ್ನಂಗೆ ಸರ್ವಾಂಗವನು ಲಿಂಗವು ಹೇಗೆ ಬೆರಸಿಪ್ಪುದೆಂದೊಡೆ ಮುಂದೆ ಐಕ್ಯನ ಆಚಾರಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಐಕ್ಯನ ಆಚಾರಲಿಂಗಸ್ಥಲ

೧. ಆಹಾರ ನಾಸ್ತಿಯಾದುದೆ ಗುರು. ಗುರು ನಾಸ್ತಿಯಾದುದೆ ಲಿಂಗ. ಕಾಯಗುಣ ನಾಸ್ತಿಯಾದುದೆ ವಿಭೂತಿ. ಕರಣ ಗುಣ ನಾಸ್ತಿಯಾದುದೆ ರುದ್ರಾಕ್ಷಿ. ಮರಹು ನಾಸ್ತಿಯಾದುದೆ ಮಂತ್ರ. ಇಂತೀ ಪಂಚಾಚಾರ ಪ್ರತಿಷ್ಠೆಯುಳ್ಳಾತನೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಸದಾಚಾರ ಸಂಪನ್ನನೆನಿಸುವನು.

---

ಮುಂದೆ ಐಕ್ಯನ ಗುರುಲಿಂಗಸ್ಥಲ. ಇಂತೀ ಆಚಾರಲಿಂಗದಲ್ಲಿ ಸಮರಸ ಸಂಪನ್ನನಾದ ಐಕ್ಯನ ಗುರುಲಿಂಗಸ್ಥಲ. ಆ ಸ್ಥಲದನುಭಾವದ ವಚನ.

## ಐಕ್ಯನ ಗುರುಲಿಂಗಸ್ಥಲ

೧. ಅರ್ಪಿತವೆಂದೊಡೆ ಅನರ್ಪಿತವಾಯಿತ್ತು. ಅನರ್ಪಿತವೆಂದೊಡೆ ಅರ್ಪಿತವಾಯಿತ್ತು. ಗುರುವೆಂದೊಡೆ ಶಿಷ್ಯನಾಯಿತ್ತು. ಶಿಷ್ಯನೆಂದೊಡೆ

ಗುರುವಾಯಿತ್ತು. ಗುರು ಶಿಷ್ಯ ಸಂಬಂಧವೆಂಬ ಪ್ರತಿಬಿಂಬದ ಭಾವವುಳ್ಳನ್ನಕ್ಕರ ಮಹಾಲಿಂಗೈಕ್ಯವೆಲ್ಲಿಯದೊ ಕೂಡಲ ಚನ್ನಸಂಗಮದೇವಾ?

೨. ಗುರು ಕಾರುಣ್ಯವ ಪಡೆದೆವೆಂಬುವರು ನೀವು ಕೇಳಿ ಭೋ. ಒಬ್ಬ ನಾದಿಹೆನೆಂಬ. ಮತ್ತೊಬ್ಬ ಒಬ್ಬ ರಿಚ್ಚೆಗಾದಿಹೆನೆಂಬ. ಇವರಿಬ್ಬರು ಪಿಂಡ ಭೋಗಿಗಳು. ಭಕ್ತಂಗೆ ಆಗೆಯು ಇಲ್ಲ, ಚಾಗೆಯು ಇಲ್ಲ, ಸರ್ವ ದ್ರವ್ಯವನು ಗುರುವಿಗೊಪ್ಪಿಸಿದನಾಗಿ. ॥ಸಾಕ್ಷಿ॥ ಗುರುದ್ರವ್ಯಾಭಿಲಾಷೇನ। ನ ಪೂಜಾಸನ ವಂಚಕಂ। ಪ್ರಚೋದ್ಯೋನಿರಾಕರಣಂ। ಬ್ರಹ್ಮ ಬ್ರಹ್ಮೇತಿ ರಾಕ್ಷಸಃ। ಎಂದುದಾಗಿ ಗುರು ದ್ರವ್ಯವನಪಹರಿಸಲಾಗದು. ಗುರುದ್ರವ್ಯವಾವುದೆಂದಡೆ ದೇಹಿಕ ದ್ರವ್ಯ ಭೌತಿಕದ್ರವ್ಯ ಆತ್ಮದ್ರವ್ಯ ಇಂದ್ರಿಯ ದ್ರವ್ಯ ಜ್ಞಾನ ದ್ರವ್ಯವೆಂಬ ಪಂಚದ್ರವ್ಯವನು ಉಭಯವಳಿದು ಷೋಡಶೋಪಚಾರದಲ್ಲರ್ಪಿಸಬಲ್ಲಡೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆತನೆ ಗುರುಭಕ್ತನು.

---

ಮುಂದೆ ಐಕ್ಯನ ಶಿವಲಿಂಗಸ್ಥಲ. ಇಂತೀ ಗುರುಲಿಂಗದಲ್ಲಿ ಸಮರಸ ಸಂಪನ್ನನಾದ ಐಕ್ಯನ ಶಿವಲಿಂಗಸ್ಥಲ. ಆ ಸ್ಥಲದನುಭಾವಹ ವಚನ.

## ಐಕ್ಯನ ಶಿವಲಿಂಗಸ್ಥಲ.

೧. ಲಿಂಗವೆಂದು ಪೂಜಿಸಿದೊಡೆ ಅಂಗದೊಡನುಳಿಯಿತ್ತು. ಅಂಗದೊಡನುಳಿವ ಲಿಂಗವ ಹಿಂಗಿ ಪೂಜಿಸಬೇಕು. ಹಿಂಗದ ಪೂಜೆಯನರಿದೊಡೆ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯನೆನಿಸುವನು.

೨. ಹೊತ್ತರಿಯ ಪೂಜೆ ಹಗಲಿನ ಪೂಜೆ ಎಂದು ನಿಚ್ಚ ನಿಚ್ಚ ಪೂಜೆಯ ಮಾಡಿ ಆಶ್ಚರ್ಯಗೊಂಡರೆಲ್ಲರು. ನಿರಾಳ ನಿರಂಜನ ನಿಷ್ಕಲಿಂಗವ ಹೊತ್ತಿಗೆ ತರಲುಂಟೆ? ಹೊತ್ತನೆ ಪೂಜಿಸಿ ಹೊತ್ತನೆ ಅರ್ಚಿಸಿ ಇತ್ತಲೆಯಾದರೆಲ್ಲರು. ನಿಶ್ಚಿಂತವನರಿದ ನಿಜ ಶರಣ ಧನವಂ ಮರೆದು ಚಿತ್ತ ಸಮಾಧಾನವಾಗಿ ॥ಸಾಕ್ಷಿ॥ ದಿವಪೂಜಯೋರ್ಲಿಂಗಂ। ರಾತ್ರಿರ್ನ ಪೂಜಯಂತಿ ಸಂತತ ಪೂಜಯೋರ್ಲಿಂಗಂ। ದಿವಾರಾತ್ರಿ ವಿವರ್ಜಯೇತ್॥ ಎಂದುದಾಗಿ ನಮ್ಮ ಕೂಡಲ ಚನ್ನಸಂಗಯ್ಯನೆಂಬ ಲಿಂಗ ನಿಶ್ಚಿಂತ ನಿಜೈಕ್ಯವು.

$$\frac{950}{6779}$$